# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 416 |
| ಸದಸ್ಯರ ಹೆಸರು | : | ಶ್ರೀಮತಿ ಬಲ್ಕೀಸ್ ಬಾನು (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 19.08.2026. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಗ್ರಾಮ ಠಾಣಾ ಎಂದರೇನು; (ಸುತ್ತೋಲೆ ಅಥವಾ ಆದೇಶದ ಪ್ರತಿಯನ್ನು ನೀಡುವುದು) ಗ್ರಾಮ ಠಾಣಾ ವ್ಯಾಪ್ತಿಯ ಸ್ವತ್ತುಗಳು ಇ-ಖಾತಾ ವಿತರಣೆಗೆ ಅನುಸುರಿಸುವ ಪ್ರಕ್ರಿಯೆ ಏನು; | ಭೂ ಮಾಪನ ಇಲಾಖೆಯ ಸರ್ವೆ ಮ್ಯಾನುವಲ್ (Karnataka Revenue Survey Manual, Vol-1) ರಂತೆ ಗ್ರಾಮ ಠಾಣಾ ಎಂದರೆ ಹಳ್ಳಿಯ (ಗ್ರಾಮದ) ಜಾಗ (Village Site) ಎಂದಿರುತ್ತದೆ.<br><br>ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ತೆರಿಗೆ, ದರ ಮತ್ತು ಶುಲ್ಕಗಳು) ನಿಯಮಗಳು, 2025 ರ ನಿಯಮ 2(28) ರ ಅನ್ವಯ; 'ಗ್ರಾಮಠಾಣಾ (Settlement)" ಮೋಜಿಣಿಗೆ ಒಳಪಡಿಸದ (Un-surveyed) ವಾಸದ ನಿವಾಸಗಳನ್ನು ಹೊಂದಿರುವ ಅಥವಾ ಹೊಂದಿದ್ದ, ಗ್ರಾಮದ ಗಡಿ ರೇಖೆಯೊಳಗಿನ ಜನವಸತಿ ಪ್ರದೇಶದಲ್ಲಿನ ನಿವೇಶನ ಕಟ್ಟಡಗಳು.<br><br>ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ತೆರಿಗೆ, ದರ ಮತ್ತು ಶುಲ್ಕಗಳು) ನಿಯಮಗಳು, 2025 ರ ನಿಯಮ 5 ರನ್ವಯ ಗ್ರಾಮಠಾಣಾ ವ್ಯಾಪ್ತಿಯ ಸ್ವತ್ತುಗಳಿಗೆ ನಮೂನೆ -11ಎ ವಿತರಣೆ ಪ್ರಕ್ರಿಯೆಯನ್ನು ಅಧಿಸೂಚಿಸಲಾಗಿರುತ್ತದೆ.<br><br>ನಿಯಮಗಳ ಪ್ರತಿಯನ್ನು ಅನುಬಂಧ-1 ರಲ್ಲಿ ನೀಡಿದೆ. |
| (ಆ) | ಗ್ರಾಮ ಠಾಣಾ ವ್ಯಾಪ್ತಿಯ ಸ್ವತ್ತುಗಳಿಗೆ ಇ-ಖಾತಾ ನೀಡಲು ನಮೂನೆ-9ರ ವಹಿಯನ್ನು ಮಾಲೀಕತ್ವ ದೃಢೀಕರಣಕ್ಕೆ ಪರಿಗಣಿಸಲಾಗುತ್ತದೆಯೇ; ಇಲ್ಲದೆ ಇದ್ದಲ್ಲಿ, ಯಾವ ದಾಖಲೆಗಳನ್ನು ಪರಿಗಣಿಸಲಾಗುತ್ತದೆ; | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) (ತಿದ್ದುಪಡಿ) ನಿಯಮಗಳು, 2025 ರ ನಿಯಮ-28(1) ಅನ್ವಯ ಪ್ರತಿಯೊಂದು ಗ್ರಾಮ ಪಂಚಾಯಿತಿಯು ಅಧಿನಿಯಮದ ಪ್ರಕರಣ 1998 ಹಾಗೂ 1990 ಗಳಿಗನುಗುಣವಾಗಿ ಭೂಮಿ ಮತ್ತು ಕಟ್ಟಡಗಳಿಗೆ ತೆರಿಗೆ ಬೇಡಿಕೆಯನ್ನು ನಿರ್ಧರಿಸಿ ವಸೂಲಿ ಮಾಡುವ ಉದ್ದೇಶದಿಂದ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ತೆರಿಗೆಗೆ ಒಳಪಡುವ ಆಸ್ತಿ ವಿವರಗಳ ಸಂಪೂರ್ಣ ವಿವರಗಳು, 30, ಉಪಕರ, ವಸೂಲಾತಿಯ ವಿವರಗಳು ಇತ್ಯಾದಿಗಳನ್ನು ನಮೂನೆ 9 ರಲ್ಲಿ ನಿರ್ವಹಿಸತಕ್ಕದ್ದು ಎಂದು ನಮೂದಿಸಲಾಗಿರುತ್ತದೆ. ಸದರಿ ನಮೂನೆಯು ಮಾಲೀಕತ್ವದ ದೃಢೀಕರಣವಾಗಿರದೆ ತೆರಿಗೆ ಪಾವತಿಸುವ ಬಗ್ಗೆ ಅಧಿಭೋಗದಾರಿಕೆಯನ್ನು ದೃಢೀಕರಿಸುತ್ತದೆ. |

| | | |
|---|---|---|
| (ಇ) | ನಮೂನೆ-9 ರ ವಹಿಯು ಕಳೆದ ಹೋದ ಅಥವಾ ನಾಶವಾದ ಸಂದರ್ಭದಲ್ಲಿ ಯಾವ ರೀತಿಯಲ್ಲಿ ಮಾಲೀಕತ್ವ ಮತ್ತು ಅಳತೆಯನ್ನು ದೃಢೀಕರಿಸಿಕೊಳ್ಳಲಾಗುತ್ತದೆ; | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) (ತಿದ್ದುಪಡಿ) ನಿಯಮಗಳು, 2025 ರ ನಿಯಮ 7 ರ ಅನ್ವಯ ನಮೂನೆ -9, ನಮೂನೆ -11ಎ ಮತ್ತು ನಮೂನೆ -11ಬಿ ರಲ್ಲಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ತೆರಿಗೆಗೆ ಒಳಪಡುವ ಆಸ್ತಿ ವಿವರಗಳನ್ನು ತಂತ್ರಾಂಶದಲ್ಲಿ ನಿರ್ವಹಿಸುವ ಬಗ್ಗೆ ಅಧಿಸೂಚಿಸಲಾಗಿರುವುದರಿಂದ ನಮೂನೆ -9 ಅನ್ನು ವಿತರಣೆ ಮಾಡದೆ ಇರುವ ಕಾರಣ ನಮೂನೆ -9 ಕಳೆದು ಹೋಗುವ ಅಥವಾ ನಾಶವಾಗುವ ಸಂದರ್ಭಗಳು ಇರುವುದಿಲ್ಲ.<br><br>ಮುಂದುವರೆದು, ನಮೂನೆ-9 ನಮೂನೆ-11ಎ ಮತ್ತು ನಮೂನೆ-11ಬಿ ಸೃಜಿಸಲು ಡಾಟಾ ಬೇಸ್ ಆಗಿರುತ್ತದೆ. ನಮೂನೆ-9 ಅನ್ನು ವಿತರಿಸತಕ್ಕದ್ದಲ್ಲ. |
| (ಈ) | ಗ್ರಾಮ ಠಾಣಾ ವ್ಯಾಪ್ತಿಯಲ್ಲಿನ ಸ್ವತ್ತುಗಳ ಗಡಿ ಮತ್ತು ಚಕ್ಕುಬಂದಿಯನ್ನು ಗುರುತಿಸಲು ಅನುಸರಿಸುವ ವಿಧಾನ ಯಾವುದು? | ಗ್ರಾಮ ಠಾಣಾ ವ್ಯಾಪ್ತಿಯಲ್ಲಿನ ಸ್ವತ್ತುಗಳ ಗಡಿ ಮತ್ತು ಚಕ್ಕುಬಂದಿಯನ್ನು ಗುರುತಿಸಲು ಈ ಕೆಳಕಂಡ ಸುತ್ತೋಲೆಗಳ ಅನ್ವಯ ಕ್ರಮವಹಿಸಲಾಗುತ್ತದೆ.<br><br>ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಜಂಟಿ ಸುತ್ತೋಲೆ ಸಂಖ್ಯೆ: ಗ್ರಾಅಪ/64/ಇ-ಆಡಳಿತ/2021,ದಿನಾಂಕ:18.10.2021 ಹಾಗೂ ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಜಂಟಿ ಸುತ್ತೋಲೆ ಸಂಖ್ಯೆ: ಗ್ರಾಅಪ/64/ಇ-ಆಡಳಿತ/2020, ದಿನಾಂಕ: 19.08.2023<br><br>ಸುತ್ತೋಲೆಗಳ ಪ್ರತಿಗಳನ್ನು ಅನುಬಂಧ-2 ರಲ್ಲಿ ನೀಡಿದೆ. |

**ಸಂಖ್ಯೆ:** ಗ್ರಾಅಪ 770 ಗ್ರಾಪಂಅ 2026

(ಈಶ್ವರ ಬಿ. ಖಂಡ್ರೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೪ಎ<br>Part – IVA | ಬೆಂಗಳೂರು, ಶುಕ್ರವಾರ ೧೭, ಅಕ್ಟೋಬರ್, ೨೦೨೫ (ಆಶ್ವಯುಜ, ೨೫, ಶಕವರ್ಷ, ೧೯೪೭)<br>BENGALURU, FRIDAY 17, OCTOBER, 2025 (AASHWAYUJA, 25, SHAKAVARSHA, 1947) | ಸಂ. ೬೬೨<br>No. 662 |


**ಕರ್ನಾಟಕ ಸರ್ಕಾರ**

**ಸಂಖ್ಯೆ: RDPR 422 GPA 2025**

**ಕರ್ನಾಟಕ ಸರ್ಕಾರದ ಸಚಿವಾಲಯ,**
**ಬಹುಮಹಡಿ ಕಟ್ಟಡ,**
**ಬೆಂಗಳೂರು, ದಿನಾಂಕ:17.10.2025**

## ಅಧಿಸೂಚನೆ

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಪ್ರಕರಣ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ ಪ್ರಕರಣ 66, 67, 70, 97, 199 ಎ, 199ಬಿ, 199ಸಿ, 200, 201 ಮತ್ತು 202ನೇ ಪ್ರಕರಣಗಳೊಂದಿಗೆ ಓದಿಕೊಂಡಂತೆ ಪ್ರಕರಣ 311ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ತೆರಿಗೆ, ದರ ಮತ್ತು ಫೀಜುಗಳು) ನಿಯಮಗಳು, 2025ರ ಕರಡನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:RDPR 422 GPA 2025, ದಿ:04.07.2025ರ ಮೂಲಕ ಮಾಹಿತಿಗಾಗಿ ದಿನಾಂಕ:04.07.2025ರ ಕರ್ನಾಟಕ ರಾಜ್ಯ ಪತ್ರದ ವಿಶೇಷ ರಾಜ್ಯ ಪತ್ರಿಕೆಯ ಭಾಗ-IV ಎ ರಲ್ಲಿ ಪ್ರಕಟಿಸಿ, ಸದರಿ ನಿಯಮಗಳಿಂದ ಬಾಧಿತರಾಗಿರಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ಪ್ರಕಟಣೆಯ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಸಲ್ಲಿಸಲು ಅಹ್ವಾನಿಸಲಾಗಿದ್ದರಿಂದ;

ಮತ್ತು ದಿನಾಂಕ:04.07.2025ರಂದು ಸದರಿ ರಾಜ್ಯ ಪತ್ರವನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಸದರಿ ಕರಡು ನಿಯಮಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಾರ್ವಜನಿಕರಿಂದ ಬಂದ ಆಕ್ಷೇಪಣೆ/ಸಲಹೆಗಳನ್ನು ಪರಿಗಣಿಸಿರುವುದರಿಂದ;

ಪ್ರಸ್ತುತ 1993ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ (1993ರ ಕರ್ನಾಟಕ ಅಧಿನಿಯಮ, 14) ಪ್ರಕರಣ 66, 67, 68, 69, 70, 97, 199, 199ಬಿ ಮತ್ತು 199ಸಿ, 200, 201 ಮತ್ತು 202ನೇ ಪ್ರಕರಣಗಳೊಂದಿಗೆ ಓದಿಕೊಂಡಂತೆ ಪ್ರಕರಣ 311 ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡಂತೆ ನಿಯಮಗಳನ್ನು ರಚಿಸುತ್ತದೆ; ಏನೆಂದರೆ,-

# ನಿಯಮಗಳು
## ಅಧ್ಯಾಯ-1
## ಪ್ರಾರಂಭಿಕ

1. **ಹೆಸರು ಮತ್ತು ಪ್ರಾರಂಭ. -(1)** ಈ ನಿಯಮಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ತೆರಿಗೆ, ದರ ಮತ್ತು ಶುಲ್ಕಗಳು) ನಿಯಮಗಳು, 2025 ಎಂದು ಕರೆಯತಕ್ಕದ್ದು.

   **(2)** ಈ ನಿಯಮಗಳು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ.

2. **ಪರಿಭಾಷೆಗಳು.** -ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, -

   **(1)** "**ಅಧಿನಿಯಮ**"ಎಂದರೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 (ಕರ್ನಾಟಕ ಅಧಿನಿಯಮ ಸಂಖ್ಯೆ14);

   **(2)** "**ಅದಿಭೋಗದಾರ**" ಎಂದರೆ ಯಾವುದೇ ಕಟ್ಟಡ ಅಥವಾ ಖಾಲಿ ಭೂಮಿಯನ್ನು ಅದರ ಮಾಲೀಕನಿಂದ ಚಾಲ್ತಿಯಲ್ಲಿರುವ ಕಾನೂನಿಗನುಗುಣವಾಗಿ ಬಾಡಿಗೆ ಅಥವಾ ಗುತ್ತಿಗೆ ಅಥವಾ ಬಾಡಿಗೆ ರಹಿತವಾಗಿ ಬಳಸುತ್ತಿರುವ ಅಥವಾ ಅನುಭವದಲ್ಲಿರುವ ಮತ್ತು ಅದಕ್ಕೆ ತಗಲುವ ಬಾಡಿಗಯನ್ನು ನಿಬಂಧನೆಗೊಳಪಟ್ಟು ಪಾವತಿಸುತ್ತಿರುವ ವ್ಯಕ್ತಿಯನ್ನು ಒಳಗೊಂಡಿರತಕ್ಕದ್ದು;

   **(3)** "**ಕೈಗಾರಿಕಾ ಕಟ್ಟಡ**" ಎಂದರೆ ಯಂತ್ರಗಳ ಮೂಲಕ ಉಗಿ, ನೀರು, ತೈಲ, ಅನಿಲ, ವಿದ್ಯುತ್ ಅಥವಾ ಯಾವುದೇ ಇತರೆ ರೀತಿಯ ಇಂಧನ ಶಕ್ತಿಯ ಸಹಾಯದಿಂದ ನಡೆಸುವ ಕೈಗಾರಿಕೆ, ಉತ್ಪಾದನಾ ಘಟಕ, ತಯಾರಿಕಾ ಘಟಕಗಳು,

   **(4)**"**ಕೃಷಿ ಆಧಾರಿತ ಉತ್ಪಾದನಾ ಘಟಕಗಳ ಕಟ್ಟಡ**"ಎಂದರೆ ಕೃಷಿ ಆಧಾರಿತ ಉತ್ಪಾದನಾ ಘಟಕಗಳು, ವಾಣಿಜ್ಯ ಉದ್ದೇಶದ ಪುಷ್ಪೋದ್ಯಮ, ವಾಣಿಜ್ಯ ಉದ್ದೇಶದ ನರ್ಸರಿ ಅಥವಾ ತತ್ಸಮಾನ ಪ್ರಕ್ರಿಯೆಯನ್ನು ನಡೆಸಲಾಗುವ ಇತರೆ ಕಟ್ಟಡಗಳು;

   **(5)**"**ಕೋಷ್ಟಕ**"ಎಂದರೆ ಈ ನಿಯಮಗಳಿಗೆ ಲಗತ್ತಿಸಿರುವ ಕೋಷ್ಟಕ;

   **(6)**"**ಖಾಲಿ ಜಮೀನು**" ಎಂದರೆ ವಸತಿ, ವಾಣಿಜ್ಯ, ವಸತಿಯೇತರ, ಕೈಗಾರಿಕೆ ಮತ್ತು ಇತರೆ ಉದ್ದೇಶದ ಯಾವುದೇ ಕಟ್ಟಡ ಸಾಮಗ್ರಿಗಳನ್ನು ಒಳಗೊಂಡಿರುವ ರಚನೆಯನ್ನು ಹೊಂದಿರದ ಹಾಗೂ ಪಾರ್ಕಿಂಗ್ ಅಥವಾ ಸ್ಕ್ಯಾಕ್‌ಯಾರ್ಡ್ ಮತ್ತು ರನ್‌ವೇಗಾಗಿ ಬಳಸದ ಖಾಲಿ ಜಾಗವಾಗಿರುವ ಭೂಮಿ;

   **(7)**"**ತೆರಿಗೆ**" ಎಂದರೆ ಅಧಿನಿಯಮದ ಪ್ರಕರಣ 199ನೇ ಪ್ರಕರಣದ ಮೇರೆಗೆ ಗ್ರಾಮ ಪಂಚಾಯಿತಿ ಪ್ರದೇಶದ ಪರಿಮಿತಿಯಲ್ಲಿ ಖಾಲಿ ಜಮೀನು ಅಥವಾ ನಿವೇಶನ ಅಥವಾ ಕಟ್ಟಡ ಅಥವಾ ಅವೆರಡರ ಮೇಲೆ ಅಥವಾ ನಿರ್ಮಿತ ರಚನೆಗಳ ಮೇಲೆ ನಿಯಮಿಸಬಹುದಾದಂತೆ ವಿಧಿಸಬಹುದಾದ ಕರಗಳನ್ನು ಒಳಗೊಂಡಿರತಕ್ಕದ್ದು;

(8) **"ದರ"** ಎಂದರೆ ಈ ಅಧಿನಿಯಮದ ಪ್ರಕರಣ 199ನೇ (2) ನೇ ಉಪ-ಪ್ರಕರಣದ ಮೇರೆಗೆ ಸರಬರಾಜು ಸೇವೆಗಳಿಗೆ ನಿಯಮಿಸಬಹುದಾದಂತೆ ವಿಧಿಸಬಹುದಾದ ದರಗಳನ್ನು ಒಳಗೊಂಡಿರತಕ್ಕದ್ದು;

(9) **"ನಮೂನೆ"** ಎಂದರೆ ಈ ನಿಯಮಗಳಿಗೆ ಲಗತ್ತಿಸಿರುವ ನಮೂನೆ;

(10) **"ಅನುಬಂಧ"** ಎಂದರೆ ಈ ನಿಯಮಗಳಿಗೆ ಲಗತ್ತಿಸಿರುವ ಅನುಬಂಧ;

(11) **"ನಿವೇಶನ"** ಎಂದರೆ ವಸತಿ, ವಾಣಿಜ್ಯ, ವಸತಿಯೇತರ, ಕೈಗಾರಿಕಾ ಉದ್ದೇಶಕ್ಕಾಗಿ ವಿಭಾಗಗಳಾಗಿ ವಿಂಗಡಿಸಲಾದ, ನಿರ್ಮಿತ ಪ್ರದೇಶದ ಜಾಗ ಹಾಗೂ ಯಾವುದೇ ಕಟ್ಟಡವನ್ನು ಕಟ್ಟಿರದ ವಿವಿಧ ಆಕಾರದ ಖಾಲಿ ಭೂಮಿ;

(12) **"ನಿರ್ಮಿತ ಪ್ರದೇಶ"** ಎಂದರೆ ನಿವೇಶನದ ಒಳಗೆ ಕಾನೂನು ಬದ್ಧವಾಗಿ ಬಿಡಬೇಕಾದ ಪ್ರದೇಶವನ್ನು ಹೊರತುಪಡಿಸಿ ನಿರ್ಮಿಸಿದ ಕಟ್ಟಡ, ನೆಲ ಮಾಳಿಗೆ, ಬಾಲ್ಕನಿ, ಗ್ಯಾರೇಜ್, ಈಜುಕೊಳ, ಮೇಲಂತಸ್ತು ಸೇರಿದಂತೆ ಒಟ್ಟು ನಿರ್ಮಿತ ಅಥವಾ ರಚನೆಯುಳ್ಳ ಪ್ರದೇಶ;

(13) **"ಪ್ರಕರಣ"** ಎಂದರೆ ಅಧಿನಿಯಮದ ಪ್ರಕರಣ;

(14) **"ಶುಲ್ಕ"** ಎಂದರೆ ಅಧಿನಿಯಮದ ಪ್ರಕರಣ 199ನೇ (3) ನೇ ಉಪ-ಪ್ರಕರಣದ ಮೇರೆಗೆ ಗ್ರಾಮ ಪಂಚಾಯಿತಿಯ ಶಾಸನಬದ್ಧ ಅಧಿಕಾರಗಳಿಗನುಗುಣವಾಗಿ ನಿಯಮಿಸಬಹುದಾದಂತೆ ವಿಧಿಸ ಬಹುದಾದ ಶುಲ್ಕಗಳನ್ನು ಒಳಗೊಂಡಿರತಕ್ಕದ್ದು;

(15) **"ಮಾಲೀಕ"** ಎಂದರೆ ಯಾವುದೇ ಆಸ್ತಿಯ ಮೇಲೆ ಸಂಪೂರ್ಣ ಮಾಲೀಕತ್ವ ಹೊಂದಿರುವ ಅಥವಾ ಇತರರ ಆಸ್ತಿಯ ಮಾಲೀಕರಿಂದ ಚಾಲ್ತಿಯಲ್ಲಿರುವ ಕಾನೂನಿನನ್ವಯ ಆಸ್ತಿಯ ಮೇಲಿನ ಒಡೆತನವನ್ನು ಪಡೆದ, ಯಾವುದೇ ಖಾಲಿ ಭೂಮಿ ಅಥವಾ ಕಟ್ಟಡದಲ್ಲಿ ತತ್ಕಾಲದಲ್ಲಿ ಬಾಡಿಗೆಯನ್ನು ಸ್ವೀಕರಿಸುತ್ತಿರುವ ಅಥವಾ ಸ್ವೀಕರಿಸಲು ಹಕ್ಕುಳ್ಳ ವ್ಯಕ್ತಿಯನ್ನು ಒಳಗೊಂಡಿರತಕ್ಕದ್ದು;

(16) **"ಮೌಲ್ಯಾಧಾರಿತ ವರ್ಗೀಕರಣ" ಎಂದರೆ** ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 199 ರಲ್ಲಿ ನಿರ್ದಿಷ್ಟಪಡಿಸಿರುವಂತೆ, ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಟ್ಟಡಗಳು ಮತ್ತು ಖಾಲಿ ಭೂಮಿಗಳ ಮೇಲೆ ಕರ್ನಾಟಕ ಮುದ್ರಾಂಕ ಅಧಿನಿಯಮ'1957 (1957ರ ಕರ್ನಾಟಕ ಅಧಿನಿಯಮ ಸಂಖ್ಯೆ: 34) ರ 45ಬಿ ಪ್ರಕರಣದಡಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ಕಾಲ ಕಾಲಕ್ಕೆ ಪ್ರಕಟಿಸುವ ಮಾರ್ಗಸೂಚಿ ಮಾರುಕಟ್ಟೆ ದರಗಳನ್ವಯ ನಿರ್ಧರಿಸುವ ಮೌಲ್ಯದ ಆಧಾರದ ಮೇಲೆ ಮಾಡುವ ಪ್ರದೇಶವಾರು ವರ್ಗೀಕರಣ;

(17) **"ವರ್ಷ"** ಎಂದರೆ ಏಪ್ರಿಲ್ ಮೊದಲನೇ ದಿನದಂದು ಪ್ರಾರಂಭವಾಗಿ ಮುಂದಿನ ವರ್ಷದ ಮಾರ್ಚ್ 31ನೇ ದಿನದಂದು ಮುಕ್ತಾಯವಾಗುವ ಆರ್ಥಿಕ ವರ್ಷ.

(18) **"ವಸತಿ ಕಟ್ಟಡ"** ಎಂದರೆ ಸಾಮಾನ್ಯ ಪ್ರದೇಶವನ್ನು ಒಳಗೊಂಡಂತೆ ಮಾನವ ವಾಸ ಸ್ಥಳಕ್ಕಾಗಿ ಸಂಪೂರ್ಣವಾಗಿ ಬಳಸುವ ನಿರ್ಮಿತ ಕಟ್ಟಡ, ಅಪಾರ್ಟ್‌ಮೆಂಟ್, ಫ್ಲಾಟ್, ವಿಲ್ಲಾ, ವಿಲ್ಲಾಮೆಂಟ್, ಟೆನಾಮೆಂಟ್, ಗೇಟೆಡ್ ಕಮ್ಯೂನಿಟಿ, ರೋ ಹೌಸ್ ಮತ್ತು ಬಹು ಮಾಲೀಕತ್ವದ ಕಟ್ಟಡಗಳು;

(19)**"ವಾಣಿಜ್ಯ ಕಟ್ಟಡ"** ಎಂದರೆ ಯಾವುದೇ ಪ್ರದೇಶ ಅಥವಾ ಅದರ ಭಾಗವನ್ನು ವ್ಯಾಪಾರದ ಮಳಿಗೆ, ಉತ್ಪನ್ನಗಳನ್ನು ಸಗಟು ಅಥವಾ ಚಿಲ್ಲರೆ ಮಾರಾಟ ಮಾಡುವ ಕಟ್ಟಡ.

ಎಂದರೆ, ಅಂಗಡಿ, ಮಾರುಕಟ್ಟೆ, ಪೆಟ್ರೋಲ್ ಬಂಕ್, ಗ್ಯಾಸ್ ಫಿಲ್ಲಿಂಗ್ ಸ್ಟೇಷನ್, ರೆಸ್ಟೋರೆಂಟ್, ಹೋಟೆಲ್, ಚಿತ್ರಮಂದಿರಗಳು, ಕಲ್ಯಾಣ ಮಂಟಪಗಳು, ಕ್ಯಾಂಟೀನ್, ಕಾಫಿ/ಟೀ ಶಾಪ್. ಬೇಕರಿ. ಹಾಲಿನ ಕೇಂದ್ರ, ಐಸ್‌ಕ್ರೀಂ ಪಾರ್ಲರ್, ಕೂಲ್‌ಡ್ರಿಂಕ್ಸ್ ಮತ್ತು ಹಣ್ಣಿನ 'ಜ್ಯೂಸ್ ಸೆಂಟರ್. ಮಿನರಲ್ ವಾಟರ್ ಪೂರೈಕೆ, ಪಾನ್ ಬೀಡಾ ಅಂಗಡಿ, ಹಣ್ಣಿನ ಅಂಗಡಿಗಳು, ತರಕಾರಿ ಅಂಗಡಿಗಳು, ಕಾಫಿ ವರ್ಕ್ಸ್, ಮಸಾಲ ಪೌಡರ್, ಉಪ್ಪಿನಕಾಯಿ, ಹಪ್ಪಳ, ಸಂಡಿಗೆ ಮಾರಾಟದ ಅಂಗಡಿ, ಮಾಂಸ, ಕೋಳಿ ಮತ್ತು ಮೀನು ಮಾರಾಟ, ವೈನ್ ಸ್ಟೋರ್, ಬಾರ್ ಅಂಡ್ ರೆಸ್ಟೋರೆಂಟ್, ಬ್ಯಾಂಕುಗಳು, ವಸತಿ ಗೃಹಗಳು(ಲಾಡ್ಜ್), ಅತಿಥಿ ವಸತಿ ಗೃಹಗಳು(ಪಿಜಿ), ಡಾರ್ಮೆಂಟರಿ/ಇತರೆ, ಕ್ಲಿನಿಕ್‌ಗಳು, ನರ್ಸಿಂಗ್ ಹೋಂಗಳು, ಖಾಸಗಿ ಆಸ್ಪತ್ರೆಗಳು, ಡಯೊಗೊಸ್ಟಿಕ್ಸ್ ಸೆಂಟರ್, ಔಷಧಿಗಳ ಸಗಟು ವ್ಯಾಪಾರ, ಮೆಡಿಕಲ್/ವೆಟರ್ನರಿ ಶಾಪ್, ಕನ್ನಡಕ ಮಾರಾಟದ ಅಂಗಡಿಗಳು, ದ್ವಿಚಕ್ರ/ ಮೂರು ಚಕ್ರ /ನಾಲ್ಕು ಚಕ್ರ ವಾಹನ ಮಾರಾಟ ಮಳಿಗೆಗಳು, ಟ್ರಾನ್ಸ್ ಪೋರ್ಟ್/ ಆಟೋ ಕನ್ಸಲೆಂಟ್ಸ್ ಟೂರ್ಸ್ ಅಂಡ್ ಟ್ರಾವೆಲ್ಸ್, ಡ್ರೈವಿಂಗ್ ಸ್ಕೂಲ್‌ಗಳು, ಆಟೋಮೊಬೈಲ್. ಗ್ಯಾರೇಜ್/ವರ್ಕ್ ಶಾಪ್‌ಗಳು, ಪಂಕ್ಚರ್ ಅಂಗಡಿ, ಸೈಕಲ್ ಶಾಪ್, ಟೈರ್ ವ್ಯಾಪಾರ, ಸರ್ವೀಸ್ ಸ್ಟೇಷನ್, ಇಂಜಿನಿಯರಿಂಗ್ ವರ್ಕ್ಸ್, ಚಿನ್ನ ಬೆಳ್ಳಿ ಮಾರಾಟದ ಅಂಗಡಿ, ಗಿರವಿ ಅಂಗಡಿ, ಲೇವಾದೇವಿ ವ್ಯವಹಾರ, ಫೈನಾನ್ಸ್, ಅಕ್ಕಿಅಂಗಡಿ, ಬಾಳೆ ಮಂಡಿ, ಪ್ರಾವಿಜನ್ ಸ್ಟೋರ್ಸ್ / ಕಿರಾಣಿ ಅಂಗಡಿ, ಫ್ಯಾನ್ಸಿ ಸ್ಟೋರ್ಸ್, ಸ್ಟೇಷನರಿ, ಬಿಗ್ ಬಜಾರ್, ಮೋರ್/ಸೀಡ್ಸ್, ಇತರೆ ಮಾಲ್ ಅಥವಾ ಮಲ್ಟಿಪ್ಲೆಕ್ಸ್ ಫೋಟೋ ಸ್ಟುಡಿಯೋಗಳು ಮತ್ತು ವೀಡಿಯೋಗ್ರಫಿ. ಕೇಬಲ್, ಫೋಟೋ ಫ್ರೇಮ್ ವರ್ಕ್ಸ್, ಫ್ಲೆಕ್ಸ್ ಮತ್ತು ಸ್ಟಿಕ್ಕರ್ ಕಟಿಂಗ್, ಪ್ರಿಂಟಿಂಗ್ ಮತ್ತು ಪೇಪರ್ ಮಾರ್ಟ್, ಡಿ.ಟಿ.ಪಿ. ಸೆಂಟರ್, ಜೆರಾಕ್ಸ್/ಟೈಪಿಂಗ್, ಕೊರಿಯರ್ ಸರ್ವೀಸ್, ಕಂಪ್ಯೂಟರ್ ಸೇಲ್ಸ್ ಇಂಟರ್‌ನೆಟ್ ಸೆಂಟರ್, ಮೊಬೈಲ್ ಶಾಪ್‌ಗಳು. ಮೊಬೈಲ್ ರಿಪೇರಿ, ಎಲೆಕ್ಟ್ರಾನಿಕ್ಸ್/ ಎಲೆಕ್ಟ್ರಿಕಲ್ ಉಪಕರಣಗಳ ಮಾರಾಟ/ ರಿಪೇರಿ ಅಂಗಡಿ, ವೇಬ್ರಿಡ್ಜ್, ಜಿಮ್, ಬ್ಯೂಟಿ ಪಾರ್ಲರ್‌ಗಳು, ಮಸಾಜ್ ಸೆಂಟರ್/ಸ್ಪಾಕೇಂದ್ರ, ಸಲೂನ್, ಗ್ಯಾಸ್ ಏಜೆನ್ಸಿ, ಗ್ಯಾಸ್ ದಾಸ್ತಾನು ಮಳಿಗೆ, ಗ್ಯಾಸ್ ರಿಪೇರಿ, ಪ್ಲಾಸ್ಟಿಕ್ ಅಂಗಡಿ, ಸ್ಟೀಲ್ ಪಾತ್ರೆ, ಇನ್ನಿತರೆ ಗೃಹೋಪಯೋಗಿ ವಸ್ತುಗಳ ಮಾರಾಟದ ಅಂಗಡಿ, ಬಟ್ಟೆ ಅಂಗಡಿ, ಟೈಲರಿಂಗ್ ಶಾಪ್, ಗಡಿಯಾರದ ಅಂಗಡಿ, ದೋಬಿ ಅಂಗಡಿ, ಡ್ರೈ ಕ್ಲೀನರ್ಸ್, ಶೂ ಮತ್ತು ಚಪ್ಪಲಿ ಅಂಗಡಿ, ಲೆದರ್ ವರ್ಕ್ಸ್, ಹಾಸಿಗೆ ಅಂಗಡಿ, ಫರ್ನೀಚರ್ ಅಂಗಡಿ, ಹಾರ್ಡ್ ವೇರ್/ಸ್ಯಾನಿಟರಿ ವೇರ್ ಅಂಗಡಿಗಳು, ಪ್ಲಂಬಿಂಗ್, ಪ್ಲೈ ವುಡ್, ಟೈಲ್ಸ್ ವ್ಯಾಪಾರ, ಬಣ್ಣದ ಅಂಗಡಿ, ಸಿಮೆಂಟ್ ಅಂಗಡಿ, ಸಿಮೆಂಟ್ ದಾಸ್ತಾನು ಮಳಿಗೆ, ಕಬ್ಬಿಣದ ಅಂಗಡಿ, ಮರಗೆಲಸ, ಹಳೇ ಮರದ ವ್ಯಾಪಾರ, ಬಿದಿರು ಬೊಂಬುಗಳ ಮಾರಾಟದ ಅಂಗಡಿ, ಪಟಾಕಿ ಅಂಗಡಿಗಳು, ಗುಜರಿ ಅಂಗಡಿ, ಎಲೆ, ಲೋಟ, ಪೇಪರ್ ಮಾರಾಟದ ಅಂಗಡಿ, ಕೃಷಿ ಯಂತ್ರೋಪಕರಣಗಳ ಮಾರಾಟ, ಕ್ರಿಮಿನಾಶಕ/ಬಿತ್ತನೆ ಬೀಜಗಳ ಅಂಗಡಿ, ಗೊಬ್ಬರದ ಅಂಗಡಿ, ಪಶು ಆಹಾರ ವ್ಯಾಪಾರ, ತೂಕ ಮತ್ತು ಅಳತೆ ಸಾಧನಗಳು, ಶಾಮಿಯಾನ/ ಫ್ಲವರ್ ಡೆಕೊರೇಟರ್ಸ್, ಸೌಂಡ್ ಸಿಸ್ಟಮ್. ಸೀರಿಯಲ್ ಸೆಟ್, ಅಮೃತ ಶಿಲೆ/ಗ್ರಾನೈಟ್/ಇತರೆ ಟೈಲ್ಸ್ ವ್ಯಾಪಾರ, ಎಲೆಕ್ಟ್ರೋ ಪ್ಲೇಟಿಂಗ್/ಗ್ಯಾಸ್ ಕಟ್ಟಿಂಗ್ ವ್ಯವಹಾರ, ಕೊಬ್ಬರಿ/ತೆಂಗಿನಕಾಯಿ ವ್ಯಾಪಾರ,

ಇಸ್ತ್ರಿ, ಅಂಗಡಿಗಳು ಅಥವಾ ಯಾವುದೇ ಉದ್ದೇಶಕ್ಕಾಗಿ ಬಾಡಿಗೆಗೆ ನೀಡಲಾದ ಅಥವಾ ತತ್ಸಮಾನ ಚಟುವಟಿಕೆಗಳ ಕಟ್ಟಡಗಳನ್ನು ಒಳಗೊಂಡಿರುತ್ತದೆ;

(20)**"ರೆಸಾರ್ಟ್ ಮತ್ತು ಹೋಂಸ್ಟೇಗಳು"**ಎಂದರೆ ರಾಜ್ಯ ಸರ್ಕಾರದ ಪ್ರವಾಸೋದ್ಯಮ ನೀತಿಯಡಿ ವ್ಯಾಖ್ಯಾನಿಸಿರುವ "ರೆಸಾರ್ಟ್ ಮತ್ತು ಹೋಂಸ್ಟೇಗಳು

(21)**"ವಸತಿಯೇತರ ಕಟ್ಟಡ"** ಎಂದರೆ ವಸತಿಯೇತರ ಉದ್ದೇಶಕ್ಕಾಗಿ ಬಳಸಲಾಗುವ ವೃತ್ತಿಪರ ಅಥವಾ ಇತರ ಸೇವಾ ಸೌಲಭ್ಯಗಳನ್ನು ಒದಗಿಸುವ ಸರ್ಕಾರೇತರ ಕಟ್ಟಡಗಳು.

ಎಂದರೆ, ಶಾಲೆಗಳು, ಕಾಲೇಜುಗಳು, ಶೈಕ್ಷಣಿಕ ಸಂಸ್ಥೆಗಳು, ಸಮುದಾಯ ಭವನಗಳು, ಸಹಕಾರಿ ಸಂಘ ಸಂಸ್ಥೆಗಳು, ವಾಣಿಜ್ಯ ಸಂಸ್ಥೆಗಳ ಮತ್ತು ಕಂಪನಿಗಳ ಕಛೇರಿಗಳು, ಟ್ರೇಡ್/ ಎಜೆನ್ಸಿ/ ಎಂಟರ್ ಪ್ರೈಸಸ್/ ಇತರೆ ಕಛೇರಿಗಳು, ದಾಸ್ತಾನು ಮಳಿಗೆಗಳು, ಕಟ್ಟಡ ನಕ್ಷೆ ಮತ್ತು ಅಂದಾಜು ತಯಾರಿಕಾ ಕಛೇರಿ, ಸೇವಾ ಅಪಾರ್ಟಮೆಂಟ್ / ಫ್ಲಾಟ್, ಸರ್ಕಾರಿ ಸ್ವಾಮ್ಯಕ್ಕೆ ಒಳಪಡುವ ವಿದ್ಯುತ್ ಸರಬರಾಜು ಕಂಪನಿಗಳು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆ.ಪಿ.ಟಿ.ಸಿ.ಎಲ್), ಬಿ.ಎಸ್.ಎನ್.ಎಲ್., ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎ.ಪಿ.ಎಂ.ಸಿ), ಏರ್ ಪೋರ್ಟ್, ವಿಮಾನ ಹಾರಾಟ ತರಬೇತಿ ಕೇಂದ್ರ, ರಸ್ತೆ ಸಾರಿಗೆ ನಿಗಮ, ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ, ಇತರೆ ಮಂಡಳಿಗಳು ಅಥವಾ ಪ್ರಾಧಿಕಾರ ಅಥವಾ ನಿಗಮಗಳ ಕಟ್ಟಡಗಳು;

(22)**"ಸವಕಳಿ"** ಎಂದರೆ ಕರ್ನಾಟಕ ಲೋಕೋಪಯೋಗಿ ಇಲಾಖೆಯು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಿದ ಕಟ್ಟಡದ ವಾರ್ಷಿಕ ಇಳಿಕೆ ಮೌಲ್ಯ;

(23) **"ಸ್ವತ್ತಿನ ಮೂಲ ಮೌಲ್ಯ"** ಎಂದರೆ ಖಾಲಿ ಭೂಮಿ, ಕಟ್ಟಡಗಳ ಅಥವಾ ಅವೆರಡರ ತೆರಿಗೆಯ ನಿರ್ಧರಣೆಯ ಉದ್ದೇಶಕ್ಕಾಗಿ ನಿಗಧಿ ಮಾಡಿದ, ಕರ್ನಾಟಕ ಮುದ್ರಾಂಕ ಅಧಿನಿಯಮ 1957(1957ರ ಕರ್ನಾಟಕ ಅಧಿನಿಯಮ ಸಂಖ್ಯೆ: 34) ರ 45-ಬಿ ಪ್ರಕರಣದಡಿಯಲ್ಲಿ ಪ್ರಕಟಿಸಲಾದ ಮಾರ್ಗಸೂಚಿಗಳನ್ವಯ ನಿರ್ಧರಣೆಯಾಗುವ ಒಟ್ಟು ಬಂಡವಾಳ ಮೌಲ್ಯ ಈ ಮೌಲ್ಯದಲ್ಲಿ ಲೋಕೋಪಯೋಗಿ ಇಲಾಖೆಯ ಅಧಿಸೂಚನೆಯನ್ವಯ ನಿರ್ಧರಿಸಿದ ಕಟ್ಟಡದ ಸವಕಳಿ ಮೌಲ್ಯವನ್ನು ಕಳೆಯುವುದು.

(24) **"ಖಾತಾ"** ಎಂದರೆ ಗ್ರಾಮ ಪಂಚಾಯತಿಯು ಸ್ವತ್ತು ತೆರಿಗೆ ರಿಜಿಸ್ಟರ್‌ನಲ್ಲಿ ತೆರಿಗೆ ಸಂಗ್ರಹಣೆ ಉದ್ದೇಶಕ್ಕಾಗಿ ನಿರ್ವಹಿಸಲಾದ ಸ್ಥಿರ ಸ್ವತ್ತಿನ ದಾಖಲೆ.

(25) **"ಧಾರ್ಮಿಕ ಕಟ್ಟಡ"** ಎಂದರೆ, ಸಾರ್ವಜನಿಕ ಪ್ರಾರ್ಥನೆಗೆ ಮುಕ್ತವಾದ ದೇವಸ್ಥಾನ, ಚರ್ಚ್, ಮಸೀದಿ, ಗುರುದ್ವಾರ, ಬೌದ್ಧ ವಿಹಾರ, ಮಜರ್, ಇತ್ಯಾದಿಗಳಂತಹ ಧಾರ್ಮಿಕ ಕಟ್ಟಡ.

(26) **"ಪೂರ್ಣಗೊಂಡ ಪ್ರಮಾಣ ಪತ್ರ"** ಎಂದರೆ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿಗಳ ನಿಯಂತ್ರಣ) ಮಾದರಿ ಉಪವಿಧಿಗಳು, 2015 ರ ಉಪ ವಿಧಿ 12 ರಲ್ಲಿ ವಿವರಿಸಿರುವಂತೆ ಅಥವಾ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಿದಂತೆ.

(27) **"ಅಧಿಭೋಗದಾರ ಪ್ರಮಾಣ ಪತ್ರ"**ಎಂದರೆ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಜಿಲ್ಲಾ ಪಂಚಾಯಿತಿ, ತಾಲ್ಲೂಕು

ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿಗಳ ನಿಯಂತ್ರಣ) ಮಾದರಿ ಉಪವಿಧಿಗಳು, 2015 ರ ಉಪ ವಿಧಿ 13 ರಲ್ಲಿ ವಿವರಿಸಿರುವಂತೆ. ಅಥವಾ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಿದಂತೆ.

**(28) "ಗ್ರಾಮ ಠಾಣಾ (Settelment)"** ಮೋಜಿಣಿಗೆ ಒಳಪಡಿಸದ (Un-surveyed) ವಾಸದ ನಿವಾಸಗಳನ್ನು ಹೊಂದಿರುವ ಅಥವಾ ಹೊಂದಿದ್ದ, ಗ್ರಾಮದ ಗಡಿ ರೇಖೆಯೊಳಗಿನ ಜನವಸತಿ ಪ್ರದೇಶದಲ್ಲಿನ ನಿವೇಶನ ಅಥವಾ ಕಟ್ಟಡಗಳು.

**(29) "ತಂತ್ರಾಂಶ"** ಎಂದರೆ ಸರ್ಕಾರದಿಂದ ಅಭಿವೃದ್ಧಿಪಡಿಸಲಾದ ತಂತ್ರಾಂಶ.

**(30) "ಏಕ ನಿವೇಶನ"** ಎಂದರೆ ವ್ಯವಸಾಯೇತರ ಉದ್ದೇಶಕ್ಕಾಗಿ ಭೂ-ಪರಿವರ್ತನೆಯಾಗಿ, ಯೋಜನಾ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆಯಾಗದ ಜಮೀನು.

**(31) "ಕಾರ್ಯನಿರ್ವಾಹಕ ಅಧಿಕಾರಿ"** ಎಂದರೆ ತಾಲ್ಲೂಕು ಪಂಚಾಯಿತಿಯ ಕಾರ್ಯ ನಿರ್ವಾಹಕ ಅಧಿಕಾರಿ.

**(32) "ಉಪ ಕಾರ್ಯದರ್ಶಿ (ಅಭಿವೃದ್ಧಿ)"** ಎಂದರೆ ಜಿಲ್ಲಾ ಪಂಚಾಯಿತಿಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ನಿರ್ವಹಿಸುವ ಉಪ ಕಾರ್ಯದರ್ಶಿ.

**(33) "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ"** ಎಂದರೆ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ.

**(34) "KTCP Regulations, 2025"** ಎಂದರೆ The Karnataka Town and country Planning (Development of Land in areas other than Local Planning Areas) Regulations, 2025.

## ಅಧ್ಯಾಯ-II
## ಸಾಮಾನ್ಯ ಉಪ ಬಂಧಗಳು

**3. (ಅ) ತೆರಿಗೆ ದರಕ್ಕೆ ಒಳಪಡುವ ಆಸ್ತಿಗಳು. –** ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 199 (1) ರಲ್ಲಿ ವಿವರಿಸಿರುವಂತೆ ಕೃಷಿ ತೆರಿಗೆಗೆ ಒಳಪಡದ ಆಸ್ತಿಗಳು.

ಪರಂತು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2025 ಜಾರಿಗೆ ಬಂದ ಪೂರ್ವದಲ್ಲಿ, ಪ್ರಕರಣ 199 (ಸಿ) ಪ್ರಕಾರ ಅಸ್ತಿತ್ವದಲ್ಲಿರುವ ಆಸ್ತಿಗಳು.

**(ಆ) "ತೆರಿಗೆ, ದರ ಮತ್ತು ಫೀಜುಗಳನ್ನು ವಿಧಿಸುವುದಕ್ಕಾಗಿ ಪ್ರಕ್ರಿಯೆ. –**ತೆರಿಗೆ, ದರ ಮತ್ತು ಶುಲ್ಕಗಳನ್ನು ಒದಗಿಸುವುದಕ್ಕಾಗಿ ಈ ಕೆಳಕಂಡಂತೆ ಪ್ರಕ್ರಿಯೆನ್ನು ಕೈಗೊಳ್ಳುವುದು, ಅಂದರೆ-

1) ಪ್ರತಿಯೊಂದು ಗ್ರಾಮ ಪಂಚಾಯಿತಿಯು ನಿಯಮಿಸಲಾದಂತೆ ಯಾವುದೇ ತೆರಿಗೆ, ದರ ಮತ್ತು ಶುಲ್ಕಗಳನ್ನು ವಿಧಿಸುವ ಬಗ್ಗೆ, ಈ ಕೆಳಕಂಡ ಕ್ರಮಗಳನ್ನು ಅನುಸರಿಸ ತಕ್ಕದ್ದು.

2) ಸಂಬಂಧಪಟ್ಟ ಗ್ರಾಮ ಪಂಚಾಯತ್ ಅಧಿನಿಯಮದ ಪ್ರಕರಣ199 (ಬಿ) ಮತ್ತು ಪ್ರಕರಣ 199 (ಸಿ) ರಡಿಯಲ್ಲಿ ನಿರ್ವಹಿಸುತ್ತಿರುವ ಖಾತೆಗಳಿಗೆ ಸಂಬಂಧಿಸಿದ ಸ್ವತ್ತುಗಳಿಂದ ತೆರಿಗೆಯನ್ನು ನಿಯಮಿಸಿದಂತೆ ವಿಧಿಸಿ ಸಂಗ್ರಹಿಸತಕ್ಕದ್ದು.

3) ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅಧಿನಿಯಮದನ್ವಯ ಗ್ರಾಮ ಪಂಚಾಯತಿ ತೆರಿಗೆಗೆ ಒಳಪಟ್ಟಿರದ ಎಲ್ಲಾ ಆಸ್ತಿ ವಿವರಗಳನ್ನು ಪ್ರತಿ ವರ್ಷ ಮಾರ್ಚ್ ಮಾಹೆಯಲ್ಲಿ ಸಮೀಕ್ಷೆ ಮಾಡಿ ವಿವರಗಳು ಮತ್ತು ದಾಖಲೆಗಳನ್ನು ಸಂಗ್ರಹಿಸಿ ತಂತ್ರಾಂಶದ ಮೂಲಕ ತೆರಿಗೆ ವ್ಯಾಪ್ತಿಗೆ ಮುಂದಿನ ಏಪ್ರಿಲ್ 1 ರಿಂದ ಒಳಪಡಿಸಲು ಕ್ರಮ ಕೈಗೊಳ್ಳತಕ್ಕದ್ದು.

4) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2025 ರ ಪೂರ್ವದಲ್ಲಿ ನಿವೇಶನಗಳಿಗೆ ಸಂಬಂಧಿಸಿದಂತೆ ಕ್ರಯ ಪತ್ರ ಹಾಗೂ ಕಟ್ಟಡಗಳ ಸಂದರ್ಭದಲ್ಲಿ ಸಂಬಂಧಿಸಿದ ಎಸ್ಕಾಂನಿಂದ ಶಾಶ್ವತವಾಗಿ ವಿದ್ಯುತ್ ಸಂಪರ್ಕ ಪಡೆದ ದಿನಾಂಕ ಪೂರ್ಣಗೊಂಡ ದಿನಾಂಕವೆಂದು ಪರಿಗಣಿಸಿ ಅಥವಾ ದಿನಾಂಕ: 25.02.2016 ರಿಂದ, ಇವುಗಳಲ್ಲಿ ಯಾವುದು ನಂತರವೋ ಆ ದಿನಾಂಕದಿಂದ ಕಟ್ಟಡಗಳ ಬಾಕಿ ತೆರಿಗೆಯನ್ನು ತಂತ್ರಾಂಶದಲ್ಲಿ ತೆರಿಗೆ ಲೆಕ್ಕಾಚಾರ ಮಾಡುವ ಮೂಲಕ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ಒಳಪಡಿಸತಕ್ಕದ್ದು.

5) ಸಮೀಕ್ಷೆಯ ಪ್ರಕಾರ ಹೊಸದಾಗಿ ತೆರಿಗೆ ವ್ಯಾಪ್ತಿಗೆ ಒಳಪಡುವ ಆಸ್ತಿಗಳ ವಿವರವನ್ನು ಗ್ರಾಮ ಪಂಚಾಯತಿಯು ತನ್ನ ಸೂಚನಾ ಫಲಕದಲ್ಲಿ, ತಾಲ್ಲೂಕು ಪಂಚಾಯತಿಯ ಸೂಚನಾ ಫಲಕ, ತಾಲ್ಲೂಕು ಕಛೇರಿ, ಗ್ರಾಮ ಪಂಚಾಯಿತಿಯ ಗ್ರಂಥಾಲಯ, ಹಾಗೂ ಗ್ರಾಮದ ಪ್ರಮುಖ ಸಾರ್ವಜನಿಕ ಸ್ಥಳಗಳಲ್ಲಿ ಪ್ರಕಟಿಸಿ, 07 ದಿನಗಳ ಕಾಲಾವಕಾಶವನ್ನು ನೀಡಿ ಆಕ್ಷೇಪಣೆ ಅಥವಾ ಸಲಹೆಗಳನ್ನು ಆಹ್ವಾನಿಸತಕ್ಕದ್ದು.

6) ಮೇಲಿನ ಉಪ ನಿಯಮ (5) ರಲ್ಲಿ ಸ್ವೀಕರಿಸಲಾದ ಆಕ್ಷೇಪಣೆ ಮತ್ತು ಸಲಹೆಗಳನ್ನು ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ /ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ದಾಖಲೆಗಳೊಂದಿಗೆ ಸ್ಥಳ ಪರಿಶೀಲಿಸಿ ಹಾಗೂ ಅಧ್ಯಕ್ಷರ ಅನುಮೋದನೆಯೊಂದಿಗೆ ತೆರಿಗೆಗೆ ಒಳಪಡಿಸತಕ್ಕದ್ದು.

7) ಉಪ ನಿಯಮ (5) ರ ಪ್ರಕಾರ ಹೊಸದಾಗಿ ತೆರಿಗೆ ವ್ಯಾಪ್ತಿಗೆ ಒಳಪಡಿಸಿದ ಆಸ್ತಿಯ ವಿವರಗಳನ್ನು ನಮೂನೆ-1ರಲ್ಲಿ ಮುಂದಿನ ಸಾಮಾನ್ಯ ಸಭೆಯಲ್ಲಿ ಮಾಹಿತಿಗಾಗಿ ಮಂಡಿಸುವುದು.

8) ಇಲಾಖೆಯ ತಂತ್ರಾಂಶದಲ್ಲಿ ಆಸ್ತಿಯ ಮಾಲೀಕರು ಪಾರದರ್ಶಕವಾಗಿ, ಸರಳವಾಗಿತೆರಿಗೆ, ದರ ಮತ್ತು ಶುಲ್ಕಗಳನ್ನು ಆನ್‌ಲೈನ್ ಮೂಲಕ ಪಾವತಿಸಲು ಸೂಕ್ತ ವ್ಯವಸ್ಥೆ ಕಲ್ಪಿಸತಕ್ಕದ್ದು.

9) ಗ್ರಾಮ ಪಂಚಾಯಿತಿಗಳು ವಿಧಿಸುವ ತೆರಿಗೆ, ದರ ಮತ್ತು ಶುಲ್ಕಗಳ ಬಗ್ಗೆ ಮಾಹಿತಿ, ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಗಳ ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸ ತಕ್ಕದ್ದು.

10) ಗ್ರಾಮ ಪಂಚಾಯಿತಿಯಲ್ಲಿ ತೆರಿಗೆ, ದರ ಮತ್ತು ಶುಲ್ಕಗಳ ವಿವರಗಳನ್ನು, ಆಗಿಂದ್ದಾಗೆ ಆಗುವ ಬದಲಾವಣೆಗಳನ್ನು ಒಳಗೊಂಡಂತೆ ಸೂಚನಾ ಫಲಕವನ್ನು ಶಾಶ್ವತವಾಗಿ ಅಳವಡಿಸತಕ್ಕದ್ದು.

11) ಸರ್ಕಾರವು ರಚಿಸಿದ ನಿಯಮಗಳ ಅನುಸಾರವಾಗಿ ತೆರಿಗೆ, ದರ ಮತ್ತು ಶುಲ್ಕಗಳನ್ನು ನಿರ್ಧರಿಸತಕ್ಕದ್ದು, ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು; ಮತ್ತು

12) ಕಟ್ಟಡಗಳು ಮತ್ತು ನಿವೇಶನಗಳ ಮೇಲಿನ ತೆರಿಗೆಗಳನ್ನು ಪೂರ್ಣವಾಗಿ ಅಥವಾ ಗರಿಷ್ಠ ಎರಡು ಕಂತುಗಳಲ್ಲಿ ಸಂದಾಯ ಮಾಡತಕ್ಕದ್ದು;

## ಅಧ್ಯಾಯ-III
## ಅಧಿನಿಯಮದ ಪ್ರಕರಣ 199 ರ ಅಡಿಯಲ್ಲಿ ಆಸ್ತಿಗಳಿಗೆ ತೆರಿಗೆ ವಿಧಿಸುವುದು.

**4. ಕಟ್ಟಡಗಳು ಮತ್ತು ಭೂಮಿಯ ಮೇಲೆ ತೆರಿಗೆ ವಿಧಿಸುವುದು**. –ಅಧಿನಿಯಮದ ಪ್ರಕರಣ 199ರ ಉಪ-ಪ್ರಕರಣ(1)ರಡಿಯಲ್ಲಿ ವಸತಿ, ವಾಣಿಜ್ಯ ಮತ್ತು ಕೈಗಾರಿಕಾ ಕಟ್ಟಡಗಳು ಹಾಗೂ ಭೂಮಿ ಅಥವಾ ಅವೆರಡರ ಮೇಲೆ; ವಸತಿಯೇತರ ಕಟ್ಟಡಗಳು ಹಾಗೂ ಭೂಮಿಯ ಮೇಲೆ ಅಥವಾ ಅವೆರಡರ ಮೇಲೆ; ಕೃಷಿ ಆಧಾರಿತ ಉತ್ಪಾದನಾ ಘಟಕದ ಕಟ್ಟಡಗಳ ಮೇಲೆ; ಭೂಪರಿವರ್ತಿತ ಖಾಲಿ ಜಮೀನು, ಖಾಲಿ ನಿವೇಶನ ಮೇಲೆ ತೆರಿಗೆಯನ್ನು ಸ್ವತ್ತಿನ ಬಂಡವಾಳ ಮೌಲ್ಯದ ಆಧಾರದಲ್ಲಿ ಕೋಷ್ಟಕಗಳಲ್ಲಿ ನಿರ್ದಿಷ್ಟಪಡಿಸಿರುವ ದರದಂತೆ ವಿಧಿಸತಕ್ಕದ್ದು.

**5. ನಮೂನೆ–11ಎ ರಿಜಿಸ್ಟರ್‌ನ ನಿರ್ವಹಣೆ.- (1)** ಗ್ರಾಮ ಪಂಚಾಯತಿಯಲ್ಲಿ ನಿರ್ವಹಿಸುತ್ತಿದ್ದ ನಮೂನೆ–9, 9ಎ, ಮತ್ತು 11ಎ ಗಳಲ್ಲಿ ಈ ಕೆಳಕಂಡ ವರ್ಗೀಕರಣಗಳಲ್ಲಿ ನಿರ್ವಹಿಸಲಾಗುತ್ತಿದ್ದ ಆಸ್ತಿಗಳನ್ನು ಇನ್ನು ಮುಂದೆ ನಮೂನೆ–11 ಎ ರಿಜಿಸ್ಟರ್‌ನಲ್ಲಿ ಸೇರಿಸಿ ನಿರ್ವಹಿಸತಕ್ಕದ್ದು. ಅಂತಹ ಆಸ್ತಿಗಳನ್ನು ಸೇರಿಸುವುದಕ್ಕೆ ಮುಂಚಿತವಾಗಿ ಅನುಬಂಧ–1ರಲ್ಲಿ ನಿಗಧಿಪಡಿಸಿರುವಂತಹ ದಾಖಲೆಗಳನ್ನು ಪಡೆದು ಪರಿಶೀಲಿಸಿ ನಂತರ 15 ಕೆಲಸದ ದಿನದೊಳಗೆ ತಂತ್ರಾಂಶದಲ್ಲಿ ದಾಖಲಿಸಿ ನಮೂನೆ 11ಎ ವಿತರಿಸತಕ್ಕದ್ದು.

**(ಅ) ಗ್ರಾಮ ಠಾಣಾ;** ಗ್ರಾಮ ಪಂಚಾಯತಿಯ ಗ್ರಾಮದ ಗಡಿ ರೇಖೆಯೊಳಗಿನ ಜನವಸತಿ ಪ್ರದೇಶದಲ್ಲಿನ ನಿವೇಶನ ಅಥವಾ ಕಟ್ಟಡಗಳು ಗ್ರಾಮ ಠಾಣಾ ಆಸ್ತಿ ಎಂದು ವರ್ಗೀಕೃತವಾಗಿರತಕ್ಕದ್ದು.

**(ಆ) ಸರ್ಕಾರದ ವಸತಿ ನಿಗಮದ ಯೋಜನೆಯಡಿ ಮಂಜೂರಾದ ಆಸ್ತಿ;** ಸರ್ಕಾರದ ವಸತಿ ಯೋಜನೆಯಡಿ ವಸತಿ ನಿಗಮದ ಮೂಲಕ ಹಂಚಿಕೆ ಮಾಡಲಾದ ಪ್ರದೇಶದಲ್ಲಿನ ಯಾವುದೇ ವಸತಿ ನಿವೇಶನ ಅಥವಾ ಕಟ್ಟಡಗಳು ಸರ್ಕಾರದ ವಸತಿ ನಿಗಮದ ಯೋಜನೆಯಡಿ ಮಂಜೂರಾದ ಆಸ್ತಿ ಎಂದು ವರ್ಗೀಕೃತವಾಗಿರತಕ್ಕದ್ದು.

ಪರಂತು, ಈ ನಿಯಮಗಳು ಅಧಿಸೂಚಿತವಾದ ನಂತರ ಸರ್ಕಾರದ ವಸತಿ ನಿಗಮದ ಅಡಿಯಲ್ಲಿ ಅಥವಾ ಸರ್ಕಾರದ ವಸತಿ ಯೋಜನೆ ಅಡಿಯಲ್ಲಿ ನಿವೇಶನಗಳನ್ನು ಮಂಜೂರು ಮಾಡಲು ನಿರ್ಮಿಸುವ ಬಡಾವಣೆಗಳನ್ನು ಕಡ್ಡಾಯವಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ ಸಂಖ್ಯೆ: 11) ಪ್ರಕರಣ 17 ಅಥವಾ 4 ಕೆ ಅಥವಾ ಇತರೆ ಸಂಬಂಧಪಟ್ಟ ಪ್ರಕರಣದ ಅಡಿಯಲ್ಲಿ ವಿನ್ಯಾಸ ಅನುಮೋದನೆ ಹೊಂದಿರತಕ್ಕದ್ದು.

(ಇ) **ದಿನಾಂಕ: 16.11.1992 ರಿಂದ ದಿನಾಂಕ 11.11.2014 ರ ಅವಧಿಯಲ್ಲಿ ಸ್ಥಳೀಯ ಯೋಜನಾ ಪ್ರದೇಶದ ಹೊರ ಭಾಗದಲ್ಲಿ ಗ್ರೂಪ್/ ಮಂಡಲ/ ಗ್ರಾಮ ಪಂಚಾಯತಿಯ ವಿನ್ಯಾಸ ಅನುಮೋದಿತ ಆಸ್ತಿ;** ಗ್ರಾಮ ಪಂಚಾಯತಿ ವ್ಯಾಪ್ತಿಯ ಸ್ಥಳೀಯ ಯೋಜನಾ ಪ್ರದೇಶದ ಹೊರ ಭಾಗದಲ್ಲಿ ಗ್ರೂಪ್/ ಮಂಡಲ/ ಗ್ರಾಮ/ ತಾಲ್ಲೂಕು ಪಂಚಾಯಿತಿಯಿಂದ ಅನುಮೋದಿಸಲ್ಪಟ್ಟ ಬಡಾವಣೆಯ ಯಾವುದೇ ನಿವೇಶನ ಅಥವಾ ಕಟ್ಟಡಗಳು ಸ್ಥಳೀಯ

ಯೋಜನಾ ಪ್ರದೇಶದ ಹೊರ ಭಾಗದಲ್ಲಿ ಗ್ರೂಪ್/ ಮಂಡಲ/ ಗ್ರಾಮ ಪಂಚಾಯಿತಿಯ ವಿನ್ಯಾಸ ಅನುಮೋದಿತ ಆಸ್ತಿ ಎಂದು ವರ್ಗೀಕೃತವಾಗಿರತಕ್ಕದ್ದು.

(ಈ) **ಸ್ಥಳೀಯ ಯೋಜನಾ ಪ್ರದೇಶದಲ್ಲಿ ದಿನಾಂಕ:16.11.1992ರ ಪೂರ್ವದಲ್ಲಿ ಗ್ರೂಪ್/ ಮಂಡಲ ಪಂಚಾಯತಿಯ ವಿನ್ಯಾಸ ಅನುಮೋದಿತ ಆಸ್ತಿ;** ಗ್ರಾಮ ಪಂಚಾಯತಿ ವ್ಯಾಪ್ತಿಯ ಸ್ಥಳೀಯ ಯೋಜನಾ ಪ್ರದೇಶದಲ್ಲಿ ದಿನಾಂಕ:16.11.1992 ರ ಪೂರ್ವದಲ್ಲಿ ಗ್ರೂಪ್/ ಮಂಡಲ ಪಂಚಾಯತಿಯಿಂದ ಅನುಮೋದಿಸಲ್ಪಟ್ಟ ಬಡಾವಣೆಯ ಯಾವುದೇ ನಿವೇಶನ ಅಥವಾ ಕಟ್ಟಡಗಳು ಸ್ಥಳೀಯ ಯೋಜನಾ ಪ್ರದೇಶದಲ್ಲಿ ಗ್ರೂಪ್/ ಮಂಡಲ ಪಂಚಾಯಿತಿಯಿಂದ ಅನುಮೋದನೆಯಾಗಿರುವ ಆಸ್ತಿ ಎಂದು ವರ್ಗೀಕೃತವಾಗಿರತಕ್ಕದ್ದು.

(ಉ) **ಮಂಡಲ ಪಂಚಾಯತಿ ಅವಧಿಯ ಪೂರ್ವದಲ್ಲಿ ಅಧಿಸೂಚಿತ (ನೋಟಿಫೈಡ್) ಏರಿಯಾ ಸಮಿತಿಯಲ್ಲಿ ನಿರ್ವಹಿಸಲಾದ ಆಸ್ತಿ;** ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮಂಡಲ ಪಂಚಾಯಿತಿ ಅವಧಿಯ ಪೂರ್ವದಲ್ಲಿ ಅಧಿಸೂಚಿತ (ನೋಟಿಫೈಡ್) ಏರಿಯಾ ಸಮಿತಿಗಳಲ್ಲಿ ಸೃಜಿಸಲಾಗಿದ್ದ ಆಸ್ತಿ ಎಂದು ವರ್ಗೀಕೃತವಾಗಿರತಕ್ಕದ್ದು.

(ಊ) **ಕೆ.ಐ.ಎ.ಡಿ. ಬಿ.,/ಕೆ. ಎಸ್. ಎಸ್.ಐ.ಡಿ.ಸಿ., ಕೈಗಾರಿಕಾ ವಿನ್ಯಾಸ ಅನುಮೋದಿತ ಆಸ್ತಿ;** ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆ.ಐ.ಎ.ಡಿ. ಬಿ)/ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (ಕೆ. ಎಸ್. ಎಸ್.ಐ.ಡಿ. ಸಿ) ಅನುಮೋದಿಸಲ್ಪಟ್ಟ ಕೈಗಾರಿಕಾ ಉದ್ದೇಶದ ಯಾವುದೇ ನಿವೇಶನ/ ಕಟ್ಟಡಗಳಿಗೆ ಕೆಐಎಡಿಬಿ/ ಕೆಎಸ್‌ಎಸ್‌ಐಡಿಸಿ ಕೈಗಾರಿಕಾ ವಿನ್ಯಾಸ ಅನುಮೋದಿತ ಆಸ್ತಿ ಎಂದು ವರ್ಗೀಕೃತವಾಗಿರತಕ್ಕದ್ದು.

(ಋ) **ದಿನಾಂಕ:14.06.2013 ರ ಪೂರ್ವದಲ್ಲಿ ಗ್ರಾಮ ಪಂಚಾಯತಿ ಅನುಮತಿ ಪತ್ರ/ ಅನುಮೋದಿತ ಕಟ್ಟಡ ನಕ್ಷೆಯ ಕಟ್ಟಡ ನಿರ್ಮಿತ ಭೂ-ಪರಿವರ್ತಿತ ಆಸ್ತಿ;** ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕೃಷಿ ಜಮೀನು ಅಥವಾ ಕಂದಾಯ ನಿವೇಶನ ಅಥವಾ ಸರ್ಕಾರಿ ಸ್ವತ್ತಿನಲ್ಲಿ ಹೊರತುಪಡಿಸಿ, ವಿನ್ಯಾಸ ನಕ್ಷೆ ಅನುಮೋದನೆಯಿಲ್ಲದ ಭೂ-ಪರಿವರ್ತಿತ ಜಮೀನಿನಲ್ಲಿ ಅಥವಾ ಭೂಪರಿವರ್ತಿತ ಜಮೀನಿನಲ್ಲಿ ರಚಿಸಿರುವ ನಿವೇಶನಗಳಲ್ಲಿ ಗ್ರಾಮ ಪಂಚಾಯತಿಯಿಂದ ನೀಡಲಾದ ಕಟ್ಟಡ ನಿರ್ಮಾಣದ ಅನುಮತಿ ಪತ್ರ ಅಥವಾ ಕಟ್ಟಡ ನಕ್ಷೆಯ ಅನುಮೋದನೆಯ ಮೇರೆಗೆ ನಿರ್ಮಿಸಿದ ಯಾವುದೇ ಕಟ್ಟಡಗಳ ಆಸ್ತಿಯು ಗ್ರಾಮ ಪಂಚಾಯತಿ ಅನುಮತಿ ಪತ್ರ/ ಅನುಮೋದಿತ ಕಟ್ಟಡ ನಕ್ಷೆಯ ಕಟ್ಟಡ ನಿರ್ಮಿತ ಭೂ-ಪರಿವರ್ತಿತ ಆಸ್ತಿ ಎಂದು ವರ್ಗೀಕೃತವಾಗಿರತಕ್ಕದ್ದು.

(ಎ) **ಸ್ಥಳೀಯ ಯೋಜನಾ ಪ್ರದೇಶದಲ್ಲಿನ ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಸ್ಥಳೀಯ ಯೋಜನಾ ಪ್ರದೇಶದ ಹೊರ ಭಾಗದಲ್ಲಿ/ ಸ್ಥಳೀಯ ಯೋಜನಾ ಪ್ರಾಧಿಕಾರದ ವಿನ್ಯಾಸ ಅನುಮೋದಿತ ಆಸ್ತಿ;** ಯೋಜನಾ ಪ್ರದೇಶದ ಒಳಗೆ ಬರುವಂತಹ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿನ ಆಸ್ತಿಗಳು ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಸ್ಥಳೀಯ ಯೋಜನಾ ಪ್ರದೇಶದ ಹೊರ ಭಾಗದಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ/ ಸ್ಥಳೀಯ ಯೋಜನಾ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಪಡೆಯಲಾಗಿದ್ದರೆ ಅಂತಹ ಆಸ್ತಿಗಳನ್ನು ಸ್ಥಳೀಯ ಯೋಜನಾ ಪ್ರದೇಶದಲ್ಲಿನ ನಗರಾಭಿವೃದ್ಧಿ ಪ್ರಾಧಿಕಾರ/ ಸ್ಥಳೀಯ ಯೋಜನಾ ಪ್ರಾಧಿಕಾರದ ವಿನ್ಯಾಸ ಅನುಮೋದಿತ ಆಸ್ತಿ ಎಂದು ವರ್ಗೀಕೃತವಾಗಿರತಕ್ಕದ್ದು.

(ಏ) **ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಪ್ರಕರಣ 94ಸಿ, 94ಸಿಸಿ/ 94ಡಿ ರಡಿಯಲ್ಲಿ ಮಂಜೂರಾದ ಆಸ್ತಿ;** (i) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕರ್ನಾಟಕ ಭೂಕಂದಾಯ ಅಧಿನಿಯಮ, 1964ರ ಪ್ರಕರಣ 94ಸಿ ಅಥವಾ 94 ಸಿಸಿ ರಡಿಯಲ್ಲಿ ಸರ್ಕಾರಕ್ಕೆ ಸೇರಿದ ಯಾವುದೇ ಭೂಮಿಯಲ್ಲಿ ಅನಧಿಕೃತವಾಗಿ ಅಧಿಭೋಗ ಮತ್ತು ವಾಸದ ಮನೆಯನ್ನು ನಿರ್ಮಿಸಿದ ನಿವೇಶನ ಅಥವಾ ಪ್ರಕರಣ 94ಡಿ ರಡಿಯಲ್ಲಿ ದಾಖಲಾಗದ ವಾಸಿಸುವ ಸ್ಥಳಗಳಲ್ಲಿರುವ ಸರ್ಕಾರಿ ಭೂಮಿಯಲ್ಲಿ ನಿರ್ಮಿಸಲಾದ ವಾಸದ ಮನೆಯ ನಿವೇಶನವನ್ನು ಯಾವುದೇ ವ್ಯಕ್ತಿಗೆ ನಿಯಮಿಸಲಾದ ಪ್ರಾಧಿಕಾರವು ಮಂಜೂರು ಮಾಡಿದ ವಾಸದ ಮನೆ, ಅದರ ನಿವೇಶನ ಮತ್ತು ಅದಕ್ಕೆ ಹೊಂದಿಕೊಂಡಿರುವ ನಿವೇಶನವು ಕರ್ನಾಟಕ ಭೂಕಂದಾಯ ಅಧಿನಿಯಮ 1964ರ ಪ್ರಕರಣ 94ಸಿ/ 94ಸಿಸಿ/ 94ಡಿ ರಡಿಯಲ್ಲಿ ಮಂಜೂರಾದ ಆಸ್ತಿ ಎಂದು ವರ್ಗೀಕೃತವಾಗಿರತಕ್ಕದ್ದು.

**(ii)** ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಆಸ್ತಿಗಳಿಗೆ ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಪ್ರಕರಣ 94 ಸಿ/ 94 ಸಿಸಿ/ 94ಡಿ ರಡಿಯಲ್ಲಿ ನಿವೇಶನ ಮತ್ತು ಮನೆ ನೀಡುವ ಆಸ್ತಿಗಳಿಗೆ ತಂತ್ರಾಂಶದ ಮೂಲಕ ನಮೂನೆ-11ಎ ಸೃಜಿಸಲು ಈ ಕೆಳಕಂಡ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು ಅಂದರೆ: -

**(1)** ಗ್ರಾಮ ಪಂಚಾಯಿತಿಯ ಹಿರಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಕಂದಾಯ ಇಲಾಖೆಯ ತಂತ್ರಾಂಶದ ಮೂಲಕ ಇಲಾಖೆಯ ತಂತ್ರಾಂಶದಲ್ಲಿ ಸ್ವೀಕರಿಸಿದ ಮಾಹಿತಿಗೆ ಅನುಗುಣವಾಗಿ ಕಂದಾಯ ಇಲಾಖೆಯ ಸಕ್ಷಮ ಪ್ರಾಧಿಕಾರದ ಹೆಸರಿಗೆ ನಮೂನೆ- 11ಎ ಗಳನ್ನು ಸೃಜಿಸಿ ಅನುಮೋದನೆ ನೀಡುವುದು.

**(2)** ಕಂದಾಯ ಇಲಾಖೆಯ ಸಕ್ಷಮ ಪ್ರಾಧಿಕಾರದ ಹೆಸರಿಗೆ ಸೃಜಿಸಲಾಗುವ ನಮೂನೆಗಳ ಹಾಗೂ ತಂತ್ರಾಂಶಕ್ಕೆ ಸಂಬಂಧಿಸಿದ ಶುಲ್ಕಗಳಿಗೆ ವಿನಾಯಿತಿ ನೀಡತಕ್ಕದ್ದು.

**(3)** ಕಂದಾಯ ಇಲಾಖೆಯ ಸಕ್ಷಮ ಪ್ರಾಧಿಕಾರದಿಂದ ಸಂಬಂಧಿಸಿದ ಫಲಾನುಭವಿಗಳಿಗೆ ನೊಂದಾಯಿತ ಪ್ರಮಾಣ ಪತ್ರದ ಮೂಲಕ ಆಸ್ತಿಯು ವರ್ಗಾವಣೆಯಾಗಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ತಂತ್ರಾಂಶದಿಂದ ಕಂದಾಯ ಇಲಾಖೆಯು ನಿಗಧಿಪಡಿಸುವ ಅವಧಿಯವರೆಗೆ ಯಾವುದೇ ರೀತಿಯ ಪರಭಾರೆಗೆ ಅವಕಾಶ ಇರದ ಬಗ್ಗೆ ಹಕ್ಕುಗಳು ಮತ್ತು ಹೊಣೆಗಾರಿಕೆಗಳಲ್ಲಿ ನಮೂದಿಸುವುದರೊಂದಿಗೆ ಸ್ವೀಕರಿಸಿದ XML.File ಗಳನ್ನು ತಕ್ಷಣ ಸಾರ್ವಜನಿಕ ಆಕ್ಷೇಪಣೆ/ ಸಲಹೆಗಳನ್ನು ಸ್ವೀಕರಿಸಲು 7 ದಿನಗಳ ನೋಟೀಸನ್ನು ಹೊರಡಿಸತಕ್ಕದ್ದು.

**(4)** 7 ದಿನಗಳ ತರುವಾಯ ಸ್ವೀಕರಿಸಿದಂತಹ ಆಕ್ಷೇಪಣೆಗಳನ್ನು ನಿಯಮಾನುಸಾರ ವಿಲೇಪಡಿಸತಕ್ಕದ್ದು.

**(5)** ಗ್ರಾಮ ಪಂಚಾಯಿತಿಯ ದಾಖಲೆಗಳಲ್ಲಿ ಮಾರ್ಪಾಡುಗಳನ್ನು ನಿಯಮ(12) ರಂತೆ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಕ್ರಮ ವಹಿಸತಕ್ಕದ್ದು.

**(ಐ) ಪುನರ್ವಸತಿ ಯೋಜನೆಯ ಆಸ್ತಿ;** ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಅಣೆಕಟ್ಟು ಜಲಾಶಯದ ಹಿನ್ನೀರಿನ ಅಥವಾ ನೆರೆ ಹಾವಳಿ ಅಥವಾ ಇತರೆಗಳಿಂದ ಬಾಧಿತರಾದವರ ಪುನಶ್ಚೇತನಕ್ಕಾಗಿ ಸರ್ಕಾರದಿಂದ ಅಗತ್ಯ ಪುನರ್ವಸತಿ ಸೌಲಭ್ಯಗಳನ್ನು ಒದಗಿಸಿ ಭಾದಿತ ವ್ಯಕ್ತಿಗಳಿಗೆ ಹಕ್ಕುಪತ್ರ ನೀಡಲಾದ ಮತ್ತು ನಿರ್ವಹಣೆಗಾಗಿ ಸಂಬಂಧಿಸಿದ ಗ್ರಾಮ ಪಂಚಾಯತಿಗೆ

ಹಸ್ತಾಂತರಿಸಿದ ಪುನರ್ವಸತಿಯ ಯಾವುದೇ ನಿವೇಶನ ಅಥವಾ ಕಟ್ಟಡಗಳು ಪುನರ್ವಸತಿ ಯೋಜನೆಯ ಆಸ್ತಿ ಎಂದು ವರ್ಗೀಕೃತವಾಗಿರತಕ್ಕದ್ದು.

(ಒ) **ನೋಂದಾಯಿತ ಪಾಲುದಾರಿಕೆ ಪತ್ರದಂತೆ ಪೋಡಿ/ ಹಿಸ್ಸಾ ನಂಬರ್ ಪಡೆದ ವೈಯಕ್ತಿಕ ಕುಟುಂಬದ ಆಸ್ತಿ (ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ);** ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ವಿನ್ಯಾಸ ಅನುಮೋದನೆಯಿಲ್ಲದ ವೈಯಕ್ತಿಕ ಕುಟುಂಬದ ಆಸ್ತಿಯ ನೋಂದಾಯಿತ ಪಾಲುದಾರಿಕೆಯ ಪತ್ರದಂತೆ ಪ್ರತ್ಯೇಕ ಪೋಡಿ ಅಥವಾ ಹಿಸ್ಸಾ ನಂಬರ್ ಪಡೆದ ಪ್ರಕರಣಗಳ ಆಸ್ತಿಗಳು ನೋಂದಾಯಿತ ಪಾಲುದಾರಿಕೆ ಪತ್ರದಂತೆ ಪೋಡಿ/ ಹಿಸ್ಸಾ ನಂಬರ್ ಪಡೆದವರ ವೈಯಕ್ತಿಕ ಕುಟುಂಬದ ಆಸ್ತಿ (ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ) ಎಂದು ವರ್ಗೀಕೃತವಾಗಿರತಕ್ಕದ್ದು.

ಪರಂತು, ಈ ನಿಯಮಗಳು ಅಧಿಸೂಚಿತವಾದ ನಂತರ ಈ ವರ್ಗೀಕರಣದ ಅಡಿಯಲ್ಲಿ ಸೃಷ್ಟಿಯಾಗುವ ಆಸ್ತಿಗಳು ಕಡ್ಡಾಯವಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ ಸಂಖ್ಯೆ: 11) ರಡಿ ವಿನ್ಯಾಸ ಅನುಮೋದನೆ ಹೊಂದಿರತಕ್ಕದ್ದು.

(ಓ) **ದಿನಾಂಕ: 11.11.2014 ರಿಂದ ದಿನಾಂಕ:10.01.2025 ರ ವರೆಗೆ ಸ್ಥಳೀಯ ಯೋಜನಾ ಪ್ರದೇಶದ ಹೊರ ಭಾಗದಲ್ಲಿ ಗ್ರಾಮ ಪಂಚಾಯತಿ ವಿನ್ಯಾಸ ಅನುಮೋದಿತ ಆಸ್ತಿ;** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ ಸಂಖ್ಯೆ: 11) ರಡಿ ಯಾವುದೇ ಯೋಜನಾ ಪ್ರಾಧಿಕಾರ ಸ್ಥಾಪನೆಯಾಗದ ಪ್ರದೇಶದಲ್ಲಿ ದಿನಾಂಕ: 11.11.2014 ರ ಇಲಾಖೆಯ ಮಾರ್ಗಸೂಚಿಗಳನ್ವಯ ಸೃಜಿಸಲಾದ ಆಸ್ತಿ ಎಂದು ವರ್ಗೀಕೃತವಾಗಿರತಕ್ಕದ್ದು.

(ಔ) **ಕೇಂದ್ರ ಸರ್ಕಾರ/ ರಾಜ್ಯ ಸರ್ಕಾರ /ಸ್ಥಳೀಯ ಸಂಸ್ಥೆಗಳ ನಿವೇಶನ / ಕಟ್ಟಡ;** ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಸ್ಥಳೀಯ ಸಂಸ್ಥೆಗಳು ಆರ್ಜಿಸಿದ ಹಾಗೂ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಸ್ಥಳೀಯ ಸಂಸ್ಥೆಗಳಲ್ಲಿ ನಿಹಿತವಾಗಿರುವ ಯಾವುದೇ ನಿವೇಶನ ಅಥವಾ ಕಟ್ಟಡಗಳು ಕೇಂದ್ರ ಸರ್ಕಾರ/ ರಾಜ್ಯ ಸರ್ಕಾರ/ ಸ್ಥಳೀಯ ಸಂಸ್ಥೆಗಳ ನಿವೇಶನ / ಕಟ್ಟಡ ಎಂದು ವರ್ಗೀಕೃತವಾಗಿರತಕ್ಕದ್ದು.

(ಅಂ) **ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961 ರ ಪ್ರಕರಣ 38ಎ ರಡಿಯಲ್ಲಿ ಮಂಜೂರಾದ ಆಸ್ತಿ;** ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಖಾಸಗಿ ಜಮೀನಿನಲ್ಲಿ ನೆಲೆಗೊಂಡಿರುವ ದಾಖಲೆ ರಹಿತ ಪ್ರದೇಶಗಳಲ್ಲಿನ ನಿವಾಸಿಗಳಿಗೆ ನೀಡಲಾದ ಹಕ್ಕು ಪತ್ರದ ಸ್ವತ್ತು ಕರ್ನಾಟಕ ಭೂ-ಸುಧಾರಣಾ ಅಧಿನಿಯಮ, 1961ರ ಪ್ರಕರಣ 38ಎ ರಡಿಯಲ್ಲಿ ಮಂಜೂರಾದ ಆಸ್ತಿ ಎಂದು ವರ್ಗೀಕೃತವಾಗಿರತಕ್ಕದ್ದು.

(ಅಃ) **ನಿಗಮ/ ಮಂಡಳಿ/ನಿಯಮಿತ /ಪ್ರಾಧಿಕಾರದ ನಿವೇಶನ/ ಕಟ್ಟಡ;** ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಯಾವುದೇ ನಿಗಮ ಅಥವಾ ಮಂಡಳಿ ಅಥವಾ ನಿಯಮಿತ ಅಥವಾ ಪ್ರಾಧಿಕಾರವು ಆರ್ಜಿಸಿದ ಹಾಗೂ ನಿಗಮ ಅಥವಾ ಮಂಡಳಿ ಅಥವಾ ನಿಯಮಿತ ಅಥವಾ ಪ್ರಾಧಿಕಾರಗಳಲ್ಲಿ ನಿಹಿತವಾಗಿರುವ ಯಾವುದೇ ನಿವೇಶನ ಅಥವಾ ಕಟ್ಟಡಗಳು ನಿಗಮ/ ಮಂಡಳಿ/ ನಿಯಮಿತ /ಪ್ರಾಧಿಕಾರದ ಆಸ್ತಿ ಎಂದು ವರ್ಗೀಕೃತವಾಗಿರತಕ್ಕದ್ದು.

(2) **ಮೇಲ್ಕಂಡ ವರ್ಗೀಕರಣಗಳಲ್ಲಿ ಹೊಸ ಆಸ್ತಿಗಳ ಸೇರ್ಪಡೆ;**

i. ಗ್ರಾಮ ಪಂಚಾಯಿತಿ ಗ್ರೇಡ್ -1/ ಗ್ರೇಡ್-2 ಕಾರ್ಯದರ್ಶಿಗಳು ಅರ್ಜಿಯನ್ನು ಸ್ವೀಕರಿಸಿದ ನಂತರ ಸ್ಥಳ ಪರಿಶೀಲನೆಯನ್ನು ಕೈಗೊಂಡು ನಾಲ್ಕು ಕರ್ತವ್ಯದ ದಿನಗಳಲ್ಲಿ ಪೂರ್ಣ ದಾಖಲೆಗಳ ಪರಿಶೀಲನೆಯೊಂದಿಗೆ ತಂತ್ರಾಂಶದಲ್ಲಿನ ಮಾಹಿತಿಯನ್ನು ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಸಲ್ಲಿಸುವುದು, ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಎರಡು ದಿನಗಳಲ್ಲಿ ಗ್ರಾಮ ಪಂಚಾಯತಿಯ ಅಧ್ಯಕ್ಷರ ಅನುಮೋದನೆಗೆ ಸಲ್ಲಿಸತಕ್ಕದ್ದು. ಅಧ್ಯಕ್ಷರು ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸ್ವೀಕರಿಸಿದ ತರುವಾಯ ಕಾರ್ಯನಿರ್ವಹಿಸುವ (Working Days) ನಾಲ್ಕು ದಿನದೊಳಗಾಗಿ

ತೀರ್ಮಾನಿಸತಕ್ಕದ್ದು. ಒಂದು ವೇಳೆ ಅಧ್ಯಕ್ಷರು ನಾಲ್ಕು ದಿನದೊಳಗಾಗಿ ತೀರ್ಮಾನಿಸಲು ವಿಫಲರಾದರೆ, ಸ್ವಯಂಚಾಲಿತವಾಗಿ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ಶಿಫಾರಸ್ಸು ಅಧ್ಯಕ್ಷರ ತೀರ್ಮಾನವೆಂದು ಭಾವಿಸತಕ್ಕದ್ದು.

ii. ಉಪ ನಿಯಮ-(i)ರಡಿಯ ತೀರ್ಮಾನವನ್ನು ಸ್ವೀಕರಿಸಿದ ನಂತರ ಮೂರು ಕಾರ್ಯನಿರ್ವಹಣಾ ದಿನಗಳಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯು ಕಾಯ್ದೆ ಮತ್ತು ನಿಯಮಗಳ ಅಡಿಯಲ್ಲಿ ಪರಿಶೀಲಿಸತಕ್ಕದ್ದು ಹಾಗೂ ಷರಾದೊಂದಿಗೆ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಹಿಂತಿರುಗಿಸತಕ್ಕದ್ದು. ಒಂದು ವೇಳೆ ಕಾಯ್ದೆ ಮತ್ತು ನಿಯಮಗಳ ಅಡಿಯಲ್ಲಿ ಉಲ್ಲಂಘನೆ ಕಂಡು ಬಂದಲ್ಲಿ, ಅದನ್ನು ಸರಿಪಡಿಸಲು ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಹಿಂತಿರುಗಿಸತಕ್ಕದ್ದು. ನಿಗದಿತ ಅವಧಿಯಲ್ಲಿ ಹಿಂತಿರುಗಿಸದಿದ್ದಲ್ಲಿ ಸ್ವಯಂ-ಚಾಲಿತವಾಗಿ ಪರಿಶೀಲಿಸಲಾಗಿದೆಯೆಂದು (Deemed Verified) ಭಾವಿಸತಕ್ಕದ್ದು. ನಮೂನೆ-11ಎ ಯನ್ನು ಹಿರಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಡಿಜಿಟಲ್ ಸಹಿಯೊಂದಿಗೆ ಎರಡು ದಿನಗಳೊಳಗೆ ಅನುಮೋದಿಸತಕ್ಕದ್ದು. ತಪ್ಪಿದ್ದಲ್ಲಿ ಸ್ವಯಂ-ಚಾಲಿತವಾಗಿ ಅನುಮೋದನೆಯಾಗಿದೆಯೆಂದು (Deemed Approved) ಭಾವಿಸತಕ್ಕದ್ದು. ಅರ್ಜಿದಾರನು ತಂತ್ರಾಂಶದ ಮೂಲಕ ನಿಯಮಾನುಸಾರ ಪ್ರತಿಗಳನ್ನು ಪಡೆಯಬಹುದು. 11ಎ ರಿಜಿಸ್ಟರ್‌ಗೆ ಆಸ್ತಿಯ ವಿವರಗಳನ್ನು ಸೇರಿಸುವುದಕ್ಕೆ ಮುಂಚಿತವಾಗಿ ಅನುಬಂಧ-1 ರಲ್ಲಿ ನಿಗಧಿಪಡಿಸಿರುವ ದಾಖಲೆಗಳನ್ನು ಕಡ್ಡಾಯವಾಗಿ ಪಡೆದು, ಪರಿಶೀಲಿಸಿ ನಂತರ ತಂತ್ರಾಂಶದಲ್ಲಿ ಒಟ್ಟಾರೆಯಾಗಿ 15 ದಿನಗಳೊಳಗೆ ದಾಖಲಿಸತಕ್ಕದ್ದು.

iii. ನಮೂನೆ-11ಎ ರಿಜಿಸ್ಟರ್‌ಗೆ ಹೊಸ ಆಸ್ತಿಯ ವಿವರಗಳ ಸೇರ್ಪಡೆಯನ್ನು ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಅಥವಾ ಗ್ರಾಮ ಪಂಚಾಯಿತಿ ಅಧ್ಯಕ್ಷರು ಸಕಾರಣವಿಲ್ಲದೆ ತಿರಸ್ಕರಿಸಿದಲ್ಲಿ ಬಾಧಿತರಾದ ವ್ಯಕ್ತಿಯು ತಿರಸ್ಕರಿಸಿದ ದಿನಾಂಕದಿಂದ 30 ದಿನಗಳೊಳಗೆ ಜಿಲ್ಲಾ ಪಂಚಾಯಿತಿಯ ಉಪ ಕಾರ್ಯದರ್ಶಿ(ಅಭಿವೃದ್ಧಿ)ಗೆ ಸೂಕ್ತ ದಾಖಲೆಗಳೊಂದಿಗೆ ನಿಯಮ 15(ಅ) ರಂತೆ ಮೇಲ್ಮನವಿ ಸಲ್ಲಿಸತಕ್ಕದ್ದು. ಉಪ ಕಾರ್ಯದರ್ಶಿ (ಅಭಿವೃದ್ಧಿ) ಆದೇಶದಿಂದ ಬಾಧಿತರಾದ ವ್ಯಕ್ತಿಯು, ಆದೇಶವಾದ ದಿನಾಂಕದಿಂದ 30 ದಿನದೊಳಗಾಗಿ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ **ನಿಯಮ 15(ಇ) ರಂತೆ** ಮೇಲ್ಮನವಿ ಸಲ್ಲಿಸತಕ್ಕದ್ದು.

6. **ಹೊಸ ಬಡಾವಣೆ ಅನುಮೋದನೆ/ 11 ಎ ರಿಜಿಸ್ಟರ್‌ಗೆ ಆಸ್ತಿಗಳನ್ನು ಸೇರಿಸುವ ಪ್ರಕ್ರಿಯೆ.-**

**1)** ಎಲ್ಲಾ ಹೊಸ ಬಡಾವಣೆಗಳು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ರ ಉಪಬಂಧಗಳನ್ವಯ ವ್ಯವಸಾಯದ ಭೂಮಿಯನ್ನು ವ್ಯವಸಾಯೇತರ ಭೂಮಿಯಾಗಿ ಬದಲಾವಣೆಯಾಗಿರುವ ಆದೇಶವಾಗಿರತಕ್ಕದ್ದು.

**2)** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961 ರ ಉಪಬಂಧಗಳ ಮೇರೆಗೆ ರಚಿಸಲಾದ ಸ್ಥಳೀಯ ಯೋಜನಾ ಪ್ರದೇಶದ ಅಧಿಕಾರದ ವ್ಯಾಪ್ತಿಯಡಿ ಬರುವ ಗ್ರಾಮ ಪಂಚಾಯತಿಗಳಲ್ಲಿ ಅನುಮೋದಿತ ಲೇಔಟ್ ಪ್ಲಾನನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961 ರ 17 ನೇ ಪ್ರಕರಣದಡಿ ಅಧಿಕಾರ ವ್ಯಾಪ್ತಿಯ ಯೋಜನಾ ಪ್ರಾಧಿಕಾರದಿಂದ ಅನುಮೋದಿತ ವಿನ್ಯಾಸ, ಆದೇಶದ ಪ್ರತಿ ಹಾಗೂ ನಿವೇಶನ ಬಿಡುಗಡೆ ಆದೇಶಗಳು.

**3)** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961 ರ ಹಾಗೂ ಅದರಡಿ ರಚಿಸಲಾದ ವಿನಿಯಮಗಳ ಉಪಬಂಧಗಳ ಮೇರೆಗೆ ಅಧಿಸೂಚಿಸಲಾದ ಸ್ಥಳೀಯ ಯೋಜನಾ ಪ್ರದೇಶದ ಅಧಿಕಾರದ ವ್ಯಾಪ್ತಿಯ ಹೊರಗಡೆ ಬರುವಂತಹ ಗ್ರಾಮ ಪಂಚಾಯತಿಗಳಲ್ಲಿ, ಅನುಮೋದಿತ ಲೇಔಟ್ ಪ್ಲಾನನ್ನು ನಗರ ಮತ್ತು ನಗರ ಯೋಜನಾ ನಿರ್ದೇಶಕ ಅಥವಾ ನಿರ್ದೇಶಕನು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ ಸಂಖ್ಯೆ: 11) ರ 4ಕೆ ಪ್ರಕರಣದ (2)

ನೇ ಉಪ ಪ್ರಕರಣದಡಿ ಅಧಿಕೃತಗೊಳಿಸಿದ ಸಹಾಯಕ ನಿರ್ದೇಶಕ, ನಗರ ಮತ್ತು ನಗರ ಯೋಜನೆಯ ಸಹಾಯಕ ನಿರ್ದೇಶಕ ದರ್ಜೆಗೆ ಕಡಿಮೆ ಇಲ್ಲದ ಅಧಿಕಾರಿಯಿಂದ ತಾಂತ್ರಿಕ ಅನುಮೋದಿತ ವಿನ್ಯಾಸ ಹಾಗೂ ಆದೇಶವನ್ನು The Karnataka Town and country Planning( Development of Land in areas other than Local Planning Areas) Regulations, 2025 ರನ್ವಯ;

i. KTCP., Regulations, 2025ರ ವಿನಿಯಮ 9(2ಎ) ಅಡಿಯಲ್ಲಿ ಸಂಬಂಧಿಸಿದ ಸಕ್ಷಮ ಪ್ರಾಧಿಕಾರದ ತಾಂತ್ರಿಕ ಅನುಮೋದನೆಯನ್ನು ಈ ವಿನಿಯಮಗಳ ನಮೂನೆ-V ರಡಿಯಲ್ಲಿ ಹಿರಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಸ್ವೀಕರಿಸಿದ ನಂತರ, ಬಡಾವಣೆ ನಕ್ಷೆಯ ಪ್ರಕಾರ ರಸ್ತೆಗಳು, ಪಾರ್ಕ್‌ಗಳು, ವಾಹನ ನಿಲ್ದಾಣಗಳು, ನಾಗರೀಕ ಸೌಲಭ್ಯದ ಪ್ರದೇಶಗಳು, ಸಾರ್ವಜನಿಕ ಬಳಕೆಯ ಪ್ರದೇಶಗಳು ಹಾಗೂ ಇತರೇ ಮೂಲ ಭೂತ ಸೌಕರ್ಯಗಳ ಪ್ರದೇಶಗಳ, ಪ್ರದೇಶಗಳ ಆಸ್ತಿಗಳನ್ನು ತೆರಿಗೆ ನಿರ್ಧರಣಾ ವಹಿಗೆ ಸೇರ್ಪಡೆ ಮಾಡಿ ನಮೂನೆಗಳನ್ನು ಬಡಾವಣೆ ಮಾಲೀಕರ ಹೆಸರಿಗೆ ಸ್ವಯಂಚಾಲಿತವಾಗಿ ತಂತ್ರಾಂಶದ ಮೂಲಕ ನೀಡತಕ್ಕದ್ದು.

ii. ಬಡಾವಣೆಯ ಮಾಲೀಕರು, KTCP., Regulations ನ ನಮೂನೆ-VIII ರಲ್ಲಿ ಗ್ರಾಮ ಪಂಚಾಯಿತಿಗೆ ಉಚಿತವಾಗಿ ಲೇಔಟ್ ನಕ್ಷೆಯ ಪ್ರಕಾರ ರಸ್ತೆಗಳು, ಪಾರ್ಕ್‌ಗಳು, ವಾಹನ ನಿಲ್ದಾಣಗಳು, ನಾಗರೀಕ ಸೌಲಭ್ಯದ ಪ್ರದೇಶಗಳು, ಸಾರ್ವಜನಿಕ ಬಳಕೆಯ ಪ್ರದೇಶಗಳು ಹಾಗೂ ಇತರೇ ಮೂಲಭೂತ ಸೌಕರ್ಯಗಳ ಪ್ರದೇಶಗಳನ್ನು ನೋಂದಾಯಿತ ಪರಿತ್ಯಾಜನ ಪತ್ರದ ಮುಖಾಂತರ ವರ್ಗಾಯಿಸತಕ್ಕದ್ದು.

iii. ಬಡಾವಣೆಯ ಮೂಲ ನಿವೇಶನಗಳು ಹಾಗೂ ಬಿಡುಗಡೆಗೊಳಿಸದ ಮಧ್ಯಂತರ ನಿವೇಶನಗಳನ್ನು ಮಾಲೀಕರು ಸಂಬಂಧಿಸಿದ ಗ್ರಾಮ ಪಂಚಾಯಿತಿಗೆ KTCP., Regulationsನ ನಮೂನೆ-IX ರ ಮುಖಾಂತರ ನೋಂದಾಯಿತ ಅಡಮಾನ ಒಪ್ಪಿಗೆ ಪತ್ರ ಮಾಡಿ ಕೊಡತಕ್ಕದ್ದು.

iv. ಹಿರಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಮೇಲಿನ ಪ್ರಕಾರ್ಯಗಳು ಪೂರ್ಣಗೊಂಡ ಒಂದು ದಿನದೊಳಗಾಗಿ KTCP., Regulations ನ ನಮೂನೆ-VIIರಲ್ಲಿ ತಾತ್ಕಾಲಿಕ ವಿನ್ಯಾಸ ಅನುಮೋದಿತ ನಕ್ಷೆಯನ್ನು ನೀಡತಕ್ಕದ್ದು ಮತ್ತು ತಾಂತ್ರಿಕ ವಿನ್ಯಾಸದಲ್ಲಿ ಗುರುತಿಸಲಾದ ಶೇಕಡ 40 ರಷ್ಟು ನಿವೇಶನಗಳಿಗೆ ತಂತ್ರಾಂಶದ ಮೂಲಕ ಬಡಾವಣೆಯ ಮಾಲೀಕರ ಹೆಸರಿಗೆ ನಮೂನೆ ವಿತರಿಸತಕ್ಕದ್ದು.

**4)** ಬಡಾವಣೆಯ ಮಾಲೀಕರು, KTCP., Regulations ನ ವಿನಿಯಮ-11 ರ ಪ್ರಕಾರ ಬಡಾವಣೆ ಅಭಿವೃದ್ಧಿ ಕಾರ್ಯಗಳನ್ನು ಪೂರ್ಣಗೊಳಿಸತಕ್ಕದ್ದು.

i. ಅಭಿವೃದ್ಧಿ ಕಾರ್ಯಗಳನ್ನು ಕರ್ನಾಟಕ ಸರ್ಕಾರದ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಎಸ್ಕಾಂ ಇಲಾಖೆ ಹಾಗೂ ಅವಶ್ಯಕ ಇತರೆ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು ಮೇಲುಸ್ತುವಾರಿ ಮಾಡತಕ್ಕದ್ದು. ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸುವಂತಹ ದರಗಳಲ್ಲಿ ಮೇಲ್ವಿಚಾರಣ ಶುಲ್ಕವನ್ನು ಸರ್ಕಾರವು ನಿಗದಿಪಡಿಸಿದಂತಹ ಇಲಾಖೆಗಳಿಗೆ ಪಾವತಿಸತಕ್ಕದ್ದು.

ii. ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡ ನಂತರ ಲೇಔಟ್‌ನ ಮಾಲೀಕರು KTCP Regulations ನ ನಮೂನೆ-X ರಲ್ಲಿ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡ ಬಗ್ಗೆ ದೃಢೀಕರಣ ಪತ್ರ ಸಲ್ಲಿಸತಕ್ಕದ್ದು ಮತ್ತು ಸೃಷ್ಟಿಸಿರುವಂತಹ ಮೂಲಭೂತ ಸೌಕರ್ಯಗಳ ನಿರ್ವಹಣೆಯನ್ನು ದೋಷದ ಹೊಣೆಗಾರಿಕೆ ಅವಧಿಯು ಪೂರ್ಣಗೊಳ್ಳುವವರೆಗೂ (Defect Liability Period) ನಿರ್ವಹಿಸುವ ಬಗ್ಗೆ ನೋಟರಿ ದೃಢೀಕೃತ ಪತ್ರವನ್ನು ಗ್ರಾಮ ಪಂಚಾಯಿತಿಗೆ ಸಲ್ಲಿಸತಕ್ಕದ್ದು.

iii. ಹಿರಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಮೇಲಿನ ಉಪ ನಿಯಮ (ii)ರಲ್ಲಿ ತಿಳಿಸಿರುವ ಪತ್ರಗಳನ್ನು ಸ್ವೀಕರಿಸಿದ ನಂತರ ಉಪ

ನಿಯಮ(i) ರಲ್ಲಿ ತಿಳಿಸಿರುವಂತಹ ಇಲಾಖೆಗಳಿಂದ ಅಭಿವೃದ್ಧಿ ಕಾಮಗಾರಿ ಪೂರ್ಣಗೊಂಡ ಪ್ರಮಾಣ ಪತ್ರಗಳನ್ನು ಪಡೆದು, ಕಾಮಗಾರಿ ಪೂರ್ಣಗೊಂಡಿರುವ ಬಗ್ಗೆ ಮನವರಿಕೆ ಮಾಡಿಕೊಳ್ಳತಕ್ಕದ್ದು.

**iv.** KTCP., Regulations ನ ವಿನಿಯಮ 12ರಲ್ಲಿ ತಿಳಿಸಿರುವಂತೆ, ನಮೂನೆ-XII ರಲ್ಲಿ ಸಕ್ಷಮ ಪ್ರಾಧಿಕಾರದಿಂದ ಅಂತಿಮ ತಾಂತ್ರಿಕ ಅನುಮೋದಿತ ವಿನ್ಯಾಸ ನಕ್ಷೆಯನ್ನು ಸ್ವೀಕರಿಸಿದ ನಂತರ ಒಂದು ದಿನದೊಳಗಾಗಿ ಹಿರಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಅಂತಿಮ ವಿನ್ಯಾಸ ಅನುಮೋದಿತ ನಕ್ಷೆಯನ್ನು ನೀಡತಕ್ಕದ್ದು. KTCP., Regulationsನ ವಿನಿಯಮ 12(2)ರ ಪ್ರಕಾರ ಉಳಿದ ಶೇಕಡ 60 ರಷ್ಟು ನಿವೇಶನಗಳನ್ನು ನಿಯಮ 5(2) ರನ್ವಯ ಮಾಲೀಕರ ಹೆಸರಿಗೆ ನಮೂನೆಗಳನ್ನು ನೀಡತಕ್ಕದ್ದು.

**v.** ಸಂಬಂಧಿಸಿದ ಗ್ರಾಮ ಪಂಚಾಯಿತಿಗಳು KTCP., Regulationsನ ವಿನಿಯಮ-12(3)ರ ಪ್ರಕಾರ ಉದ್ಯಾನವನಗಳನ್ನು ನಿರ್ವಹಿಸತಕ್ಕದ್ದು. ನಾಗರೀಕ ಸೌಲಭ್ಯ ನಿವೇಶನಗಳನ್ನು ಸರ್ಕಾರವು ಅಧಿಸೂಚಿಸಿದಂತೆ ವಿನಿಯೋಗಿಸತಕ್ಕದ್ದು.

**(5)** ಭೂ ಪರಿವರ್ತಿತ / ಭಾವಿತ ಭೂ-ಪರಿವರ್ತಿತ ಜಮೀನು (ಏಕನಿವೇಶನ)ಗಳನ್ನು ಸಕ್ಷಮ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಪಡೆಯದೆ ತೆರಿಗೆ ವ್ಯಾಪ್ತಿಗೆ ಒಳಪಡಿಸತಕ್ಕದ್ದಲ್ಲ.

## ಅಧ್ಯಾಯ-IV

### 7. ಅಧಿನಿಯಮದ ಪ್ರಕರಣ 199 (ಸಿ) ರಡಿಯಲ್ಲಿ ಆಸ್ತಿಗಳಿಗೆ ತೆರಿಗೆ ವಿಧಿಸುವುದು.-

(1) ಗ್ರಾಮ ಪಂಚಾಯತಿಯು ಮಾದರಿ ಕಟ್ಟಡ ಉಪ ವಿಧಿಗಳ ಉಪಬಂಧಗಳನ್ನು ಉಲ್ಲಂಘಿಸಿ ನಿರ್ಮಿಸಲಾದ ಕಟ್ಟಡ ಅಥವಾ ಪರಿವರ್ತನೆಯಾಗದಿರುವ ಭೂಮಿ ಅಥವಾ ಪರಿವರ್ತನೆಯಾದ ಭೂಮಿ ಆದರೆ, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ಅನುಮೋದನೆ ಆಗದ ಭೂಮಿ. ಅಥವಾ ಅಧಿಭೋಗ ಪ್ರಮಾಣಪತ್ರ ಅಥವಾ ಪೂರ್ಣಗೊಳಿಸಿದ ಪ್ರಮಾಣ ಪತ್ರವನ್ನು ಪಡೆಯದ ಸ್ವಾಧೀನಪಡಿಸಿಕೊಂಡ ಕಟ್ಟಡವನ್ನು ಒಳಗೊಂಡು ಪ್ರತಿಯೊಂದು ಕಟ್ಟಡ, ಖಾಲಿ ಭೂಮಿ ಅಥವಾ ಅವೆರಡರಿಂದಲೂ, ಈ ಉಪಬಂಧವನ್ನು ಸೇರಿಸಲಾದ ದಿನಾಂಕಕ್ಕೆ ಮೊದಲು ಸೃಜಿಸಲಾದ ಸ್ವತ್ತುಗಳಿಗೆ ಮಾತ್ರ ಸರ್ಕಾರಿ ಭೂಮಿ, ಅರಣ್ಯ ಭೂಮಿ, ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಸ್ಥಳೀಯ ನಿಕಾಯ, ಯಾವುದೇ ಶಾಸನಬದ್ಧ ನಿಕಾಯ ಅಥವಾ ಸಂಸ್ಥೆಗೆ ಸೇರಿದ ಭೂಮಿಯನ್ನು ಹೊರತುಪಡಿಸಿ ಸ್ವತ್ತು ತೆರಿಗೆಯನ್ನು ವಿಧಿಸಿ ಸಂಗ್ರಹಿಸತಕ್ಕದ್ದು.

(2) ಅಧಿನಿಯಮದ ಪ್ರಕರಣ 199ಸಿ ಜಾರಿಗೆ ಬಂದ ದಿನಾಂಕದಿಂದ ಅಂತಹ ಕಟ್ಟಡ ಅಥವಾ ನಿವೇಶನಕ್ಕಾಗಿ ವಿಧಿಸಿದ ಸ್ವತ್ತು ತೆರಿಗೆಯು ಮೊದಲ ವರ್ಷಕ್ಕಾಗಿ ಪಾವತಿಸಬೇಕಾದ ತೆರಿಗೆಯು ಎರಡು ಪಟ್ಟಾಗಿರತಕ್ಕದ್ದು ಮತ್ತು ತರುವಾಯ ವರ್ಷಗಳಿಗಾಗಿ ಸ್ವತ್ತು ತೆರಿಗೆಯನ್ನು ಮಾತ್ರ ವಿಧಿಸತಕ್ಕದ್ದು.

(3) ಉಪ ನಿಯಮ (1) ರಲ್ಲಿ ತೆರಿಗೆ ವ್ಯಾಪ್ತಿಗೆ ಒಳಪಡಿಸುವ ಸ್ವತ್ತುಗಳನ್ನು ನಮೂನೆ-11ಬಿ ರಿಜಿಸ್ಟರ್‌ನಲ್ಲಿ ನಿರ್ವಹಿಸತಕ್ಕದ್ದು. ಈ ರಿಜಿಸ್ಟರ್‌ಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2025 (2025ರ ಕರ್ನಾಟಕ ಅಧಿನಿಯಮ

ಸಂಖ್ಯೆ: 27) ಅಧಿಸೂಚನೆಯಾದ ದಿನಾಂಕದ ನಂತರ ಯಾವುದೇ ಹೊಸ ಸ್ವತ್ತುಗಳನ್ನು ಸೇರಿಸತಕ್ಕದ್ದಲ್ಲ.

**ವಿವರಣೆ**: ಈ ಉಪಬಂಧವು ಅರಣ್ಯ, ಪರಿಸರ, ಜೀವಿಶಾಸ್ತ್ರ, ಇಲಾಖೆಯ ಕಾಯ್ದೆ ಮತ್ತು ನಿಯಮಗಳ ಅಡಿಯಲ್ಲಿ ಅಧಿಸೂಚಿಸಿರುವ ಪ್ರದೇಶಗಳಿಗೆ ಅನ್ವಯಿಸುವುದಿಲ್ಲ.

8. **ತಿದ್ದುಪಡಿ ಅಧಿನಿಯಮ ಅಧಿಸೂಚಿಸಿದ ಪೂರ್ವದಲ್ಲಿ ಸೃಜನೆಯಾದ ಆಸ್ತಿಗಳನ್ನು ನಮೂನೆ-11ಬಿ ರಿಜಿಸ್ಟರ್‌ಗೆ ಸೇರಿಸುವ ಪ್ರಕ್ರಿಯೆ.-(1)** ಇಲಾಖೆಯಿಂದ ದಿನಾಂಕ; 14.06.2013 ರ ನಂತರ ನಮೂನೆ-11ಬಿ ಗೆ ಒಳಪಡುವ ಆಸ್ತಿಗಳಿಗೆ ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ಈಗಾಗಲೇ ಗ್ರಾಮ ಪಂಚಾಯತಿಗಳಲ್ಲಿ ನಿರ್ವಹಣೆಯಾಗುತ್ತಿರುವ ನಮೂನೆ-11ಬಿ ಆಸ್ತಿಗಳನ್ನು ಮುಂದುವರೆಸತಕ್ಕದ್ದು. ಈ ಆಸ್ತಿಗಳಿಗೂ ಸಹ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2025 (2025 ರ ಕರ್ನಾಟಕ ಅಧಿನಿಯಮ ಸಂಖ್ಯೆ:27) ಅಧಿಸೂಚನೆಯಾದ ದಿನಾಂಕದಿಂದ ಮೊದಲನೆಯ ವರ್ಷಕ್ಕೆ ಅಂತಹ ಕಟ್ಟಡ ಅಥವಾ ನಿವೇಶನಕ್ಕಾಗಿ ವಿಧಿಸಿದ ಸ್ವತ್ತು ತೆರಿಗೆಯು ಮೊದಲ ವರ್ಷಕ್ಕಾಗಿ ಪಾವತಿಸಬೇಕಾದ ತೆರಿಗೆಯು ಎರಡು ಪಟ್ಟಾಗಿರತಕ್ಕದ್ದು ಮತ್ತು ತರುವಾಯ ವರ್ಷಗಳಿಗಾಗಿ ಸ್ವತ್ತು ತೆರಿಗೆಯನ್ನು ಮಾತ್ರ ವಿಧಿಸತಕ್ಕದ್ದು.

**(2)** ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/64/ಇ-ಆಡಳಿತ/2022, ಬೆಂಗಳೂರು, ದಿನಾಂಕ: 08.08.2022 ರಂತೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಪ್ರತಿಯೊಂದು ಕಟ್ಟಡ ಮತ್ತು ನಿವೇಶನಗಳನ್ನು ನಿಗಧಿತ ನಮೂನೆಯಲ್ಲಿ ಸಮೀಕ್ಷೆ ಮಾಡಿ ತಂತ್ರಾಂಶದಲ್ಲಿ ಸೇರಿಸಿ ತೆರಿಗೆ ವ್ಯಾಪ್ತಿಗೆ ಒಳಪಡಿಸಲು ಆದೇಶಿಸಲಾಗಿರುತ್ತದೆ. ತಂತ್ರಾಂಶದಲ್ಲಿರದ ಆದರೆ, ಸಮೀಕ್ಷೆಯ ಪ್ರಕಾರ ತಂತ್ರಾಂಶದಲ್ಲಿ ತೆರಿಗೆ ವ್ಯಾಪ್ತಿಗೆ ಒಳಪಡಿಸಿರುವ ಪ್ರತಿಯೊಬ್ಬ ಆಸ್ತಿಯ ಮಾಲೀಕನಿಗೂ ಭೂ-ಪರಿವರ್ತನೆಯಾಗಿರುವ ದಾಖಲೆ ಮತ್ತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ ಸಂಖ್ಯೆ: 11) ರಡಿ ಅನುಮೋದಿತ ದಾಖಲೆ, ಗ್ರಾಮ ಪಂಚಾಯತಿಯಿಂದ ಅನುಮೋದಿಸಲ್ಪಟ್ಟ ಕಟ್ಟಡದ ಲೈಸೆನ್ಸ್‌ನ ಪ್ರತಿಯನ್ನು ಸಲ್ಲಿಸಲು ನೋಟೀಸ್ ನೀಡತಕ್ಕದ್ದು.

**(ಅ)** ಕಂದಾಯ ಇಲಾಖೆಯಿಂದ ಭೂ-ಪರಿವರ್ತನೆಯಾಗಿರುವ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ಅನುಮೋದಿತ ನಿವೇಶನ ಹಾಗೂ ಗ್ರಾಮ ಪಂಚಾಯತಿಯಿಂದ ಅನುಮೋದಿತ ಲೈಸೆನ್ಸ್ ಹೊಂದಿರುವ ಆಸ್ತಿಗಳನ್ನು ತಂತ್ರಾಂಶದ ಮೂಲಕ ನಮೂನೆ -11ಎ ರಿಜಿಸ್ಟರ್‌ಗೆ ಸೇರಿಸಿ PID ಸಂಖ್ಯೆಯನ್ನುಸೃಜಿಸತಕ್ಕದ್ದು.

**(ಆ)** ಮೇಲಿನ ಕಂಡಿಕೆ (ಅ) ರಲ್ಲಿ ನಮೂದಿಸಿರುವ ದಾಖಲೆಗಳಲ್ಲಿ ಯಾವುದಾದರೂ ಒಂದು ಅಥವಾ ಅದಕ್ಕಿಂತ ಹೆಚ್ಚಿನ ದಾಖಲೆಗಳನ್ನು ಒದಗಿಸದ ಆಸ್ತಿಗಳನ್ನು ತಂತ್ರಾಂಶದ ಮೂಲಕ ನಮೂನೆ-11ಬಿ ರಿಜಿಸ್ಟರ್‌ಗೆ ಸೇರಿಸಿ ಈ ಕೆಳಕಂಡ ವರ್ಗೀಕೃತ ಆಸ್ತಿಗಳಿಗೆ ಅನುಬಂಧ-2ರಲ್ಲಿ ನಮೂದಿಸಿರುವ ದಾಖಲೆಗಳ ಅನ್ವಯ PID ಸಂಖ್ಯೆಯನ್ನು15 ದಿನದೊಳಗೆ ಸೃಜಿಸತಕ್ಕದ್ದು. ಅಂದರೆ: -

i) ನೊಂದಾಯಿತ ಪ್ರಮಾಣ ಪತ್ರ ಹೊಂದಿರುವ, ಮಾದರಿ ಕಟ್ಟಡ ಉಪ ವಿಧಿಗಳ ಉಪಬಂಧಗಳನ್ನು ಉಲ್ಲಂಘಿಸಿ ಕೃಷಿ ಜಮೀನಿನಲ್ಲಿನ ಅಥವಾ ಭೂ-ಪರಿವರ್ತಿತ ಜಮೀನಿನಲ್ಲಿನ ಕಟ್ಟಡಗಳು.

**ii)** ಭೂ-ಪರಿವರ್ತಿತ / ಪರಿವರ್ತನೆಯಿಲ್ಲದ ಅಥವಾ ಕಂದಾಯ ಭೂಮಿ ಅಥವಾ ಕೃಷಿ ಭೂಮಿಯಲ್ಲಿ ನೊಂದಾಯಿತ ಪ್ರಮಾಣ ಪತ್ರಗಳನ್ನು ಹೊಂದಿರುವ ಸ್ವತ್ತುಗಳು.

**iii)** ಸಕ್ಷಮ ಪ್ರಾಧಿಕಾರದಿಂದ ವಿನ್ಯಾಸ ಅನುಮೋದಿತ ಬಡಾವಣೆಯಲ್ಲಿ ಮಾದರಿ ಕಟ್ಟಡ ಉಪ ವಿಧಿಗಳ ಉಪಬಂಧಗಳನ್ನು ಉಲ್ಲಂಘಿಸಿ ಅಥವಾ ಅಧಿಭೋಗ ಅಥವಾ ಪೂರ್ಣಗೊಳಿಸಿದ ಪ್ರಮಾಣ ಪತ್ರವನ್ನು ಪಡೆಯದೆ ಸ್ವಾಧೀನಪಡಿಸಿಕೊಂಡ ಕಟ್ಟಡಗಳು.

**iv)** ಬಡಾವಣೆ ವಿನ್ಯಾಸ ಅನುಮೋದನೆಯಿಲ್ಲದ, ಆದರೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ, ಉದ್ಯಾನವನ, ನಾಗರೀಕ ಸೌಕರ್ಯ ನಿವೇಶನ, ರಸ್ತೆಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961 ರ ಪ್ರಕರಣ 17 ರನ್ವಯ ಗ್ರಾಮ ಪಂಚಾಯತಿಗೆ ಉಚಿತವಾಗಿ ಪರಿತ್ಯಾಜನಾ ಪತ್ರದ ಮೂಲಕ ವರ್ಗಾಯಿಸಿರುವ/ ವರ್ಗಾಯಿಸಿಕೊಂಡು ಕಂದಾಯ ಭೂಮಿ/ ಭೂ-ಪರಿವರ್ತಿತ ಜಮೀನಿನಲ್ಲಿನ ನಿವೇಶನಗಳು ಮತ್ತು ಕಟ್ಟಡಗಳು.

ಈ ಬಡಾವಣೆಯಲ್ಲಿ ಈಗಾಗಲೇ ವರ್ಗಾವಣೆಗೆ ಒಳಪಟ್ಟಿರುವ ನಿವೇಶನಗಳನ್ನು ಹೊರತುಪಡಿಸಿ ಉಳಿಕೆ ಜಾಗವನ್ನು ಮಾಲೀಕನ ಹೆಸರಿನಲ್ಲಿನ ಏಕ ನಿವೇಶನವೆಂದು ಪರಿಗಣಿಸುವುದು.

ಪರಂತು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2025 ರ ಅಧಿಸೂಚಿತ ದಿನಾಂಕಕ್ಕೆ ಪೂರ್ವದಲ್ಲಿ ತೆರಿಗೆ ವ್ಯಾಪ್ತಿಗೆ ಒಳಪಡದ ಖಾಲಿ ನಿವೇಶನಗಳನ್ನು ಈಗಾಗಲೇ ಅಭಿವೃದ್ಧಿಪಡಿಸಲಾದ ಬಡಾವಣೆಯಲ್ಲಿ ಮೂಲ ಮಾಲೀಕರ ಹೆಸರಿನಲ್ಲಿರುವ ಕಂದಾಯ ಜಮೀನಿನಲ್ಲಿ ನಿವೇಶನಗಳೆಂಬ ಕಾರಣಕ್ಕಾಗಿ ಪ್ರಸ್ತುತ ತೆರಿಗೆ ವ್ಯಾಪ್ತಿಗೆ ಒಳಪಡಿಸಲು ಅವಕಾಶ ಇರುವುದಿಲ್ಲ.

**V)** ಭೂ-ಪರಿವರ್ತಿತ / ಭಾವಿತ ಭೂ-ಪರಿವರ್ತಿತ ಜಮೀನುಗಳು (ಏಕನಿವೇಶನ). **ಈ** ಜಮೀನುಗಳನ್ನು ಸಕ್ಷಮ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಪಡೆಯದೆ ವಿಭಜಿಸತಕ್ಕದ್ದಲ್ಲ.

(ಇ) ಮೇಲಿನ ಕಂಡಿಕೆ ಅ) ಮತ್ತು ಆ) ಆಸ್ತಿಗಳನ್ನು ಮಾಲೀಕತ್ವದ ದಾಖಲೆಗಳ ಅನ್ವಯ ಗ್ರಾಮ ಪಂಚಾಯಿತಿ ಗ್ರೇಡ್ -1/ಗ್ರೇಡ್-2 ಕಾರ್ಯದರ್ಶಿಗಳು ಪೂರ್ಣ ದಾಖಲೆಗಳ ಪರಿಶೀಲನೆಯೊಂದಿಗೆ ತಂತ್ರಾಂಶದಲ್ಲಿನ ಮಾಹಿತಿಯನ್ನು ನಾಲ್ಕು ಕರ್ತವ್ಯದ ದಿನಗಳಲ್ಲಿ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಸಲ್ಲಿಸುವುದು. ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಎರಡು ದಿನಗಳಲ್ಲಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರ ಅನುಮೋದನೆಗೆ ಸಲ್ಲಿಸತಕ್ಕದ್ದು. ಅಧ್ಯಕ್ಷರು ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸ್ವೀಕರಿಸಿದ ತರುವಾಯ ಕಾರ್ಯನಿರ್ವಹಿಸುವ (Working Days) ನಾಲ್ಕು ದಿನದೊಳಗಾಗಿ ತೀರ್ಮಾನಿಸತಕ್ಕದ್ದು. ಒಂದು ವೇಳೆ ಅಧ್ಯಕ್ಷರು ನಾಲ್ಕು ದಿನದೊಳಗಾಗಿ ತೀರ್ಮಾನಿಸಲು ವಿಫಲರಾದರೆ, ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ಶಿಫಾರಸ್ಸು ಅಧ್ಯಕ್ಷರ ತೀರ್ಮಾನವೆಂದು ಭಾವಿಸತಕ್ಕದ್ದು.

(ಈ) ಮೇಲಿನ ಉಪ ನಿಯಮ (ಇ) ರಡಿಯ ತೀರ್ಮಾನವನ್ನು ಸ್ವೀಕರಿಸಿದ ನಂತರ ಮೂರು ಕಾರ್ಯನಿರ್ವಹಣಾ ದಿನಗಳಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯು ಕಾಯ್ದೆ ಅಥವಾ ನಿಯಮಗಳ ಅಡಿಯಲ್ಲಿ ಪರಿಶೀಲಿಸತಕ್ಕದ್ದು ಹಾಗೂ ಷರಾದೊಂದಿಗೆ ಹಿರಿಯ ಪಂಚಾಯತಿ

ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಹಿಂತಿರುಗಿಸತಕ್ಕದ್ದು. ಒಂದು ವೇಳೆ ಕಾಯ್ದೆ ಮತ್ತು ನಿಯಮಗಳ ಅಡಿಯಲ್ಲಿ ಉಲ್ಲಂಘನೆ ಕಂಡು ಬಂದಲ್ಲಿ, ಅದನ್ನು ಸರಿಪಡಿಸಲು ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಹಿಂತಿರುಗಿಸತಕ್ಕದ್ದು. ನಿಗದಿತ ಅವದಿಯಲ್ಲಿ ಹಿಂತಿರುಗಿಸದಿದ್ದಲ್ಲಿ ಸ್ವಯಂ-ಚಾಲಿತವಾಗಿ ಪರಿಶೀಲಿಸಲಾಗಿದೆಯೆಂದು (Deemed Verified) ಭಾವಿಸತಕ್ಕದ್ದು. ನಮೂನೆ-11ಎ ಯನ್ನು ಹಿರಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿ ಡಿಜಿಟಲ್ ಸಹಿಯೊಂದಿಗೆ ಎರಡು ದಿನಗಳೊಳಗೆ ಅನುಮೋದಿಸತಕ್ಕದ್ದು. ತಪ್ಪಿದ್ದಲ್ಲಿ ಸ್ವಯಂ-ಚಾಲಿತವಾಗಿ ಅನುಮೋದನೆಯಾಗಿದೆಯೆಂದು (Deemed Approved) ಭಾವಿಸತಕ್ಕದ್ದು. ಅರ್ಜಿದಾರನು ತಂತ್ರಾಂಶದ ಮೂಲಕ ನಿಯಮಾನುಸಾರ ಪ್ರತಿಗಳನ್ನು ಪಡೆಯಬಹುದು. ಒಂದು ವೇಳೆ ಈ ಆಸ್ತಿಗಳು ಸರ್ಕಾರಿ ಭೂಮಿ, ಅರಣ್ಯ ಭೂಮಿ, ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಸ್ಥಳೀಯ ನಿಕಾಯ, ಯಾವುದೇ ಶಾಸನಬದ್ಧ ನಿಕಾಯ ಅಥವಾ ಸಂಸ್ಥೆಗೆ ಸೇರಿದ ಆಸ್ತಿಯಾಗಿದ್ದರೆ ಅಂತಹ ಆಸ್ತಿಗಳನ್ನು ತಂತ್ರಾಂಶದಿಂದ ಕೈಬಿಡುವುದು ಮತ್ತು ಅಂತಹ ಆಸ್ತಿಗಳಿಂದ ತೆರಿಗೆಯನ್ನು ಪಡೆಯತಕ್ಕದ್ದಲ್ಲ.

(ಉ) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2025 ಅಧಿಸೂಚನೆಯಾದ ದಿನಾಂಕಕ್ಕೆ ಮುಂಚಿತವಾಗಿ ಸೃಜನೆಯಾಗಿರುವ ಕಟ್ಟಡ ಮತ್ತು ನಿವೇಶನಗಳು, ಗ್ರಾಮ ಪಂಚಾಯತಿಯು ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಕೈಬಿಡಲಾಗಿದೆ ಎಂದು ಬಾಧಿತರಾದ ವ್ಯಕ್ತಿಗಳು/ ಸಂಸ್ಥೆಗಳು ಮತ್ತು ಮೇಲಿನ ಉಪಬಂಧಗಳನ್ನು ಜಾರಿ ಮಾಡುವಾಗ ಗ್ರಾಮ ಪಂಚಾಯತಿಯ ತೀರ್ಮಾನದಿಂದ ಬಾಧಿತರಾದ ವ್ಯಕ್ತಿಗಳು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಉಪ ನಿಯಮ (15)ರಲ್ಲಿ ಮೇಲ್ಮನವಿ ಸಲ್ಲಿಸಬಹುದು.

ಪರಂತು, ಈ ನಿಯಮಗಳು ಅಧಿಸೂಚನೆಯಾದ ದಿನಾಂಕದ ಮೂರು ತಿಂಗಳ ನಂತರ ಈ ಮೇಲಿನ ಉಪ ನಿಯಮಗಳಡಿ ಮೇಲ್ಮನವಿ ಸಲ್ಲಿಸಲು ಅವಕಾಶ ಇರುವುದಿಲ್ಲ.

**9. ತೆರಿಗೆ ನಿರ್ಧರಣಾ ವಿಧಾನ. - (1)** ಕಟ್ಟಡ ಮತ್ತು ಖಾಲಿ ಜಾಗಗಳ ಮೇಲೆ ನಿರ್ಧರಿಸಬಹುದಾದ ತೆರಿಗೆಯ ಲೆಕ್ಕಾಚಾರದ ವಿಧಿ ವಿಧಾನಗಳು ಅಧಿನಿಯಮದ ಅನುಸೂಚಿ-IVಕ್ಕೆ ಅನುಗುಣವಾಗಿ ಇರತಕ್ಕದ್ದು.

**(2)** ತೆರಿಗೆಗೆ ಒಳಪಡುವ ವಸತಿ, ವಾಣಿಜ್ಯ, ವಸತಿಯೇತರ, ಕೈಗಾರಿಕೆ, ಇತರೆ ಉದ್ದೇಶದ ಅಭಿವೃದ್ಧಿ ಹೊಂದದ ಭೂ-ಪರಿವರ್ತಿತ ಖಾಲಿ ಜಮೀನು ಅಂದರೆ ಭೂಪರಿವರ್ತನೆಯಾದ ನಂತರ ಸಕ್ಷಮ ಪ್ರಾಧಿಕಾರದಿಂದ ಸ್ವತ್ತಿನ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆಯದೆ ಸ್ವತ್ತಿನ ಒಳಗೆ ಮೂಲಭೂತ ಸೌಕರ್ಯಗಳಾದ ಒಳಚರಂಡಿ, ರಸ್ತೆಗಳು ಇತ್ಯಾದಿ ಅಭಿವೃದ್ಧಿಪಡಿಸದೆ ಇರುವ ಜಮೀನಿನ ಬಂಡವಾಳ ಮೌಲ್ಯವನ್ನು ಕರ್ನಾಟಕ ನೊಂದಣಿ ಮತ್ತು ಮುದ್ರಾಂಕ ಇಲಾಖೆಯು, ಕರ್ನಾಟಕ ಮುದ್ರಾಂಕ ಅಧಿನಿಯಮ 1957ರ 45ಬಿ ಪ್ರಕರಣದಡಿಯಲ್ಲಿ ಪ್ರಕಟಿಸಲಾದ ಅನುಬಂಧ-1(1)(1)(ಅ) ಮತ್ತು 1(1)(2)ರಲ್ಲಿ ನಮೂದಿಸಿರುವ ಮಾರ್ಗಸೂಚಿ ದರಗಳಂತೆ ನಿರ್ಧರಿಸುವುದು ಮತ್ತು ಹೀಗೆ ನಿರ್ಧರಿಸಲಾದ ಬಂಡವಾಳ ಮೌಲ್ಯಗಳನ್ನು ಆಧರಿಸಿ ನಮೂನೆ 11ಬಿ ಆಸ್ತಿಗಳಿಗೂ ಈ ನಿಯಮಗಳ ಕೋಷ್ಟಕ-1ರಲ್ಲಿ ವಿವರಿಸಿದಂತೆ ತೆರಿಗೆಯ ಪ್ರಮಾಣವನ್ನು ನಿರ್ಧರಿಸುವುದು.

**(ಉಂ)** ಹೋಂ-ಸ್ಟೇಗಳಿಗೆ ವಸತಿ ಕಟ್ಟಡದ ಮತ್ತು ಖಾಲಿ ಜಾಗಗಳಿಗೆ ವಿಧಿಸುವ ತೆರಿಗೆ ದರದಲ್ಲಿ ತೆರಿಗೆಯನ್ನು ವಿಧಿಸತಕ್ಕದ್ದು. ಈ ಉಪಬಂಧ ಪ್ರವಾಸೋದ್ಯಮ ಇಲಾಖೆಯ ನೀತಿಯಲ್ಲಿ ಅಳವಡಿಸಿಕೊಂಡಿರುವ ಅವಧಿಗೆ ಮಾತ್ರ ಜಾರಿಯಲ್ಲಿರುತ್ತದೆ. ಮಾಲೀಕರು ಹೋಂ-ಸ್ಟೇ ಕಟ್ಟಡಗಳಲ್ಲಿ ವಾಸಿಸದೆ ತನ್ನ ಏಜೆಂಟ್ ಅಥವಾ ಇತರ ರೀತಿಯಲ್ಲಿ ನಡೆಸುತ್ತಿದ್ದರೆ ಕರ್ನಾಟಕ ಪ್ರವಾಸೋದ್ಯಮ ನೀತಿಯ ಪ್ರಕಾರ ಅದನ್ನು Bed and Breakfast ಎಂದು ವಿವರಿಸಲಾಗಿದೆ. ಇಂತಹ ಕಟ್ಟಡಗಳಿಗೆ ವಾಣಿಜ್ಯ ದರದಲ್ಲಿ ತೆರಿಗೆಯನ್ನು ವಿಧಿಸತಕ್ಕದ್ದು; ಮತ್ತು

**(ಅಃ)** ಮೇಲಿನ (ಇ) ಉಪ ನಿಯಮದಡಿ ವಿನಾಯಿತಿಯನ್ನು ಕೋರುವಂತಹ ಸಂಸ್ಥೆ/ವ್ಯಕ್ತಿಯು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಮನವಿಯನ್ನು ಸಂಪೂರ್ಣ ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು. ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯು ಸಂಬಂಧಪಟ್ಟ ಗ್ರಾಮ ಪಂಚಾಯತಿಗೆ ನೋಟೀಸ್ ನೀಡಿ, ಅಭಿಪ್ರಾಯವನ್ನು ಪಡೆದು ನಿಯಮಾನುಸಾರ ಪರಿಶೀಲಿಸಿ ಆದೇಶವನ್ನು ಹೊರಡಿಸತಕ್ಕದ್ದು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಆದೇಶಕ್ಕೆ ಉಭಯತ್ರರರು ಬದ್ಧವಾಗಿರತಕ್ಕದ್ದು ಹಾಗೂ ಅವರ ಆದೇಶವು ಅಂತಿಮವಾಗಿರತಕ್ಕದ್ದು.

11. **ತೆರಿಗೆ ನಿರ್ಧರಣೆ, ಬೇಡಿಕೆ, ವಸೂಲಾತಿ ಮತ್ತು ಬಾಕಿ ವಹಿಯ ಉದ್ಧೃತ ಭಾಗ ನೀಡುವುದು**:-ತೆರಿಗೆ ನಿರ್ಧರಣೆ, ತೆರಿಗೆ ಬೇಡಿಕೆ, ವಸೂಲಾತಿ ಮತ್ತು ಬಾಕಿ ವಹಿಗಳಲ್ಲಿನ ವಿವರಗಳನ್ನು ಒಳಗೊಂಡ ನಮೂನೆ-11ಎ ಮತ್ತು ನಮೂನೆ-11ಬಿಯ ಉದ್ಧೃತ ಭಾಗವನ್ನು ಆಸ್ತಿಯ ಮಾಲೀಕನಿಗೆ ಅಥವಾ ಅಂತಹ ಮಾಲೀಕನು ಅಧಿಕಾರ ನೀಡಿದ ವ್ಯಕ್ತಿಗೆ ತಂತ್ರಾಂಶದ ಮೂಲಕ ನೀಡತಕ್ಕದ್ದು.

12. **ಆಸ್ತಿ ವಿವರಗಳ ವಹಿಯಲ್ಲಿ ಬದಲಾವಣೆ (ಮ್ಯುಟೇಷನ್)**.-(1) ಗ್ರಾಮ ಪಂಚಾಯತಿಯ ತೆರಿಗೆಗೆ ಒಳಪಡುವ ಯಾವುದೇ ಭೂಮಿ ಮತ್ತು ಕಟ್ಟಡಗಳಿಗೆ ಸಂಬಂಧಿಸಿದಂತೆ ಸಂದರ್ಭಾನುಸಾರ.

**(ಅ)** ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ತೆರಿಗೆ ನಿರ್ಧರಣೆಗೆ ಒಳಪಟ್ಟಿರುವ ಯಾವುದೇ ಭೂಮಿ ಮತ್ತು ಕಟ್ಟಡಗಳು ಆಸ್ತಿ ವಿಭಜನೆ ಅಥವಾ ಗಿಫ್ಟ್ ಡೀಡ್ ಅಥವಾ ವಿಲ್ ಅಥವಾ ಸೇಲ್ ಡೀಡ್ ಅಥವಾ ರಿಲೀಜ್ ಡೀಡ್ ಅಥವಾ ವರ್ಗಾವಣೆ ಅಥವಾ ಸೆಟಲ್‌ಮೆಂಟ್ ಡೀಡ್ ಅಥವಾ ನ್ಯಾಯಾಲಯದ ಆದೇಶ ಅಥವಾ ಒಟ್ಟುಗೂಡಿಸು ಅಥವಾ ವಿಭಾಗ ಪತ್ರ ಅಥವಾ ಅದಲು ಬದಲು ಅಥವಾ ಬ್ಯಾಂಕ್ ಮೂಲಕ ಹರಾಜು ಅಥವಾ ಇತರೆ ನೋಂದಾಯಿತ ಪತ್ರದಂತೆ ಮಾಲೀಕನ ಹೆಸರು ಅಥವಾ ಆಸ್ತಿಯ ಚೆಕ್ಕುಬಂದಿ ಅಥವಾ ಅಳತೆ ಅಥವಾ ಇತರೆ ವಿವರಗಳು ಬದಲಾವಣೆಯಾದರೆ;

**(ಆ)** ಗ್ರಾಮ ಪಂಚಾಯತಿ ತೆರಿಗೆಗೆ ಒಳಪಡುವ ಯಾವುದೇ ಭೂಮಿ ಮತ್ತು ಕಟ್ಟಡಗಳ ವಿವರಗಳು ಆಸ್ತಿ ವಿವರಗಳ ವಹಿಯಲ್ಲಿ ತಪ್ಪಾಗಿ ದಾಖಲಾಗಿದ್ದರೆ ಅಥವಾ ತಿದ್ದುಪಡಿಯ ಅವಶ್ಯಕವಿದ್ದರೆ ಅಥವಾ ರದ್ದುಗೊಳಿಸಬೇಕಾದರೆ;

**(ಇ)** ಗ್ರಾಮ ಪಂಚಾಯತಿ ತೆರಿಗೆಗೆ ಒಳಪಡುವ ಯಾವುದೇ ಭೂಮಿಯಲ್ಲಿ ಹೊಸದಾಗಿ ನಿರ್ಮಿಸಿದ ಕಟ್ಟಡ ಮತ್ತು ಪುನರ್ ನಿರ್ಮಿಸಿದ, ವಿಸ್ತರಿಸಿದ ಕಟ್ಟಡಗಳ ವಿವರಗಳನ್ನು ಸೇರ್ಪಡೆ ಮತ್ತು ಮಾರ್ಪಾಟು ಮಾಡಬೇಕಾದರೆ;

**(ಈ)** ಮೃತ ಮಾಲೀಕನ ಕಾನೂನು ಸಮ್ಮತ ವಾರಸುದಾರರ ಹೆಸರನ್ನು ಸೇರ್ಪಡೆ ಮಾಡಬೇಕಾದರೆ; ಅಂತಹ ನಮೂದನ್ನು ಆಸ್ತಿ ವಿವರಗಳ ವಹಿಯಲ್ಲಿ ಸೇರಿಸುವ ಅಥವಾ ತೆಗೆದು ಹಾಕುವ ಮೂಲಕ ಬದಲಾಯಿಸಬಹುದು.

(2) ಯಾವುದೇ ವ್ಯಕ್ತಿಯು ಉಪ ನಿಯಮ (ಅ) ಹೊರತುಪಡಿಸಿ ಅಂತಹ ಯಾವುದೇ ಬದಲಾವಣೆಯ ಬಗ್ಗೆ ಅಗತ್ಯ ದಾಖಲೆಗಳೊಂದಿಗೆ ಗ್ರಾಮ ಪಂಚಾಯಿತಿಗೆ ಕೋರಿಕೆಯ ಅರ್ಜಿಯನ್ನು ಸಲ್ಲಿಸತಕ್ಕದ್ದು.

**(3)** ತೆರಿಗೆಗೆ ಒಳಪಡುವ ವಸತಿ, ವಾಣಿಜ್ಯ, ವಸತಿಯೇತರ, ಕೈಗಾರಿಕೆ, ಇತರ ಉದ್ದೇಶಕ್ಕಾಗಿ ಭೂ-ಪರಿವರ್ತನೆಯಾದ ನಂತರ ಸಕ್ಷಮ ಪ್ರಾಧಿಕಾರದಿಂದ ಸ್ವತ್ತಿನ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆದ ಹಾಗೂ ಸ್ವತ್ತಿನ ಒಳಗೆ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿದ ಖಾಲಿ ಜಮೀನು/ ಖಾಲಿ ನಿವೇಶನದ ಬಂಡವಾಳ ಮೌಲ್ಯವನ್ನು ಕರ್ನಾಟಕ ನೊಂದಣಿ ಮತ್ತು ಮುದ್ರಾಂಕ ಇಲಾಖೆಯು, ಕರ್ನಾಟಕ ಮುದ್ರಾಂಕ ಅಧಿನಿಯಮ 1957ರ 45ಬಿ ಪ್ರಕರಣದಡಿಯಲ್ಲಿ ಪ್ರಕಟಿಸಲಾದ ಅನುಬಂಧ-2 ರಲ್ಲಿ ನಮೂದಿಸಿರುವ ನಿವೇಶನ ಮಾರ್ಗಸೂಚಿ ದರಗಳಂತೆ ನಿರ್ಧರಿಸುವುದು. ಮತ್ತು ಹೀಗೆ ನಿರ್ಧರಿಸಲಾದ ಬಂಡವಾಳ ಮೌಲ್ಯಗಳನ್ನು ಆಧರಿಸಿ ಈ ನಿಯಮದ ಕೋಷ್ಟಕ-1ರಲ್ಲಿ ವಿವರಿಸಿದಂತೆ ತೆರಿಗೆಯ ಪ್ರಮಾಣವನ್ನು ನಿರ್ಧರಿಸುವುದು:

**(4)** ತೆರಿಗೆಗೆ ಒಳಪಡುವ ವಸತಿ, ವಾಣಿಜ್ಯ, ವಸತಿಯೇತರ, ಕೃಷಿ ಆಧಾರಿತ ಉತ್ಪಾದನಾ ಘಟಕದ ಕಟ್ಟಡಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಮುದ್ರಾಂಕ ಅಧಿನಿಯಮ 1957ರ 45 ಬಿ ಪ್ರಕರಣದಡಿಯಲ್ಲಿ ಪ್ರಕಟಿಸಲಾದ ಅನುಬಂಧ-2ರಲ್ಲಿ ನಮೂದಿಸಿರುವ ನಿವೇಶನ ದರಗಳಂತೆ ಖಾಲಿ ನಿವೇಶನದ ಬಂಡವಾಳ ಮೌಲ್ಯ ಹಾಗೂ ಅನುಬಂಧ-1(2) ರಲ್ಲಿನ ಪ್ರಸ್ತಾವಿತ ಕಟ್ಟಡಗಳ ತರಹದ ತಳ ಮಹಡಿ/ ನೆಲ ಮಹಡಿ/ ಮೇಲ್ಮಹಡಿ ದರಗಳ ಆಧಾರದ ಮೇಲೆ ಕಟ್ಟಡದ ಚದರ ಮೀಟರ್‌ಗೆ ಇರುವ ಮಾರ್ಗಸೂಚಿ ದರವನ್ನು ನಿರ್ಮಿತ ಕಟ್ಟಡದ ಒಟ್ಟು ವಿಸ್ತೀರ್ಣಕ್ಕೆ ಲೆಕ್ಕಾಚಾರ ಮಾಡಿದಾಗ ಬರುವ ಮೌಲ್ಯದಲ್ಲಿ ಸವಕಳಿ ಮೌಲ್ಯವನ್ನು ಕಳೆದ ನಂತರದ ಒಟ್ಟು ಬಂಡವಾಳ ಮೌಲ್ಯದ ಮೇಲೆ ಈ ನಿಯಮಗಳ ಕೋಷ್ಟಕ-2ರಲ್ಲಿ ವಿವರಿಸಿದಂತೆ ತೆರಿಗೆಯನ್ನು ನಿರ್ಧರಿಸತಕ್ಕದ್ದು.

**(5)** ತೆರಿಗೆಗೆ ಒಳಪಡುವ ಅಪಾರ್ಟ್ಮೆಂಟ್/ ಫ್ಲಾಟ್/ ವಿಲ್ಲಾಮೆಂಟ್/ ರೋ ಹೌಸ್/ ಟೆನಮೆಂಟ್ / ಬಹು ಮಾಲೀಕತ್ವದ ಕಟ್ಟಡಗಳ ಬಂಡವಾಳ ಮೌಲ್ಯವನ್ನು ಕರ್ನಾಟಕ ಮುದ್ರಾಂಕ ಅಧಿನಿಯಮ 1957ರ 45ಬಿ ಪ್ರಕರಣದ ಅಡಿಯಲ್ಲಿ ಪ್ರಕಟಿಸಲಾದ ಅನುಬಂಧ-2ರಲ್ಲಿಯ ಸೂಪರ್ ಬಿಲ್ಟ್ಅಪ್ ಏರಿಯಾ ದರಗಳಿಗೆ ಹೆಚ್ಚುವರಿ ಅಂತಸ್ತಿನ ಮೌಲ್ಯ ಮಾತ್ರ ಅಳವಡಿಸಿ, ಅನುಬಂಧ-3 ರಲ್ಲಿಯ ಸೂಪರ್ ಬಿಲ್ಟ್ಅಪ್ (Built-up) ಏರಿಯಾದ ದರಗಳಿಗೆ ಹೆಚ್ಚುವರಿ ಅಂತಸ್ತಿನ ಮೌಲ್ಯ ಮತ್ತು ಮೇಲಂತಸ್ತು, ವಿಶೇಷ ಸವಲತ್ತು ದರಗಳನ್ನು ಕೋಷ್ಟಕ-3ರಲ್ಲಿರುವಂತೆ ಇರತಕ್ಕದ್ದು.

**(6)** ತೆರಿಗೆಗೆ ಒಳಪಡುವ ಕೈಗಾರಿಕೆ, ಉತ್ಪಾದನಾ ಘಟಕ, ತಯಾರಿಕಾ ಘಟಕಗಳು, ಕಾರ್ಖಾನೆಗಳು, ಐಟಿ ಪಾರ್ಕುಗಳು, ಹಾರ್ಡವೇ ಪಾರ್ಕ್, ಟೆಕ್ಸ್‌ಟೈಲ್ ಪಾರ್ಕ್, ಬಯೋಟೆಕ್ ಪಾರ್ಕ್, ಏರ್‌ಪೋರ್ಟ್, ಜಲವಿದ್ಯುತ್ ಘಟಕ, ಸೋಲಾರ್ ಸ್ಥಾವರ, ಸೋಲಾರ್ ಪಾರ್ಕ್, ವಿಂಡ್ ಮಿಲ್, ದೂರ ಸಂಪರ್ಕ ಮೂಲ ಸೌಕರ್ಯ ಟವರ್, ಇತ್ಯಾದಿ ತತ್ಸಮಾನ ಟವರ್‌ಗಳು, ದೂರ ಸಂಪರ್ಕ ಮೂಲ ಸೌಕರ್ಯ ಅಳವಡಿಕೆ ಕಂಬ ಇತ್ಯಾದಿ ತತ್ಸಮಾನ ಪೋಲ್/ಕಂಬಗಳು, ವಿಮಾನ ನಿಲ್ದಾಣದ ರನ್‌ವೇ, ಖಾಸಗಿ ರೈಲ್ವೆ, ಖಾಸಗಿ ರಸ್ತೆ ಜಾಗ ಮತ್ತು ಇವುಗಳಿಗೆ ಸಂಬಂಧಿಸಿದ ಪ್ರದೇಶ ಇತ್ಯಾದಿಗಳು, ಕೆ.ಐ.ಎ.ಡಿ.ಬಿ. /ಕೆ. ಎಸ್. ಎಸ್.ಐ.ಡಿ.ಸಿ. ಕೈಗಾರಿಕಾ ಪ್ರದೇಶದ ಹಾಗೂ ಇತರೆ ವಿಶೇಷ ಆರ್ಥಿಕ ವಲಯದ ಕೈಗಾರಿಕಾ ಪ್ರದೇಶ ಅಥವಾ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದ ವಲಯಗಳ ಕೈಗಾರಿಕಾ/ ಘಟಕಗಳ ಕಟ್ಟಡದ ಬಂಡವಾಳ ಮೌಲ್ಯವನ್ನು ಕರ್ನಾಟಕ ಮುದ್ರಾಂಕ ಅಧಿನಿಯಮ 1957ರ 45ಬಿ ಪ್ರಕರಣ ದಡಿಯಲ್ಲಿ ಪ್ರಕಟಿಸಲಾದ ಅನುಬಂಧ-1(2) ರಲ್ಲಿನ ಪ್ರಸ್ತಾವಿತ ಕಟ್ಟಡಗಳ ತರಹದ ತಳ ಮಹಡಿ/ ನೆಲಮಹಡಿ/

ಮೇಲ್ಮಹಡಿ ದರಗಳ ಆಧಾರದ ಮೇಲೆ ಮತ್ತು ಅವುಗಳು ಹೊಂದಿರುವ ಅಭಿವೃದ್ಧಿ ಹೊಂದದ ಖಾಲಿ ಭೂಪರಿವರ್ತಿತ ಜಮೀನಿಗೆ ಅನುಬಂಧ-1(2) ರಲ್ಲಿನ ನಮೂದಿಸಿರುವ ದರಗಳ ಆಧಾರದ ಮೇಲೆ ಹಾಗೂ ಖಾಲಿ ನಿವೇಶನಕ್ಕೆ ಅನುಬಂಧ-2ರಲ್ಲಿ ನಮೂದಿಸಿರುವ ದರಗಳ ಆಧಾರದ ಮೇಲೆ ಕೋಷ್ಟಕ-4ರಲ್ಲಿರುವಂತೆ ಇರತಕ್ಕದ್ದು.

**(7)** ಕರ್ನಾಟಕ ಸರ್ಕಾರದ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಅಧಿಸೂಚನೆ ಸಂಖ್ಯೆ :ಪಿಡಬ್ಲೂಡಿ 35 ಆರ್‌ಡಿಎಫ್ 2010 ಬೆಂಗಳೂರು, ದಿನಾಂಕ:24.06.2014 ರಡಿಯಲ್ಲಿ ಕಟ್ಟಡಗಳ ವಾರ್ಷಿಕ ಸವಕಳಿ ದರಗಳು ಮತ್ತು ಅಧಿಸೂಚನೆಯ ಮೂಲಕ ಕಾಲ ಕಾಲಕ್ಕೆ ಪ್ರಕಟಿಸುವ ವಾರ್ಷಿಕ ಸವಕಳಿಯ ಮೌಲ್ಯವು ಕೋಷ್ಟಕ-5ರಂತೆ ಇರತಕ್ಕದ್ದು.

**(8)**ಕರ್ನಾಟಕ ಮುದ್ರಾಂಕ ಅಧಿನಿಯಮ, 1957 ರಡಿಯಲ್ಲಿ ಪ್ರಕಟಿಸಲಾದ ಮಾರ್ಗಸೂಚಿಯಂತೆ ಅಪಾರ್ಟ್‌ಮೆಂಟ್/ ಫ್ಲಾಟ್/ ವಿಲ್ಲಾಮೆಂಟ್/ ರೋ ಹೌಸ್/ ಟೆನಮೆಂಟ್/ ಬಹು ಮಾಲೀಕತ್ವದ ಕಟ್ಟಡಗಳಿಗೆ ಸಂಬಂಧಿಸಿದಂತೆ ಸ್ವತ್ತಿನ ಒಟ್ಟು ಮೌಲ್ಯಗಳಿಗೆ ಅನ್ವಯಿಸುವ ಪಾರ್ಕಿಂಗ್ (ವಾಹನ ನಿಲ್ದಾಣ) ದರಗಳು ನಿಗಧಿಪಡಿಸಿದಂತೆ ಇರತಕ್ಕದ್ದು.

**(9)** ವಸತಿ ಕಟ್ಟಡ ಅಥವಾ ಕಟ್ಟಡದ ಯಾವುದೇ ಭಾಗವನ್ನು ಸ್ವಂತಕ್ಕೆ ಬಳಸದೇ ವಾಸದ ಉದ್ದೇಶಕ್ಕಾಗಿ ಬಾಡಿಗೆಗೆ ನೀಡಿದ್ದಲ್ಲಿ, ಅಂತಹ ಕಟ್ಟಡಗಳಿಗೆ ತೆರಿಗೆ ನಿರ್ಧರಿಸುವಾಗ ಈ ನಿಯಮದ ಕೋಷ್ಟಕ-2ರಲ್ಲಿನ ವಾಣಿಜ್ಯ ಕಟ್ಟಡಗಳ ತೆರಿಗೆಯ ದರಗಳ ಶೇಕಡ 50ರಷ್ಟು ಕಡಿಮೆ ದರಗಳನ್ನು ಅಳವಡಿಸತಕ್ಕದ್ದು. ಮತ್ತು,

ವಸತಿ ಕಟ್ಟಡವನ್ನು ಅಥವಾ ಕಟ್ಟಡದ ಯಾವುದೇ ಭಾಗವನ್ನು ಸ್ವಂತಕ್ಕೆ ಬಳಸದೆ ಅಥವಾ ಸ್ವಂತದೊಂದಿಗೆ ವಾಣಿಜ್ಯ ಉದ್ದೇಶಕ್ಕಾಗಿ ಅಥವಾ ಯಾವುದೇ ಛಾವಣಿ ಆಧಾರಿತ ಮೂಲ ಸೌಕರ್ಯ ಟವರ್/ ಕಂಬದ ರಚನೆಗೆ ಬಾಡಿಗೆಗೆ ನೀಡಿದ್ದಲ್ಲಿ, ಅಂತಹ ಕಟ್ಟಡದ ಭಾಗ/ ಪ್ರದೇಶಕ್ಕೆ ತೆರಿಗೆ ನಿರ್ಧರಿಸುವಾಗ ಈ ನಿಯಮದ ಕೋಷ್ಟಕ-2 ರಲ್ಲಿನ ವಾಣಿಜ್ಯ ಕಟ್ಟಡಗಳ ತೆರಿಗೆಯ ದರಗಳನ್ನ ಅಳವಡಿಸತಕ್ಕದ್ದು.

**(10)** ಯಾವುದೇ ಸೆಲ್ಲರ್, ಸ್ಟಿಲ್ಟ್, ಬಂಕ್, ಇತರೆ ನೆಲದ ಕೆಳಗಿನ ರಚನೆ ಅಥವಾ ನೆಲದ ಮೇಲಿನ ಸಂಗ್ರಹಣೆ, ನಿರ್ವಹಣೆ, ತಯಾರಿಕೆ, ಸಂಸ್ಕರಣೆ ಅಥವಾ ಶೇಖರಣಾ ಘಟಕಗಳ ರಚನೆಗೆ (ನೆಲದ ಕೆಳಗಿನ ಕುಡಿಯುವ ನೀರಿನ ಸಂಪ್ ಅಥವಾ ನೆಲದ ಮೇಲಿನ ಕುಡಿಯುವ ನೀರಿನ ಟ್ಯಾಂಕ್ ಹೊರತುಪಡಿಸಿ) ಕರ್ನಾಟಕ ಮುದ್ರಾಂಕ ಅಧಿನಿಯಮ 1957ರ 45ಬಿ ಪ್ರಕರಣದಡಿಯಲ್ಲಿ ಪ್ರಕಟಿಸಲಾದ ಅನುಬಂಧ-1(2)ರಲ್ಲಿನ ನೆಲ ಮಹಡಿ ಮಾರುಕಟ್ಟೆ ಮಾರ್ಗಸೂಚಿ ದರದ ಶೇ 66 ಅಂದರೆ (2/3) ರಷ್ಟು ದರದ ಆಧಾರದ ಮೇಲೆ ಸವಕಳಿ ಮೌಲ್ಯವನ್ನು ಕಳೆದ ನಂತರದ ಮೌಲ್ಯಕ್ಕೆ ಮತ್ತು ಎಲ್ಲಾ ಕಡೆಗಳಲ್ಲಿ ತೆರೆದ ಸ್ಥಳಗಳೊಂದಿಗೆ ರೇಲಿಂಗ್ಸ್, ಕಂಬಗಳು ಮತ್ತು ಶೀಟ್ ಅಥವಾ ಮಂಗಳೂರು ಹೆಂಚು ಛಾವಣಿ ಹೊಂದಿರುವ ಯಾವುದೇ ರಚನೆಗಳಿಗೆ ಕರ್ನಾಟಕ ಮುಂದ್ರಾಂಕ ಅಧಿನಿಯಮ 1957ರ 45ಬಿ ಪ್ರಕರಣದಡಿಯಲ್ಲಿ ಪ್ರಕಟಿಸಲಾದ ಅನುಬಂಧ-1(2)ರಲ್ಲಿನ ಮಂಗಳೂರು ಹೆಂಚು, ಏ.ಸಿ. ಶೀಟು ಕಟ್ಟಡದ ನೆಲಮಹಡಿ ಮಾರುಕಟ್ಟೆ ಮಾರ್ಗಸೂಚಿ ದರದ ಶೇಕಡ 50 ಅಂದರೆ (1/2) ರಷ್ಟು ದರದ ಆಧಾರದ ಮೇಲೆ ಸವಕಳಿ ಮೌಲ್ಯವನ್ನು ಕಳೆದ ನಂತರದ ಮೌಲ್ಯಕ್ಕೆ ಕೋಷ್ಟಕ-2 ರಲ್ಲಿರುವಂತೆ ತೆರಿಗೆಯನ್ನು ವಿಧಿಸತಕ್ಕದ್ದು."

**(11)** ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 95(1)ರ ಅಡಿಯಲ್ಲಿ ನಿರ್ಮಿಸಿರುವ ಕಟ್ಟಡಗಳನ್ನು ತೆರಿಗೆ ವ್ಯಾಪ್ತಿಗೆ ಒಳಪಡಿಸುವಂತಿಲ್ಲ.

**(12) ಅ)** ಅಧಿನಿಯಮದ 199, 201ನೇ ಪ್ರಕರಣದಡಿಯಲ್ಲಿ ಯಾವುದೇ ತೆರಿಗೆ, ದರ ಅಥವಾ ಶುಲ್ಕಗಳ ನಿರ್ಧರಣೆ, ವಸೂಲಿ ಅಥವಾ ವಿಧಿಸುವಿಕೆಯಿಂದ ಬಾಧಿತನಾದ ಯಾವುದೇ ವ್ಯಕ್ತಿಯು ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗೆ ನಿಯಮ 15 ರಡಿಯಲ್ಲಿ ಮೇಲ್ಮನವಿ ಸಲ್ಲಿಸತಕ್ಕದ್ದು.

**(ಆ)** ಉಪ ನಿಯಮ (ಅ) ರಲ್ಲಿನ ಆದೇಶದಿಂದ ಭಾಧಿತನಾದ ವ್ಯಕ್ತಿಯು ಆದೇಶದ ದಿನಾಂಕದಿಂದ 30 ದಿನಗಳೊಳಗೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಮೇಲ್ಮನವಿ ಸಲ್ಲಿಸತಕ್ಕದ್ದು ಮತ್ತು ಅವರ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

**(ಇ)** ಉಪ ನಿಯಮ (ಅ) ರಲ್ಲಿ ಮೇಲ್ಮನವಿ ಸಲ್ಲಿಸುವ ಮುನ್ನ ಅಂತಹ ಬಾಧಿತ ವ್ಯಕ್ತಿಯು ದರ ಅಥವಾ ಫೀಜುಗಳ ಶೇಕಡಾ 50 ರಷ್ಟನ್ನು ಮೊಬಲಗನ್ನು ಸಂಬಂಧಿಸಿದ ಗ್ರಾಮ ಪಂಚಾಯತಿಗೆ ಠೇವಣಿ ಇಡತಕ್ಕದ್ದು, ಈ ರೀತಿ ಬಾಧಿತ ವ್ಯಕ್ತಿಯು ತೆರಿಗೆಯ ಶೇಕಡಾ 50 ರಷ್ಟನ್ನು ಗ್ರಾಮ ಪಂಚಾಯತಿಗೆ ಠೇವಣಿ ಇಟ್ಟ ನಂತರವೇ ಉಪ ನಿಯಮ (ಅ) ರನ್ವಯ ಉಪ ಕಾರ್ಯದರ್ಶಿ(ಅಭಿವೃದ್ಧಿ) ಮೇಲ್ಮನವಿಯನ್ನು ಸ್ವೀಕರಿಸತ್ಕದ್ದು. ನಿಯಮ 15 ರಲ್ಲಿ ನಿರ್ದಿಷ್ಟಪಡಿಸಿದಂತೆ 30 ದಿನಗಳೊಳಗೆ ವಿಚಾರಣೆಯನ್ನು ನಡೆಸಿ ಆದೇಶ ಹೊರಡಿಸತಕ್ಕದ್ದು.

10. **ವಿನಾಯಿತಿಗಳು:** ಅಧಿನಿಯಮದ 199ನೇ ಪ್ರಕರಣದಡಿಯಲ್ಲಿ ತೆರಿಗೆಯನ್ನು ವಿಧಿಸುವುದರಿಂದ ಕೆಳಕಂಡ ಕಟ್ಟಡಗಳು ಮತ್ತು ಭೂಮಿಗಳಿಗೆ ವಿನಾಯಿತಿ ನೀಡತಕ್ಕದ್ದು, ತೆರಿಗೆ ವಿನಾಯಿತಿಗೆ ಒಳಪಡುವ ಯಾವುದೇ ಒಂದು ಸ್ವತ್ತಿಗೆ ಈ ಕೆಳಗಿನ ಉಪ ನಿಯಮಗಳಲ್ಲಿ ನಿಯಮಿಸಬಹುದಾದಂತ ಗರಿಷ್ಠ ಮೊತ್ತದ ಒಂದು ವಿನಾಯಿತಿ ಸೌಲಭ್ಯವನ್ನು ಮಾತ್ರ ನೀಡತಕ್ಕದ್ದು. ಎಂದರೆ, -

**(ಅ)** ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಕ್ಕೆ ಸೇರಿದ ಪ್ರಾಥಮಿಕ/ಪ್ರೌಢಶಾಲೆ, ಅಂಗನವಾಡಿಗಳನ್ನು ಹೊರತುಪಡಿಸಿ ಉಳಿದ ಸರ್ಕಾರದ ಕಟ್ಟಡಗಳಿಗೆ ಅಥವಾ ಖಾಲಿ ನಿವೇಶನಗಳಿಗೆ ಒಟ್ಟು ತೆರಿಗೆ ಮೌಲ್ಯದ ಶೇ. 25 ರಷ್ಟನ್ನು ಸೇವಾ ಶುಲ್ಕವನ್ನಾಗಿ ವಿಧಿಸತಕ್ಕದ್ದು.

**(ಆ)** ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳಿಗೆ ಸೇರಿದ ಕಟ್ಟಡಗಳು ಮತ್ತು ಖಾಲಿ ನಿವೇಶನಗಳು;

**(ಇ)** ಸಂಪೂರ್ಣವಾಗಿ ಧರ್ಮಾರ್ಥ ಸಂಸ್ಥೆಯಾಗಿದ್ದು, ಇಂಡಿಯನ್ ಟ್ರಸ್ಟ್ ಆಕ್ಟ್ 1882 ರ ಅಡಿಯಲ್ಲಿ ಅಥವಾ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ, 1997 ರಡಿ ನೊಂದಾಯಿತ ಸಂಸ್ಥೆಯಾಗಿರಬೇಕು. ಈ ಸಂಸ್ಥೆಯು ಪಡೆಯುವಂತಹ ದೇಣಿಗೆಗಳನ್ನು ಆದಾಯ ತೆರಿಗೆ ಕಾಯ್ದೆ 1961ರ ಕಲಂ 11ರಡಿಯಲ್ಲಿ ವಿನಾಯಿತಿಯನ್ನು ಪಡೆದಿರಬೇಕು. ಈ ಸಂಸ್ಥೆಗೆ ನೀಡುವ ದೇಣಿಗೆಗಳಿಗೆ ಆದಾಯ ತೆರಿಗೆ ಅಧಿನಿಯಮದ 80ಜಿ ರಡಿಯಲ್ಲಿ ವಿನಾಯಿತಿ ಇರಬೇಕು. ಇಂತಹ ಸಂಸ್ಥೆಗಳು ನಡೆಸುವ;

(i) ಸಂಪೂರ್ಣವಾಗಿ ಉಚಿತವಾಗಿ ನಡೆಸುವ ಆಸ್ಪತ್ರೆಗಳು

(ii) ವಿದ್ಯಾರ್ಥಿಗಳಿಂದಾಗಲಿ ಅಥವಾ ಪೋಷಕರಿಂದಾಗಲಿ ಶುಲ್ಕ ಅಥವಾ ಇತರೆ ರೂಪದಲ್ಲಿ ಹಣ ಪಡೆಯದೆ ಸಂಪೂರ್ಣವಾಗಿ ಉಚಿತವಾಗಿ ನಡಯುವ ಶಿಕ್ಷಣ ಸಂಸ್ಥೆಗಳು.

(iii) ನಿರ್ಗತಿಕರಿಗೆ ಅಥವಾ ಪ್ರಾಣಿಗಳಿಗೆ ಆಶ್ರಯ ನೀಡುವ ಧರ್ಮಾರ್ಥ ಉದ್ದೇಶಕ್ಕಾಗಿ ಬಳಸುವ ಸ್ಥಳಗಳು ಮತ್ತು ಅನಾಥಾಶ್ರಮಗಳು, ವಿಶೇಷ ಚೇತನರ ನಿಲಯಗಳು ಹಾಗೂ ಶಾಲೆಗಳು, ವೃದ್ಧರು ಹಾಗೂ ನಿರ್ಗತಿಕ ಮಹಿಳೆಯರಿಗಾಗಿನ ಆಶ್ರಯ ತಾಣಗಳು ಮತ್ತು ರಾಜ್ಯ ಸರ್ಕಾರದಿಂದ ಅಂಗೀಕೃತವಾದ ಸಂಪೂರ್ಣವಾಗಿ ಜನೋಪಕಾರಿ ಉದ್ದೇಶದಿಂದ ನಡೆಸುತ್ತಿರುವ ಸಂಸ್ಥೆಗಳು.

ಪರಂತು, ಈ ಸಂಸ್ಥೆಗಳು ಬಾಡಿಗೆಗೆ ಅಥವಾ ವಾಣಿಜ್ಯ ಉದ್ದೇಶಕ್ಕಾಗಿ ಬಳಸುವ ಕಟ್ಟಡಗಳು ಹಾಗೂ ಖಾಲಿ ಜಾಗಗಳು ತೆರಿಗೆ ವ್ಯಾಪ್ತಿಗೆ ಒಳಪಡುತ್ತವೆ.

**(ಈ)** ಸಾರ್ವಜನಿಕ ಪೂಜಾ ಸ್ಥಳವಾಗಿ ತೆಗೆದಿರಿಸಿದ ಹಾಗೂ ಹಾಗೆ ವಾಸ್ತವಿಕವಾಗಿ ಬಳಸಲಾಗುತ್ತಿರುವ ಅಥವಾ ಯಾವುದೇ ಇತರ ಉದ್ದೇಶಗಳಿಗಾಗಿ ಉಪಯೋಗಿಸಿಲ್ಲದೆ ಇರುವ ಮತ್ತು ಯಾವುದೇ ಲಾಭಾಂಶವಿಲ್ಲದ ಧಾರ್ಮಿಕ ಸ್ಥಳಗಳು.

**(ಉ)** ಸೈನಿಕರು, ಮಾಜಿ ಸೈನಿಕರು, ಸೈನಿಕರ ವಿಧವಾ ಮಹಿಳೆಯರ ಸ್ವಂತ ವಾಸದ ಕಟ್ಟಡಗಳಿಗೆ ಶೇಕಡ 50 ರಷ್ಟು ವಿನಾಯತಿ ನೀಡತಕ್ಕದ್ದು.

**(ಊ) ವಿಶೇಷಚೇತನರು** ಮತ್ತು ವಿಧವೆಯರು, ಹೆಚ್.ಐ. ವಿ (ಏಡ್ಸ್), ಕುಷ್ಠ ರೋಗ ಪೀಡಿತ ಮಾಲೀಕರ ವಾಸದ ಮನೆಗಳಿಗೆ ಶೇಕಡ 50 ರಷ್ಟು ವಿನಾಯತಿ ನೀಡತಕ್ಕದ್ದು;

**(ಋ)** ಸರ್ಕಾರದ ಯೋಜನೆಗಳಡಿ ನೋಂದಾಯಿಸಲ್ಪಟ್ಟ ಮಹಿಳಾ ಸ್ವ-ಸಹಾಯ ಸಂಘ/ ಒಕ್ಕೂಟಗಳು, ವಿಶೇಷ ಚೇತನರು ನಡೆಸುವ ಸಣ್ಣ ವಾಣಿಜ್ಯ/ ಉದ್ಯಮ ಘಟಕಗಳಿಗೆ ಶೇಕಡ 50 ರಷ್ಟು ವಿನಾಯತಿ ನೀಡತಕ್ಕದ್ದು;

**(ಎ)** ಸ್ವ-ನಿರ್ವಹಣೆಯ ಪ್ರತ್ಯೇಕ ನಾಗರೀಕ ಸೌಲಭ್ಯಗಳಾದ ನೀರು, ಘನ ಹಾಗೂ ದ್ರವ ತ್ಯಾಜ್ಯ ನಿರ್ವಹಣೆ, ಸೋಲಾರ ಬೀದಿ ದೀಪ ವ್ಯವಸ್ಥೆಗಳನ್ನು ಹೊಂದಿರುವ ವಸತಿ ಬಡಾವಣೆ, ಅಪಾರ್ಟಮೆಂಟ್, ಫ್ಲಾಟ್, ವಿಲ್ಲಾ, ವಿಲ್ಲಾಮೆಂಟ್, ಟೆನಾಮೆಂಟ್, ಗೇಟೆಡ್ ಕಮ್ಯೂನಿಟಿ, ರೋ ಹೌಸ್, ಬಹು ಮಾಲಿಕತ್ವದ ಕಟ್ಟಡಗಳ ಆಸ್ತಿಗಳಿಗೆ ಶೇಕಡ.15ರಷ್ಟು ವಿನಾಯತಿ ನೀಡತಕ್ಕದ್ದು;

**(ಏ)** ಸ್ವ-ನಿರ್ವಹಣೆಯ ಪ್ರತ್ಯೇಕ ನಾಗರೀಕ ಸೌಲಭ್ಯಗಳಾದ ನೀರು, ಘನ ಹಾಗೂ ದ್ರವ ತ್ಯಾಜ್ಯ ನಿರ್ವಹಣೆಯನ್ನು ಹೊಂದಿರುವ ಎ.ಪಿ.ಎಂ.ಸಿ ಪ್ರಾಂಗಣದ ಆಸ್ತಿಗಳಿಗೆ ಶೇಕಡ. 30ರಷ್ಟು ವಿನಾಯತಿ ನೀಡತಕ್ಕದ್ದು;

**(ಐ)** ಆರ್ಥಿಕ ವರ್ಷದ ಪ್ರಾರಂಭದ ಮೂರು ತಿಂಗಳ ಒಳಗಾಗಿ ಪ್ರಸಕ್ತ ಸಾಲಿನ ಸಂಪೂರ್ಣ ತೆರಿಗೆಯನ್ನು ಪಾವತಿಸುವವರಿಗೆ ಶೇಕಡ.5ರಷ್ಟು ವಿನಾಯತಿ ನೀಡತಕ್ಕದ್ದು;

**(ಒ)** ಕೈಗಾರಿಕೆ ಹಾಗೂ ವಿಮಾನ ನಿಲ್ದಾಣ ಪ್ರಾಧಿಕಾರಗಳ ವ್ಯಾಪ್ತಿಯ ಖಾಲಿ ಜಾಗಗಳಲ್ಲಿ ನೆಡು ತೋಪು/ಹಸಿರೀಕರಣ (ಲ್ಯಾಂಡ್ ಸ್ಕೇಪ್) ಗಳನ್ನು ಬೆಳೆಸಿರುವ ಪ್ರದೇಶಗಳಿಗೆ ವಿನಾಯಿತಿ ನೀಡತಕ್ಕದ್ದು;

**(ಓ)** ಕಂದಾಯ/ಅರಣ್ಯ/ ಮುಜರಾಯಿ ಇಲಾಖೆ ಮತ್ತಿತರೆ ಸರ್ಕಾರದ ಇಲಾಖೆಗಳಿಂದ ನವೀಕರಿಸಬಹುದಾದ ಇಂಧನ ಘಟಕಕ್ಕೆ ಗುತ್ತಿಗೆ ಆಧಾರದ ಮೇಲೆ ಪಡೆದ ಉಪಯೋಗಿಸದೆ ಇರುವ ಖಾಲಿ ಜಮೀನುಗಳಿಗೆ ವಿನಾಯಿತಿ ನೀಡತಕ್ಕದ್ದು;

**(ಔ)** ವಾಸದ ಮನೆಯಲ್ಲಿ ನಡೆಸಲಾಗುವ ಕೈಮಗ್ಗ, ಗುಡಿ ಕೈಗಾರಿಕೆ, ಕೃಷಿ ಆಧಾರಿತ ಉತ್ಪಾದನಾ ಚಟುವಟಿಕೆಗಳಿಗೆ ವಸತಿ ಕಟ್ಟಡದ ಉದ್ದೇಶಕ್ಕಾಗಿ ವಿಧಿಸುವ ತೆರಿಗೆ ದರದಲ್ಲಿ ತೆರಿಗೆಯನ್ನು ವಿಧಿಸತಕ್ಕದ್ದು.

(3) ಯಾವುದೇ ಬದಲಾವಣೆಗಳ ಬಗ್ಗೆ ಸ್ವೀಕರಿಸಲಾದ ಕೋರಿಕೆಯನ್ನು ಗ್ರಾಮ ಪಂಚಾಯತಿಯ ನೋಟೀಸ್ ಬೋರ್ಡಿನಲ್ಲಿ ಆಕ್ಷೇಪಣೆಗಳನ್ನು ಆಹ್ವಾನಿಸಿ 07 ದಿನಗಳ ನೋಟೀಸ್‌ನ್ನು ಹೊರಡಿಸತಕ್ಕದ್ದು.

(4) 07 ದಿನಗಳ ತರುವಾಯ ಸ್ವೀಕರಿಸಿದ ಆಕ್ಷೇಪಣೆಗಳನ್ನು ನಿಯಮಾನುಸಾರ ವಿಲೇ ಮಾಡತಕ್ಕದ್ದು ಮತ್ತು ಗ್ರಾಮ ಪಂಚಾಯತಿ ಗ್ರೇಡ್ -1/ ಗ್ರೇಡ್-2 ಕಾರ್ಯದರ್ಶಿಗಳು ಮುಂದಿನ 02 ದಿನಗಳೊಳಗಾಗಿ ಸ್ಥಳ ಪರಿಶೀಲನೆ ಮಾಡಿ, ಗ್ರಾಮ ಪಂಚಾಯಿತಿ ಗ್ರೇಡ್ -1/ ಗ್ರೇಡ್-2 ಕಾರ್ಯದರ್ಶಿಗಳು ಪೂರ್ಣ ದಾಖಲೆಗಳ ಪರಿಶೀಲನೆಯೊಂದಿಗೆ ತಂತ್ರಾಂಶದಲ್ಲಿನ ಮಾಹಿತಿಯನ್ನು ನಾಲ್ಕು ಕರ್ತವ್ಯದ ದಿನಗಳಲ್ಲಿ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಸಲ್ಲಿಸುವುದು. ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಎರಡು ದಿನಗಳಲ್ಲಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರ ಅನುಮೋದನೆಗೆ ಸಲ್ಲಿಸತಕ್ಕದ್ದು. ಅಧ್ಯಕ್ಷರು ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸ್ವೀಕರಿಸಿದ ತರುವಾಯ ಕಾರ್ಯನಿರ್ವಹಿಸುವ (Working Days) ನಾಲ್ಕು ದಿನದೊಳಗಾಗಿ ತೀರ್ಮಾನಿಸತಕ್ಕದ್ದು. ಒಂದು ವೇಳೆ ಅಧ್ಯಕ್ಷರು ನಾಲ್ಕು ದಿನದೊಳಗಾಗಿ ತೀರ್ಮಾನಿಸಲು ವಿಫಲರಾದರೆ, ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ಶಿಫಾರಸ್ಸು ಅಧ್ಯಕ್ಷರ ತೀರ್ಮಾನವೆಂದು ಭಾವಿಸತಕ್ಕದ್ದು.

(5) ಮೇಲಿನ ಉಪ ನಿಯಮ (4) ರಡಿಯ ತೀರ್ಮಾನವನ್ನು ಸ್ವೀಕರಿಸಿದ ನಂತರ ಮೂರು ಕಾರ್ಯ ನಿರ್ವಹಣಾ ದಿನಗಳಲ್ಲಿ ಕಾರ್ಯ ನಿರ್ವಾಹಕ ಅಧಿಕಾರಿಯು ಕಾಯ್ದೆ ಅಥವಾ ನಿಯಮಗಳ ಅಡಿಯಲ್ಲಿ ಪರಿಶೀಲಿಸತಕ್ಕದ್ದು ಹಾಗೂ ಷರಾದೊಂದಿಗೆ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಹಿಂತಿರುಗಿಸತಕ್ಕದ್ದು. ಒಂದು ವೇಳೆ ಕಾಯ್ದೆ ಮತ್ತು ನಿಯಮಗಳ ಅಡಿಯಲ್ಲಿ ಉಲ್ಲಂಘನೆ ಕಂಡುಬಂದಲ್ಲಿ, ಅದನ್ನು ಸರಿಪಡಿಸಲು ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಹಿಂತಿರುಗಿಸತಕ್ಕದ್ದು. ನಿಗದಿತ ಅವದಿಯಲ್ಲಿ ಹಿಂತಿರುಗಿಸದಿದ್ದಲ್ಲಿ ಸ್ವಯಂ-ಚಾಲಿತವಾಗಿ ಪರಿಶೀಲಿಸಲಾಗಿದೆಯೆಂದು (Deemed Verified) ಭಾವಿಸತಕ್ಕದ್ದು. ನಮೂನೆ-11ಎ ಯನ್ನು ಹಿರಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಡಿಜಿಟಲ್ ಸಹಿಯೊಂದಿಗೆ ಎರಡು ದಿನಗಳೊಳಗೆ ಅನುಮೋದಿಸತಕ್ಕದ್ದು. ತಪ್ಪಿದ್ದಲ್ಲಿ ಸ್ವಯಂ-ಚಾಲಿತವಾಗಿ ಅನುಮೋದನೆಯಾಗಿದೆಯೆಂದು (Deemed Approved) ಭಾವಿಸತಕ್ಕದ್ದು.

(6) ಮೇಲಿನ ಕ್ರಮ ಸಂಖ್ಯೆ(ಅ) ಸಂದರ್ಭದಲ್ಲಿ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಕಾವೇರಿ ತಂತ್ರಾಂಶದ ಮೂಲಕ ಸ್ವೀಕೃತವಾದ ದಾಖಲಾತಿಗಳನ್ನು ಪರಿಶೀಲಿಸಿದ ತರುವಾಯು;

**(ಅ)** ಅಂತಹ ಯಾವುದೇ ಭೂಮಿ ಮತ್ತು ಕಟ್ಟಡಗಳ ವಿವರಗಳನ್ನು ನೋಂದಾಯಿತ ಆಸ್ತಿ ವಿಭಜನೆ ಅಥವಾ ಗಿಫ್ಟ್ ಡೀಡ್ ಅಥವಾ ಸೇಲ್ ಡೀಡ್ ಅಥವಾ ರಿಲೀಜ್ ಡೀಡ್ ಅಥವಾ ವರ್ಗಾವಣೆ ಅಥವಾ ಸೆಟಲ್‌ಮೆಂಟ್ ಡೀಡ್ ಅಥವಾ ನ್ಯಾಯಾಲಯದ ಆದೇಶ ಅಥವಾ ಒಟ್ಟುಗೂಡಿಸು ಅಥವಾ ವಿಭಾಗ ಪತ್ರ ಅಥವಾ ಅದಲು-ಬದಲು ಅಥವಾ ಬ್ಯಾಂಕ್ ಮೂಲಕ ಹರಾಜು ಅಥವಾ ಇತರೆ ನೋಂದಾಯಿತ ಪತ್ರದಂತೆ ಅರ್ಜಿ ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗೆ ಆಸ್ತಿ ವಿವರಗಳ ವಹಿಯಲ್ಲಿ ಸೇರ್ಪಡೆ, ಮಾರ್ಪಾಟು ಬದಲಾವಣೆ ಮಾಡತಕ್ಕದ್ದು ಮತ್ತು ಅರ್ಜಿದಾರನಿಗೆ ತಿಳಿಸತಕ್ಕದ್ದು.

**(ಆ)** ಯಾವುದೇ ಸೂಕ್ತ ದಾಖಲೆಗಳಿಲ್ಲದ ಆಸ್ತಿಗಳನ್ನು ಮ್ಯುಟೇಷನ್‌ಗೆ ಸಕ್ಷಮ ನ್ಯಾಯಾಲಯದ ತೀರ್ಮಾನವಿಲ್ಲದೆ ಒಳಪಡಿಸುವಂತಿಲ್ಲ.

(7) ವಿವಿಧ ರೀತಿಯ ಮ್ಯುಟೇಷನ್‌ಗೆ ಒಳಪಡುವ ಆಸ್ತಿಗಳಿಗೆ ಅನುಬಂಧ-3 ರಲ್ಲಿ ಲಗತ್ತಿಸಿರುವಂತಹ ದಾಖಲೆಗಳನ್ನು ಆಧರಿಸಿ ತಂತ್ರಾಂಶದಲ್ಲಿ ಮ್ಯುಟೇಷನ್ ಮಾಡತಕ್ಕದ್ದು.

13. **ಕಟ್ಟಡವನ್ನು ಕೆಡವಿ ಹಾಕುವ ಅಥವಾ ತೆಗೆದು ಹಾಕುವ ಸಂದರ್ಭದಲ್ಲಿ ಕ್ರಮ.** - ಈ ನಿಯಮಗಳ ಮೇರೆಗೆ ತೆರಿಗೆಗೆ ಒಳಗಾದ ಕಟ್ಟಡದ ಮಾಲೀಕನು ಅಂಥ ಕಟ್ಟಡವನ್ನು ಯಾವುದೇ ಕಾರಣಕ್ಕೆ ಕೆಡವಿ ಹಾಕಿದರೆ, ಅದರ ಬಗ್ಗೆ ಗ್ರಾಮ ಪಂಚಾಯತಿಗೆ ಮಾಹಿತಿ ನೀಡತಕ್ಕದ್ದು. ಮಾಹಿತಿ ನೀಡಿದ ನಂತರ ಕೆಡವಿ ಹಾಕಿರುವುದನ್ನು ಗ್ರಾಮ ಪಂಚಾಯತಿಯು ಖಚಿತಪಡಿಸಿಕೊಂಡು, ಆಸ್ತಿ ವಿವರಗಳ ವಹಿಯಲ್ಲಿ ಸೂಕ್ತ ಬದಲಾವಣೆ ತರುವುದು. ಹಾಗೂ ಅದಕ್ಕನುಗುಣವಾಗಿ ತೆರಿಗೆ ಸ್ವರೂಪವನ್ನು ಬದಲಾಯಿಸತಕ್ಕದ್ದು.

14. **ಅದಿಭೋಗದಾರನು ತೆರಿಗೆಯನ್ನು ಸಂದಾಯ ಮಾಡುವುದು.** –ಯಾವು ಕಟ್ಟಡ ಅಥವಾ ಭೂಮಿಯ ಮಾಲೀಕನು ತನ್ನ ಕಟ್ಟಡ ಅಥವಾ ಖಾಲಿ ಜಾಗವನ್ನು ಬಾಡಿಗೆ ಅಥವಾ ಗುತ್ತಿಗೆ ಅಥವಾ ಇನ್ನಿತರ ರೂಪದಲ್ಲಿ ಬೇರೆಯವರ ಅನುಭವಕ್ಕೆ ನೀಡಿದ್ದಲ್ಲಿ, ಮಾಲೀಕ/ಗುತ್ತಿಗೆದಾರನು ಸ್ವತ್ತಿನ ತೆರಿಗೆಯನ್ನು ಪಾವತಿಸುವುದು. ಒಂದು ವೇಳೆ ಮಾಲೀಕ/ಗುತ್ತಿಗೆದಾರನು ಅಂತಹ ಸ್ವತ್ತಿನ ತೆರಿಗೆಯನ್ನು ಪಾವತಿಸದಿದ್ದಲ್ಲಿ, ಬಾಡಿಗೆದಾರ/ಅದಿಭೋಗದಾರರು ಮಾಲೀಕನ ಹೆಸರಿನಲ್ಲಿ ಅಂಥ ಸ್ವತ್ತು ತೆರಿಗೆಯನ್ನು ಸಂದಾಯ ಮಾಡತಕ್ಕದ್ದು.

15. **ಮೇಲ್ಮನವಿ**: (1) ನಿಯಮ 9 ರನ್ವಯ ಯಾವುದೇ ತೆರಿಗೆ, ದರ ಅಥವಾ ಶುಲ್ಕಗಳ ನಿರ್ಧರಣೆ, ವಸೂಲಿ ಅಥವಾ ವಿಧಿಸುವಿಕೆಯಿಂದ ಬಾಧಿತನಾದ ಯಾವುದೇ ವ್ಯಕ್ತಿಯು ಪ್ರಕರಣ 199 ಮತ್ತು 201 ರನ್ವಯ ಜಿಲ್ಲಾ ಪಂಚಾಯಿತಿಯ ಉಪ ಕಾರ್ಯದರ್ಶಿ(ಅಭಿವೃದ್ಧಿ) ಗೆ ಮೇಲ್ಮನವಿ ಸಲ್ಲಿಸತಕ್ಕದ್ದು.

**(ಅ)**ಜಿಲ್ಲಾ ಪಂಚಾಯಿತಿಯ ಉಪ ಕಾರ್ಯದರ್ಶಿ(ಅಭಿವೃದ್ಧಿ)ಯು ಮೇಲ್ಮನವಿ ಸ್ವೀಕರಿಸಿದ ತಕ್ಷಣ ಸಂಬಂಧಿಸಿದ ಗ್ರಾಮ ಪಂಚಾಯತಿಯ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ನೋಟೀಸ್ ನೀಡಿ ವಿಚಾರಣೆಗೆ ದಿನಾಂಕವನ್ನು ನಿಗಧಿಪಡಿಸತಕ್ಕದ್ದು. ವಿಚಾರಣೆಯ ದಿನಾಂಕದಂದು ಉಭಯತ್ರರ ದಾಖಲೆ ಮತ್ತು ವಾದವನ್ನು ಪರಿಶೀಲಿಸಿ ಲಭ್ಯ ದಾಖಲೆಗಳ ಆಧಾರದ ಮೇಲೆ ಮತ್ತು ಅಗತ್ಯವೆನಿಸಿದರೆ ಸ್ಥಳ ಪರಿಶೀಲನೆ ಮಾಡಿ ತರ್ಕಬದ್ಧ ಆದೇಶ (Speaking Order) ವನ್ನು ಹೊರಡಿಸತಕ್ಕದ್ದು.

**(ಆ)**ಜಿಲ್ಲಾ ಪಂಚಾಯಿತಿಯ ಉಪ ಕಾರ್ಯದರ್ಶಿ(ಅಭಿವೃದ್ಧಿ)ಯ ಆದೇಶದಿಂದ ಬಾಧಿತನಾದ ವ್ಯಕ್ತಿಯು, ಆದೇಶದ ದಿನಾಂಕದಿಂದ 30 ದಿನಗಳೊಳಗೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಮೇಲ್ಮನವಿ ಸಲ್ಲಿಸತಕ್ಕದ್ದು.

**(ಇ)**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಮೇಲ್ಮನವಿ ಸ್ವೀಕರಿಸಿದ ತಕ್ಷಣ ಜಿಲ್ಲಾ ಪಂಚಾಯಿತಿಯ ಉಪ ಕಾರ್ಯದರ್ಶಿ(ಅಭಿವೃದ್ಧಿ)ಯ ಆದೇಶದಲ್ಲಿನ ಅಂಶಗಳಿಗೆ ಅನುಗುಣವಾಗಿ ದಾಖಲೆಗಳನ್ನು ಪರಿಶೀಲಿಸಿ, ಅಗತ್ಯವೆನಿಸಿದರೆ ಗ್ರಾಮ ಪಂಚಾಯತಿಯ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ನೋಟೀಸ್ ನೀಡಿ ವಿಚಾರಣೆಗೆ ದಿನಾಂಕವನ್ನು ನಿಗಧಿಪಡಿಸತಕ್ಕದ್ದು ಹಾಗೂ ಸ್ಥಳ ಪರಿಶೀಲನೆ ಮಾಡಿ ತರ್ಕಬದ್ಧ ಆದೇಶ (Speaking Order) ವನ್ನು ಹೊರಡಿಸತಕ್ಕದ್ದು ಮತ್ತು ಅವರ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

**2)** ನಿಯಮ 8 ರ ಅಳವಡಿಕೆಯಿಂದ ತಂತ್ರಾಂಶದಲ್ಲಿ ಆಸ್ತಿ ಸೇರಿಸುವಂತಹ ತೀರ್ಮಾನದಿಂದ ಭಾದಿತರಾದ ವ್ಯಕ್ತಿಯು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಮೇಲ್ಮನವಿಯನ್ನು ಸಲ್ಲಿಸಬಹುದು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಮೇಲ್ಮನವಿ ಸ್ವೀಕರಿಸಿದ ತಕ್ಷಣ

ಸಂಬಂಧಿಸಿದ ಗ್ರಾಮ ಪಂಚಾಯತಿಯ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ನೋಟೀಸ್ ನೀಡಿ ವಿಚಾರಣೆಗೆ ದಿನಾಂಕವನ್ನು ನಿಗಧಿಪಡಿಸತಕ್ಕದ್ದು. ವಿಚಾರಣೆಯ ದಿನಾಂಕದಂದು ಉಭಯತ್ವರ ದಾಖಲೆ ಮತ್ತು ವಾದವನ್ನು ಪರಿಶೀಲಿಸಿ ಲಭ್ಯ ದಾಖಲೆಗಳ ಆಧಾರದ ಮೇಲೆ ಮತ್ತು ಅಗತ್ಯವೆನಿಸಿದರೆ ಸ್ಥಳ ಪರಿಶೀಲನೆ ಮಾಡಿ ತರ್ಕಬದ್ಧ ಆದೇಶ (Speaking Order) ವನ್ನು ಹೊರಡಿಸತಕ್ಕದ್ದು.

**16. ದಂಡನೆಗಳು.-**

**(1)** ಗ್ರಾಮ ಪಂಚಾಯತಿಯ ಅಧ್ಯಕ್ಷರು ಮತ್ತು ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿಯು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961ರ ಉಪ ಬಂಧಗಳನ್ನು ಉಲ್ಲಂಘಿಸಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2025 ಅಧಿಸೂಚನೆಯಾದ ದಿನಾಂಕದ ನಂತರ ಹೊಸ PID ಅಥವಾ ಖಾತಾವನ್ನು ಕಾನೂನು ಬಾಹಿರವಾಗಿ ನೀಡಿದಲ್ಲಿ ದಂಡನೆಗೆ ಒಳಗಾಗುತ್ತಾರೆ.

(2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಸಂಬಂಧಿಸಿದ ಅಧ್ಯಕ್ಷರು ಮತ್ತು ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಿ ವಿಚಾರಣೆ ಮಾಡಿ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಹಾಗೂ ಅಧ್ಯಕ್ಷರಿಗೆ ದಂಡನೆಯನ್ನು ವಿಧಿಸುವ ಬಗ್ಗೆ ಪಂಚಾಯತ್ ರಾಜ್ ಆಯುಕ್ತರಿಗೆ ಶಿಫಾರಸ್ಸು ಮಾಡುವುದು.

**(3)** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961ರ ಉಪಬಂಧಗಳ ಪ್ರಕಾರ ಕಡ್ಡಾಯವಾಗಿ ಸಾರ್ವಜನಿಕ ಬಳಕೆಗಾಗಿ ಮೀಸಲಿರಿಸಿ ಸಂಬಂಧಿಸಿದ ಪ್ರಾಧಿಕಾರಕ್ಕೆ ಪರಿತ್ಯಾಜನಾ ಪತ್ರದ ಪ್ರಕಾರ ನೀಡಬೇಕಾದ ಆಸ್ತಿಯ ವಿಸ್ತೀರ್ಣದ ಮಾರ್ಗಸೂಚಿ ದರದ ನಾಲ್ಕು ಪಟ್ಟನ್ನು ವಿಧಿಸತಕ್ಕದ್ದು. ಇದಲ್ಲದೆ ಅಧಿನಿಯಮದ ಅಡಿಯಲ್ಲಿ ಮತ್ತು ಸೇವಾ ನಿಯಮದಡಿಯಲ್ಲಿ ಇರುವಂತಹ ದಂಡನೆಗೂ ಒಳಪಡಿಸಬಹುದು.

**(4)** ತಂತ್ರಾಂಶದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯು ನಿಯಮ 5(2) 6(4), 8(ಈ) ರನ್ವಯ ಪರಿಶೀಲಿಸಿದ ನಂತರ ಹೊಸ PID ಅಥವಾ ಖಾತಾವನ್ನು ಕಾನೂನು ಬಾಹಿರವಾಗಿ ನೀಡಿದಲ್ಲಿ ಸಂಬಂಧಿಸಿದ ಕಾರ್ಯನಿರ್ವಾಹಕ ಅಧಿಕಾರಿಯ ಮೇಲೆ ಮೇಲಿನ ಉಪ ನಿಯಮ (3) ರನ್ವಯ ದಂಡನೆಗೆ ಒಳಪಡಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಪಂಚಾಯತ್ ರಾಜ್ ಆಯುಕ್ತರಿಗೆ ಶಿಫಾರಸ್ಸು ಮಾಡುವುದು.

**(5)** ನಿಯಮ 5(2), 6(4), 8(ಈ) ರಲ್ಲಿ ಹಿರಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ ಕಾರ್ಯನಿರ್ವಾಹಕ ಅಧಿಕಾರಿಯ ಕರ್ತವ್ಯ ಲೋಪದಿಂದ ಸ್ವಯಂ ಚಾಲಿತವಾಗಿ ಅನುಮೋದನೆ ಆದಂತಹ ಪ್ರಕರಣಗಳಲ್ಲಿ ಸಂಬಂಧಿಸಿದ ಅಧಿಕಾರಿಗಳ ಮೇಲೆ ಸೇವಾ ನಿಯಮಗಳಡಿಯಲ್ಲಿ ಕರ್ತವ್ಯ ಲೋಪಕ್ಕಾಗಿ ಶಿಸ್ತು ಕ್ರಮ ವಹಿಸಬಹುದು. ಸ್ವಯಂ ಚಾಲಿತ ಅನುಮೋದನೆ (Deemed Approval) ಆದ ಪ್ರಮಾಣ ಪತ್ರವು ಕಾನೂನು ಬಾಹಿರವೆಂದು ತಿಳಿದು ಬಂದಲ್ಲಿ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿಯನ್ನೇ ನೇರ ಜವಾಬ್ದಾರರನ್ನಾಗಿ ಮಾಡಿ ಅವರ ವಿರುದ್ಧ ನಿಯಮ 16(3) ರನ್ವಯ ಇರುವಂತಹ ದಂಡನೆಗೆ ಒಳಪಡಿಸತಕ್ಕದ್ದು ಮತ್ತು ಅಂತಹ ಪ್ರಮಾಣ ಪತ್ರಗಳನ್ನು ರದ್ದುಗೊಳಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ನಿಯಮ 15 ರನ್ವಯ ಕ್ರಮ ವಹಿಸತಕ್ಕದ್ದು.

## ಅಧ್ಯಾಯ-V
## ದರಗಳು

17. **ನೀರು ಸರಬರಾಜು ದರವನ್ನು ವಿಧಿಸುವುದು.** –ಅಧಿನಿಯಮದ ಪ್ರಕರಣ199ರ ಉಪ ಪ್ರಕರಣ (2)ರಡಿಯಲ್ಲಿ ಗ್ರಾಮ ಪಂಚಾಯತಿ ವ್ಯಾಪ್ತಿಯ ನಿವಾಸಿಗಳಿಗೆ ಸರಬರಾಜು ಮಾಡಲಾಗುವ ಕುಡಿಯುವ ನೀರಿಗೆ ಪ್ರತಿ ಮಾಹೆಯು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಕಾಲಕಾಲಕ್ಕೆ ಅಧಿಸೂಚಿಸುವ ದರಗಳಂತೆ ನಿಗಧಿಪಡಿಸಿ ವಸೂಲಿ ಮಾಡತಕ್ಕದ್ದು.

## ಅಧ್ಯಾಯ-VI
## (ಶುಲ್ಕಗಳು)

18. **ಶುಲ್ಕಗಳನ್ನು ವಿಧಿಸುವುದು.** -ಅಧಿನಿಯಮದ 199ನೇ ಪ್ರಕರಣದ (3)ನೇ ಉಪ ಖಂಡದಡಿಯಲ್ಲಿ ನಿಯಮಿಸಬಹುದಾದ ಫೀಜುಗಳು ಅಥವಾ ಶುಲ್ಕಗಳನ್ನು ಈ ಕೆಳಕಂಡಂತೆ ವಿಧಿಸತಕ್ಕದ್ದು:-

**(ಅ) ಕಟ್ಟಡ ನಿರ್ಮಾಣ ಅನುಮತಿ ಅಥವಾ ಲೈಸೆನ್ಸ್ ಶುಲ್ಕ.**-ಅಧಿನಿಯಮದ ಪ್ರಕರಣ 64 ರಡಿಯಲ್ಲಿ ಗ್ರಾಮ ಪಂಚಾಯತಿಯ ವ್ಯಾಪ್ತಿಯೊಳಗೆ ವಸತಿ, ವಾಣಿಜ್ಯ, ವಸತಿಯೇತರ, ಕೈಗಾರಿಕೆ, ಕೃಷಿ ಆಧಾರಿತ ಉತ್ಪಾದನಾ ಘಟಕದ ಕಟ್ಟಡಗಳ ನಿರ್ಮಾಣ, ಪುನರ್ ನಿರ್ಮಾಣ, ಸೇರ್ಪಡೆ ಅಥವಾ ವಿಸ್ತರಣೆಗಳಿಗೆ ನೀಡಲಾಗುವ ಮತ್ತು ನವೀಕರಿಸಲಾಗುವ ಅನುಮತಿ ಅಥವಾ ಲೈಸೆನ್ಸ್ ಶುಲ್ಕಗಳು ಪ್ರತಿ ಚ.ಮೀ.ಗೆ ಕರ್ನಾಟಕ ಮುದ್ರಾಂಕ ಅಧಿನಿಯಮ 1957 ರ 45ಬಿ ಪ್ರಕರಣದಡಿಯಲ್ಲಿ ಪ್ರಕಟಿಸಲಾದ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿ ದರಪಟ್ಟಿಯ ಅನುಬಂಧ-1(2) ರಲ್ಲಿನ ಪ್ರಸ್ತಾವಿತ ಕಟ್ಟಡದ ಮಾರ್ಗಸೂಚಿ ದರ ದಶೇಕಡಾ 0.30 ರಷ್ಟು ಇರತಕ್ಕದ್ದು;

**(ಆ) ಕಾರ್ಖಾನೆ ನಿರ್ಮಾಣ ಮತ್ತು ಯಂತ್ರೋಪಕರಣ, ಕೃಷಿ ಆಧಾರಿತ ಉತ್ಪಾದನಾ ಘಟಕ ಸ್ಥಾಪನೆ ಅನುಮತಿ ಶುಲ್ಕ.**-ಅಧಿನಿಯಮದ ಪ್ರಕರಣ 66 ಮತ್ತು 70 ರಡಿಯಲ್ಲಿ ಗ್ರಾಮ ಪಂಚಾಯತಿಯ ವ್ಯಾಪ್ತಿಯೊಳಗೆ ಕೈಗಾರಿಕೆ, ಕೃಷಿ ಆಧಾರಿತ ಉತ್ಪಾದನಾ ಘಟಕ, ಕಾರ್ಖಾನೆ, ಕಾರ್ಯಾಗಾರ ಅಥವಾ ಕೆಲಸದ ಸ್ಥಳದ ನಿರ್ಮಾಣ ಹಾಗೂ ಯಂತ್ರೋಪಕರಣ ಅಥವಾ ತಯಾರಿಕಾ ಸ್ಥಾವರದ ಸ್ಥಾಪನೆಗೆ ಒಂದು ಸಲ ನೀಡಲಾಗುವ ತಾತ್ಕಾಲಿಕ/ಶಾಶ್ವತವಾಗಿ ಉಪಯೋಗಿಸಲ್ಪಡುವ ಅಥವಾ ಉದ್ದೇಶಿತ ನಿರ್ಮಿತ ಪ್ರದೇಶದ ಪ್ರಾರಂಭಿಕ ಅನುಮತಿ ಶುಲ್ಕವು ಪ್ರತಿ ಚ.ಮೀ.ಗೆ ಕರ್ನಾಟಕ ಮುದ್ರಾಂಕ ಅಧಿನಿಯಮ 1957ರ 45ಬಿ ಪ್ರಕರಣದಡಿಯಲ್ಲಿ ಪ್ರಕಟಿಸಲಾದ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿ ದರಪಟ್ಟಿಯ ಅನುಬಂಧ-1(2) ರಲ್ಲಿನ ಪ್ರಸ್ತಾವಿತ ಕಟ್ಟಡದ ಮಾರ್ಗಸೂಚಿ ದರದ ಶೇಕಡ 0.50 ರಷ್ಟು ಮತ್ತು ಘಟನೋತ್ತರ ಅನುಮತಿ ಶುಲ್ಕವು ಕರ್ನಾಟಕ ಮುಂದ್ರಾಂಕ ಅಧಿನಿಯಮ 1957ರ 45ಬಿ ಪ್ರಕರಣದಡಿಯಲ್ಲಿ ಪ್ರಕಟಿಸಲಾದ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿ ದರಪಟ್ಟಿಯ ಅನುಬಂಧ-1(2) ರಲ್ಲಿನ ಪ್ರಸ್ತಾವಿತ ಕಟ್ಟಡದ ಮಾರ್ಗಸೂಚಿ ದರದ ಶೇಕಡ 0.75ರಷ್ಟು ಇರತಕ್ಕದ್ದು

**(ಇ)ವಾಣಿಜ್ಯ, ವಸತಿಯೇತರ ವ್ಯವಹಾರ ಲೈಸೆನ್ಸ್ ಶುಲ್ಕ.** -ಅಧಿನಿಯಮದ ಪ್ರಕರಣ 67, 68, 69 ಮತ್ತು 70 ರಡಿಯಲ್ಲಿ ಗ್ರಾಮ ಪಂಚಾಯತಿಯ ವ್ಯಾಪ್ತಿಯೊಳಗೆ ವ್ಯಾಪಾರಕ್ಕಾಗಿ ಅಥವಾ ವ್ಯವಹಾರಕ್ಕಾಗಿ ಪ್ರಾರಂಭಿಸಲಾಗುವ ಎಲ್ಲಾ ವಿಧದ ವಾಣಿಜ್ಯ, ವಸತಿಯೇತರ ಚಟುವಟಿಕೆಗಳಿಗೆ ನೀಡಲಾಗುವ ಮತ್ತು ನವೀಕರಿಸಲಾಗುವ ಲೈಸೆನ್ಸ್ ಶುಲ್ಕಗಳು ಪ್ರತಿ ಚದರ ಮೀಟರ್‌ಗೆ ಕರ್ನಾಟಕ ಮುದ್ರಾಂಕ ಅಧಿನಿಯಮ 1957ರ 45ಬಿ ಪ್ರಕರಣದಡಿಯಲ್ಲಿ ಪ್ರಕಟಿಸಲಾದ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿ ದರಪಟ್ಟಿಯ ಅನುಬಂಧ-2 ರಲ್ಲಿನ ನಿವೇಶನ ದರಗಳ ಮಾರ್ಗಸೂಚಿ ದರ ಮತ್ತು ಅನುಬಂಧ-1(2)ರಲ್ಲಿನ ಪ್ರಸ್ತಾವಿತ ಕಟ್ಟಡದ ಮಾರ್ಗಸೂಚಿ ದರದ ಶೇಕಡ 0.40ರಷ್ಟು ಇರತಕ್ಕದ್ದು;

**(ಈ)ನಿರಾಕ್ಷೇಪಣಾ ಪತ್ರ ಶುಲ್ಕ.** -ಅಧಿನಿಯಮದ 199ನೇ ಪ್ರಕರಣದ (3) (ಜೆ) ಉಪ-ಪ್ರಕರಣದ ಮೇರೆಗೆ ನಿಯಮಿಸಬಹುದಾದಂತೆ, ಗಣಿ ಮತ್ತು ಭೂ ವಿಜ್ಞಾನ, ವಿದ್ಯುದೀಕರಣ, ಅಬಕಾರಿ, ಜೀವ ವೈವಿಧ್ಯತೆ, ಭೂ-ಪರಿವರ್ತನೆ ಮುಂತಾದ ವಿವಿಧ ಉದ್ದೇಶಗಳಿಗಾಗಿ ಗ್ರಾಮ ಪಂಚಾಯತಿ ವತಿಯಿಂದ ನೀಡಲಾಗುವ ನಿರಾಕ್ಷೇಪಣಾ ಪತ್ರಗಳಿಗೆ ವಿಧಿಸುವ ಶುಲ್ಕಗಳು ಈ ನಿಯಮದ ಕೋಷ್ಟಕ-6 ರಲ್ಲಿರುವಂತೆ ಇರತಕ್ಕದ್ದು.

**(ಉ) ಇ-ಸ್ವತ್ತು ಹಾಗೂ ಬಾಪೂಜಿ ಸೇವಾ ಕೇಂದ್ರದ ಮೂಲಕ ನೀಡುವ ಸೇವಾ ಶುಲ್ಕ.** -ಅಧಿನಿಯಮದ 199ನೇ ಪ್ರಕರಣದ (3) (ಜೆ) ಉಪ-ಪ್ರಕರಣದ ಮೇರೆಗೆ ಸರ್ಕಾರವು ಕಾಲಕಾಲಕ್ಕೆ ನಿಗಧಿಪಡಿಸಿದಂತೆ ವಸೂಲಿ ಮಾಡತಕ್ಕದ್ದು.

**(ಊ)ಆಸ್ತಿ ವಿವರಗಳ ವಹಿಯಲ್ಲಿ ಬದಲಾವಣೆ (ಮ್ಯುಟೇಷನ್) ಶುಲ್ಕ**-ಅಧಿನಿಯಮದ 199ನೇ ಪ್ರಕರಣದ (3) (ಜೆ) ಉಪ-ಪ್ರಕರಣದ ಮೇರೆಗೆ ನಿಯಮಿಸಬಹುದಾದಂತೆ, ಗ್ರಾಮ ಪಂಚಾಯತಿಯ ಆಸ್ತಿ ವಿವರಗಳ ವಹಿಯಲ್ಲಿ ಪಿತ್ರಾರ್ಜಿತ ಆಸ್ತಿ, ಆಸ್ತಿ ವಿಭಜನೆ, ಆಸ್ತಿ ಮಾರಾಟ, ಗಿಫ್ಟ್ ಡೀಡ್, ವಿಲ್, ಹಕ್ಕುಪತ್ರ, ಸೇಲ್ ಡೀಡ್, ರಿಲೀಜ್ ಡೀಡ್, ವರ್ಗಾವಣೆ, ಸೆಟಲ್‌ಮೆಂಟ್, ಇತರೆ ವ್ಯವಹರಣೆಗಳ ಮೂಲಕ ಆಸ್ತಿಯ ಸ್ವರೂಪ, ಮಾಲೀಕರ ಹೆಸರು ಮತ್ತು ವಿವರ ಸೇರ್ಪಡೆ, ಬದಲಾವಣೆಗೆ ವಿಧಿಸುವ ಶುಲ್ಕಗಳು ಸಂಬಂಧಿಸಿದ ಆಸ್ತಿಯ ಮುದ್ರಾಂಕ ಶುಲ್ಕದ ಶೇಕಡಾ 2 ರಷ್ಟು ಇರತಕ್ಕದ್ದು.

ಪರಂತು, ಮುದ್ರಾಂಕ ಮತ್ತು ನೊಂದಣಿ ಶುಲ್ಕ ರಹಿತ ಬದಲಾವಣೆಗಳಿಗೆ ₹.1000 ಗಳು ಇರತಕ್ಕದ್ದು. ಸರ್ಕಾರವು ಕಾಲಕಾಲಕ್ಕೆ ನಿಗಧಿಪಡಿಸಿದಂತೆ ವಸೂಲಿ ಮಾಡತಕ್ಕದ್ದು.

**(ಋ) ಮನೆಗಳಿಗೆ ನಲ್ಲಿ ನೀರು ಸಂಪರ್ಕ ಕಲ್ಪಿಸಲು ಶುಲ್ಕ.** -ಮನೆಗಳಿಗೆ ನಲ್ಲಿ ನೀರು ನೇರ ಸಂಪರ್ಕ ಪಡೆಯಲು ಒಂದು ಬಾರಿಗೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಕಾಲಕಾಲಕ್ಕೆ ಅಧಿಸೂಚಿಸುವ ದರಗಳಂತೆ ನಿಗಧಿಪಡಿಸಿ ವಸೂಲಿ ಮಾಡತಕ್ಕದ್ದು.

**(ಎ) ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣಾ ಶುಲ್ಕ.** -ಗ್ರಾಮ ಪಂಚಾಯತಿಯು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ಸಂಗ್ರಹಣೆ, ವಿಂಗಡಣೆ, ಸಂಸ್ಕರಣೆ, ಚರಂಡಿಗಳು ಮತ್ತು ಬೂದು ನೀರು ಸಂಸ್ಕರಣಾ ವ್ಯವಸ್ಥೆ, ಯುಜಿಡಿ, ಎಸ್.ಟಿ.ಪಿ. ಯ ದ್ರವ ತ್ಯಾಜ್ಯ ನಿರ್ವಹಣೆಗೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಕಾಲಕಾಲಕ್ಕೆ ಅಧಿಸೂಚಿಸುವ ದರಗಳಂತೆ ನಿಗಧಿಪಡಿಸಿವ ಸೂಲಿ ಮಾಡತಕ್ಕದ್ದು.

**(ಏ)ಸಂತೆ, ಮಾರುಕಟ್ಟೆ ಸ್ಥಳಗಳಿಗೆ ವಿಧಿಸುವ ಶುಲ್ಕ.** -ಅಧಿನಿಯಮದ ಪ್ರಕರಣ 199ರ ಉಪ-ಪ್ರಕರಣ (3)(ಇ) ರಡಿಯಲ್ಲಿ ಗ್ರಾಮ ಪಂಚಾಯತಿಯ ವ್ಯಾಪ್ತಿಯೊಳಗೆ ಸಂತೆ, ಮಾರುಕಟ್ಟೆ ಹಾಗೂ ಒಂದು ವರ್ಷಕ್ಕಾಗಿ ಬಹಿರಂಗ ಹರಾಜು ಮೂಲಕ ಪ್ರತಿ ದಿನಕ್ಕೆ ಪ್ರತಿ ಒಂದು ಚದುರ ಮೀಟರ್ ಜಾಗಕ್ಕೆ ಕನಿಷ್ಠ ರೂ.50/- ಹಾಗೂ ಪ್ರತಿ ಹೆಚ್ಚಿನ ಚದುರ ಮೀಟರ್ ಜಾಗಕ್ಕೆ ಪ್ರತಿ ದಿನಕ್ಕೆ ಹೆಚ್ಚುವರಿ ರೂ.10/-ಕ್ಕಿಂತ ಕಡಿಮೆ ಇಲ್ಲದಂತೆ ಅಥವಾ ಸರ್ಕಾರವು ಕಾಲಕಾಲಕ್ಕೆ ನಿಗಧಿಪಡಿಸಿದಂತೆ ಇರತಕ್ಕದ್ದು.

ಪರಂತು, ಗ್ರಾಮ ಪಂಚಾಯಿತಿಯಿಂದ ನಿರ್ಮಾಣವಾಗಿರುವ ಮಾರುಕಟ್ಟೆ ಮಳಿಗೆಗಳಿಗೆ ಸರ್ಕಾರವು ನಿಗಧಿಪಡಿಸಿದಂತೆ ವಿಧಿಸತಕ್ಕದ್ದು.

**(ಐ)ವಾಹನ ನಿಲ್ದಾಣ ಶುಲ್ಕ.**-ಅಧಿನಿಯಮದ ಪ್ರಕರಣ 199ರ ಉಪ-ಪ್ರಕರಣ (3) (ಜಿ) ರಡಿಯಲ್ಲಿ ಗ್ರಾಮ ಪಂಚಾಯತಿ ಪ್ರದೇಶ ಪರಿಮಿತಿಯಲ್ಲಿ ಪ್ರವಾಸಿ ಸ್ಥಳ, ಪ್ರೇಕ್ಷಣೀಯ ಸ್ಥಳ, ಯಾತ್ರಾ ಸ್ಥಳ ಇತರೆ ಜಾಗಗಳಲ್ಲಿ ಗ್ರಾಮ ಪಂಚಾಯತಿಯಿಂದಲೇ ಒದಗಿಸಿದ ವಾಹನ ನಿಲ್ದಾಣಗಳಲ್ಲಿ, ಒಂದು ವರ್ಷಕ್ಕಾಗಿ ಬಹಿರಂಗ ಹರಾಜು ಮೂಲಕ ಬಸ್ಸು, ಲಾರಿ, ಮುಂತಾದ ಬಾರಿ ವಾಹನಗಳಿಗೆ ವಸೂಲಿ ಮಾಡಲು ಸಂಸ್ಥೆ/ವ್ಯಕ್ತಿಯನ್ನು ನಿಗದಿಪಡಿಸತಕ್ಕದ್ದು. ಬಿಡ್

ಪಡೆದಂತಹ ವ್ಯಕ್ತಿ/ಸಂಸ್ಥೆ ಗ್ರಾಮ ಪಂಚಾಯತಿಯು ನಿಗಧಿಪಡಿಸಿದಂತೆ ಈ ಕೆಳಕಂಡ ಕನಿಷ್ಟ ಮತ್ತು ಗರಿಷ್ಟ ದರದ ನಡುವೆ ದರವನ್ನು ವಸೂಲು ಮಾಡತಕ್ಕದ್ದು.

| ಕ್ರ. ಸಂ | ವಾಹನ | ಕನಿಷ್ಟ | ಗರಿಷ್ಟ |
|---|---|---|---|
| 1 | ಬಸ್ಸು/ಲಾರಿ (ಭಾರಿ ವಾಹನಗಳು) | 50 | 75 |
| 2 | ಕಾರು/ಲಘು ವಾಹನಗಳು | 20 | 30 |
| 3 | ದ್ವಿಚಕ್ರ/ತ್ರಿಚಕ್ರ ವಾಹನಗಳು | 10 | 15 |

ಒಂದು ವೇಳೆ ಅಂತಹ ಪ್ರವಾಸಿ ಸ್ಥಳ, ಪ್ರೇಕ್ಷಣೀಯ ಸ್ಥಳ, ಯಾತ್ರಾ ಸ್ಥಳದ ಮೇಲೆ ನಿಯಂತ್ರಣ ಹೊಂದಿರುವ ಯಾವುದೇ ಟ್ರಸ್ಟ್ ಅಥವಾ ಸಂಸ್ಥೆ ಅಥವಾ ಪ್ರಾಧಿಕಾರವು ವಾಹನ ನಿಲ್ದಾಣ ಸೌಲಭ್ಯವನ್ನು ಒದಗಿಸಿ, ನಿರ್ವಹಿಸಿ ವಾಹನ ನಿಲ್ದಾಣ ಶುಲ್ಕ ಸಂಗ್ರಹಿಸಲಾಗುತ್ತಿದ್ದಲ್ಲಿ, ಈ ಶುಲ್ಕದ ಶೇಕಡಾ 20ರಷ್ಟು ಮೊತ್ತವನ್ನು ಗ್ರಾಮ ಪಂಚಾಯತಿಗೆ ಪಾವತಿಸತಕ್ಕದ್ದು.

ವಾಹನ ನಿಲ್ದಾಣದಿಂದ ಹಿಂದಿನ ಮೂರು ವರ್ಷಗಳಲ್ಲಿ ವಸೂಲಾದ ಸರಾಸರಿ ಮೊತ್ತವನ್ನು ಬಹಿರಂಗ ಹರಾಜಿನ ಕನಿಷ್ಟ ಬಿಡ್ ಮೊತ್ತವೆಂದು ನಿಗಧಿಪಡಿಸತಕ್ಕದ್ದು. ಹರಾಜು ಪ್ರಕ್ರಿಯೆಯನ್ನು ಅಧಿನಿಯಮ ಹಾಗೂ ನಿಯಮಗಳಲ್ಲಿರುವಂತೆ ನಿರ್ವಹಿಸತಕ್ಕದ್ದು.

**(ಒ) ಗ್ಯಾಸ್/ಪೆಟ್ರೋಲಿಯಮ್, ಇತರೆ ಪೈಪ್ಲೈನ್ ಹಾಕುವುದಕ್ಕಾಗಿ ಶುಲ್ಕ.** -ಅಧಿನಿಯಮದ ಪ್ರಕರಣ199ರ ಉಪ-ಪ್ರಕರಣ (3)(ಐ) ರಡಿಯಲ್ಲಿ ಗ್ರಾಮ ಪಂಚಾಯತಿ ಪ್ರದೇಶ ಪರಿಮಿತಿಯಲ್ಲಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅಥವಾ ಲೋಕೋಪಯೋಗಿ ಇಲಾಖೆಯ ಮಾರ್ಗದ ಹಕ್ಕು ಇರುವ ರಸ್ತೆಗಳನ್ನು ಹೊರತುಪಡಿಸಿ, ಇತರೆ ರಸ್ತೆ ಹಾಗೂ ಗ್ರಾಮ ಪಂಚಾಯತಿ ಪ್ರದೇಶಗಳಲ್ಲಿ ಗ್ಯಾಸ್/ಪೆಟ್ರೋಲಿಯಮ್, ನಿಗಮ, ಜಲ ಮಂಡಳಿ, ಇತರೆ ಪೈಪ್‌ಲೈನ್ ಹಾಕುವುದಕ್ಕಾಗಿ ವಿಧಿಸುವ ಶುಲ್ಕಗಳು ಈ ನಿಯಮದ ಕೋಷ್ಟಕ-7 ರಲ್ಲಿರುವಂತೆ ಇರತಕ್ಕದ್ದು.

**(ಓ)** ಆಡಳಿತಾತ್ಮಕ ಶುಲ್ಕ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅಥವಾ ಲೋಕೋಪಯೋಗಿ ಇಲಾಖೆಯ ಮಾರ್ಗದ ಹಕ್ಕು ಇರುವ ರಸ್ತೆಗಳನ್ನು ಹೊರತುಪಡಿಸಿ, ಇತರೆ ರಸ್ತೆ ಹಾಗೂ ಗ್ರಾಮ ಪಂಚಾಯತಿ ಪ್ರದೇಶಗಳಲ್ಲಿ ಯಾವುದೇ ರಚನೆ/ಕೇಬಲ್/ಪೈಪ್‌ಲೈನ್ ಅಳವಡಿಕೆಯ ಉದ್ದೇಶಕ್ಕಾಗಿ ಈ ನಿಯಮದ ಕೋಷ್ಟಕ-8 ರಂತೆ ಆಡಳಿತಾತ್ಮಕ ಶುಲ್ಕಗಳನ್ನು ಸಂಗ್ರಹಿಸತಕ್ಕದ್ದು.

**(ಔ) ಕಟ್ಟಡ ನಕ್ಷೆ ಅನುಮೋದನೆ ಶುಲ್ಕ.** -ಅಧಿನಿಯಮದ 199 ನೇ ಪ್ರಕರಣದ (3) (ಜೆ) ಉಪ-ಪ್ರಕರಣದ ಮೇರೆಗೆ ನಿಯಮಿಸಬಹುದಾದಂತೆ, ಗ್ರಾಮ ಪಂಚಾಯತಿಯಿಂದ ನೀಡಲಾಗುವ ಕಟ್ಟಡ ನಕ್ಷೆ ಅನುಮೋದನೆ ಶುಲ್ಕಗಳು ಈ ನಿಯಮದ ಕೋಷ್ಟಕ-09 ರಲ್ಲಿರುವಂತೆ ಇರತಕ್ಕದ್ದು.

**(ಅಂ) ಅಧಿಭೋಗದಾರ/ಸ್ವಾಧೀನ ಪತ್ರ ನೀಡುವ ಶುಲ್ಕ.** - ಅಧಿನಿಯಮದ 199 ನೇ ಪ್ರಕರಣದ (3) (ಜೆ) ಉಪ-ಪ್ರಕರಣದ ಮೇರೆಗೆ ನಿಯಮಿಸಬಹುದಾದಂತೆ, ಗ್ರಾಮ ಪಂಚಾಯತಿಯಿಂದ ನೀಡಲಾಗುವ ಅಧಿಭೋಗದಾರ / ಸ್ವಾಧೀನ ಪತ್ರ (Occupancy Certificate)ಕ್ಕೆ ₹100 ಅಥವಾ ಸರ್ಕಾರವು ಕಾಲ ಕಾಲಕ್ಕೆ ನಿಗಧಿಪಡಿಸಿದಂತೆ ವಿಧಿಸತಕ್ಕದ್ದು.

**19. ತೆರಿಗೆ ತಡವಾಗಿ ಪಾವತಿಸುವುದಕ್ಕಾಗಿ ದಂಡ ವಿಧಿಸುವುದು.** –ತೆರಿಗೆ ಮತ್ತು ದರವನ್ನು ಸಂದಾಯ ಮಾಡಲು ಬದ್ಧನಾದ ವ್ಯಕ್ತಿಯು, ಪ್ರತಿ ವರ್ಷ ತೆರಿಗೆಯನ್ನು ಪಾವತಿಸತಕ್ಕದ್ದು ಹಾಗೂ ಪಾವತಿಸದಿದ್ದಲ್ಲಿ ಪ್ರತಿ ಹಣಕಾಸು ವರ್ಷಕ್ಕೆ ಶೇಕಡಾ 5ರಷ್ಟು ದಂಡವನ್ನು ನೀಡತಕ್ಕದ್ದು.

**20. ಸ್ಥಿರ ಸ್ವತ್ತಿನ ಪರಿಶೀಲನೆ. - (1)** ಈ ಅಧಿನಿಯಮದ ಪ್ರಕರಣ 80ರ ಮೇರೆಗೆ ತೆರಿಗೆ, ದರ ಅಥವಾ ಶುಲ್ಕಗಳ ನಿರ್ಧರಣೆ, ಬೇಡಿಕೆ, ವಸೂಲಾತಿಯ ಉದ್ದೇಶಕ್ಕಾಗಿ ಗ್ರಾಮ ಪಂಚಾಯತಿ ಪ್ರದೇಶ ಪರಿಮಿತಿಯೊಳಗೆ ಇರುವ ತೆರಿಗೆಗೆ ಗುರಿಯಾಗತಕ್ಕ ಯಾವುದೇ ಸ್ಥಿರ ಸ್ವತ್ತಿನ ಆವರಣದೊಳಗೆ, ಯುಕ್ತ ನೋಟೀಸನ್ನು ನೀಡಿದ ನಂತರ, ಸೂರ್ಯೋದಯ ಮತ್ತು ಸೂರ್ಯಾಸ್ತದ ನಡುವಿನ ಅವಧಿಯೊಳಗೆ ಗ್ರಾಮ ಪಂಚಾಯತಿ ಅಧಿಕಾರಿ/ನೌಕರರು ಪ್ರವೇಶಿಸಲು, ಮಾಲೀಕರಿಂದ ಕಟ್ಟಡ ಮತ್ತು ಖಾಲಿ ಜಾಗದ ದಾಖಲೆಗಳನ್ನು ಪಡೆದು ಪರಿಶೀಲಿಸಲು ಅಧಿಕಾರ ಹೊಂದಿರತಕ್ಕದ್ದು.

(2) ಅಂಥ ಪ್ರವೇಶವನ್ನು ತೆರಿಗೆಗೆ ಗುರಿಯಾಗತಕ್ಕ ಯಾವುದೇ ಸ್ಥಿರ ಸ್ವತ್ತಿನ ಮಾಲೀಕನು ನಿರ್ಬಂಧಿಸುವಂತಿಲ್ಲ. ಒಂದು ವೇಳೆ ಇಂತಹ ಪ್ರವೇಶವನ್ನು ನಿರ್ಬಂಧಿಸುವುದು ಕಂಡು ಬಂದಲ್ಲಿ, ಅವನ ವಿರುದ್ಧ ಕಾನೂನು ಕ್ರಮ ಜರುಗಿಸತಕ್ಕದ್ದು.

**21. ತಗಾದೆ ನೋಟೀಸ್.-** 200ನೇ ಪ್ರಕರಣದ (1) ನೇ ಉಪ-ಪ್ರಕರಣದ ಮೇರೆಗೆ ವಿಧಿಸಿದ ಹಾಗೂ ವಿಧಿಸಬಹುದಾದ ಯಾವುದೇ ತೆರಿಗೆ, ದರ ಅಥವಾ ಶುಲ್ಕ ಬಾಬ್ತಿನ ಮೊಬಲಗು ಬಾಕಿಯಿರುವಾಗ, ತೆರಿಗೆ, ದರ ಅಥವಾ ಶುಲ್ಕ ಬಾಬ್ತಿನ ಮೊಬಲಗು, ಯಾವ ಅವಧಿಗಾಗಿ ಬಾಕಿ, ನಿಗಧಿಪಡಿಸಿದ ದಂಡ ಹಾಗೂ ಆಸ್ತಿಯ ವಿವರಗಳನ್ನು ಒಳಗೊಂಡಂತೆ, ಸಂದಾಯಕ್ಕೆ ಹೊಣೆಗಾರನಾಗಿರುವ ವ್ಯಕ್ತಿಗೆ ಹದಿನೈದು ದಿನಗಳೊಳಗೆ ಸಂದಾಯ ಮಾಡಲು ತಗಾದೆ ನೋಟೀಸ್‌ನ್ನು ಈ ನಿಯಮದ ನಮೂನೆ-2ರಲ್ಲಿ ನೀಡತಕ್ಕದ್ದು.

**22. ತಗಾದೆ ಆದೇಶ.-** ನಿಯಮ 21 ರಲ್ಲಿ ಯಾವ ಮೊತ್ತಕ್ಕಾಗಿ ತಗಾದೆ ಬಿಲ್ಲನ್ನು ನೀಡಲಾಗಿದೆಯೋ ಅಂಥ ಮೊತ್ತವನ್ನು ಗ್ರಾಮ ಪಂಚಾಯತಿಗೆ ಹದಿನೈದು ದಿನದೊಳೊಳಗೆ ಸಂದಾಯ ಮಾಡದಿದ್ದರೆ, ಅಂತಹ ಸುಸ್ತಿದಾರರಿಗೆ ಈ ಅಧಿನಿಯಮದ 200ನೇ ಪ್ರಕರಣ (2) ನೇ ಉಪ-ಪ್ರಕರಣದ ಅಡಿಯಲ್ಲಿ ಮೂವತ್ತು ದಿನಗಳ ಒಳಗೆ ಬಾಕಿಯಿರುವ ಮೊತ್ತವನ್ನು ಗ್ರಾಮ ಪಂಚಾಯತಿ ಕಛೇರಿಗೆ ಸಂದಾಯ ಮಾಡಲು ತಗಾದೆ ಆದೇಶವನ್ನು ಈ ನಿಯಮದ ನಮೂನೆ-3ರಲ್ಲಿ ಜಾರಿ ಮಾಡತಕ್ಕದ್ದು.

**23. ಜಪ್ತಿ ಮತ್ತು ಮಾರಾಟ.- (1)**ಯಾವುದೇ ವ್ಯಕ್ತಿಯು ತೆರಿಗೆ, ದರ ಅಥವಾ ಶುಲ್ಕ ಬಾಬ್ತಿನ ಬಾಕಿ ಮೊಬಲಗನ್ನು ತಗಾದೆ ಆದೇಶವನ್ನು ಜಾರಿ ಮಾಡಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಸಂದಾಯ ಮಾಡದಿದ್ದರೆ, ಅಂತಹ ವ್ಯಕ್ತಿಯು ಏಕೆ ಸಂದಾಯ ಮಾಡಲಾಗುವುದಿಲ್ಲವೆಂದು ಜಪ್ತಿ ವಾರೆಂಟಿಗೆ ಸಹಿ ಮಾಡುವ ಪ್ರಾಧಿಕಾರಕ್ಕೆ ಮನದಟ್ಟಾಗುವಂತೆ ಕಾರಣವನ್ನು ತೋರಿಸದಿದ್ದರೆ, ಅವನು ಅಂತಹ ತೆರಿಗೆ, ದರ ಅಥವಾ ಶುಲ್ಕ ಬಾಬ್ತಿನ ಬಾಕಿ ಮೊಬಲಗನ್ನು ಸಂದಾಯ ಮಾಡಲು ತಪ್ಪಿರುವನೆಂದು ಭಾವಿಸತಕ್ಕದ್ದು ಮತ್ತು ತರುವಾಯ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ವಾರೆಂಟಿನ ಮೂಲಕ ತಪ್ಪಿತಸ್ಥನ ಚರ ಸ್ವತ್ತಿನ ಜಪ್ತಿ ಮಾರಾಟದ ಮೂಲಕ ಅಂತಹ ತೆರಿಗೆ, ದರ ಅಥವಾ ಶುಲ್ಕ ಬಾಬ್ತಿನ ಬಾಕಿ ಮೊಬಲಗನ್ನು ವಸೂಲಿ ಮಾಡತಕ್ಕದ್ದು ಮತ್ತು ಪಂಚಾಯಿತಿ ನಿಧಿಗೆ ಜಮಾ ಮಾಡತಕ್ಕದ್ದು.

(2) ಈ ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ವಾರೆಂಟನ್ನು ಈ ನಿಯಮದ ನಮೂನೆ-4ರಲ್ಲಿ ನೀಡತಕ್ಕದ್ದು. ಅಂತಹ ವಾರೆಂಟಿಗೆ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಜಂಟಿಯಾಗಿ ಸಹಿ ಮಾಡತಕ್ಕದ್ದು.

(3) ಸ್ವತ್ತನ್ನು ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಅಭಿಗ್ರಹಿಸುವುದು. ಅಂತಹ ಅಭಿಗ್ರಹಣದಲ್ಲಿ ನೌಕರರಾದ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಸಂಬಂಧಿಸಿದ ಕರವಸೂಲಿಗಾರರು ಸಹಕರಿಸತಕ್ಕದ್ದು.

(4) ವಾರೆಂಟಿನಲ್ಲಿ ನಿರ್ದೇಶಿಸಿದ ಜಪ್ತಿ ಕಾರ್ಯಾಚರಣೆಯನ್ನು ಸೂರ್ಯೋದಯ ಮತ್ತು ಸೂರ್ಯಾಸ್ತ ಮಾನದ ನಡುವಿನ ಅವಧಿಯೊಳಗೆ ನಡೆಸತಕ್ಕದ್ದು.

(5) ಜಪ್ತಿ ಮಾಡುವುದಕ್ಕೆ ಮುಂಚೆ ತೆರಿಗೆ, ದರ ಅಥವಾ ಶುಲ್ಕದ ಬಾಬ್ತಿನ ಬಾಕಿ ಮೊಬಲಗನ್ನು ಸಂದಾಯ ಮಾಡಲು ತಿಳಿಸತಕ್ಕದ್ದು. ಅದನ್ನು ಸಂದಾಯ ಮಾಡದಿದ್ದರೆ ಅವಶ್ಯವೆಂದು ಯೋಚಿಸುವಂತಹ ತೆರಿಗೆ, ದರ ಅಥವಾ ಶುಲ್ಕದ ಬಾಬ್ತಿನ ಬಾಕಿ ಮೊಬಲಗಿನ ಮೌಲ್ಯಕ್ಕೆ ಸಮನಾಗಿರುವಂತೆ ಸ್ವತ್ತನ್ನು ಅಭಿಗ್ರಹಿಸತಕ್ಕದ್ದು.

(6) ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ಬೆಲೆ ನಿರ್ಧರಣಾ ವರದಿಯಂತೆ ಅಭಿಗ್ರಹಿಸಿದ ಸ್ವತ್ತಿನ ವಿವರಣಾ ಪಟ್ಟಿಯನ್ನು ತಯಾರಿಸುವುದು. ಸ್ವತ್ತಿನ ಸ್ವಾಧೀನದಲ್ಲಿನ ವ್ಯಕ್ತಿಗೆ ಅಭಿಗ್ರಹಿಸಿದ ಸ್ವತ್ತಿನ ವಿವರಣಾ ಪಟ್ಟಿಯನ್ನು ಮತ್ತು ಮಾರಾಟದ ನೋಟೀಸನ್ನು ನಮೂನೆ-5ರಲ್ಲಿ ನೀಡುವುದು. ಬಾಕಿಯಾದ ಮೊಬಲಗನ್ನು ಸಂದಾಯ ಮಾಡಲು ಮತ್ತು ಅಭಿಗ್ರಹಿಸಿದ ಸ್ವತ್ತುಗಳನ್ನು ವಾಪಸ್ಸು ಪಡೆಯಲು ಏಳು ದಿವಸಗಳ ಅವಧಿಯನ್ನು ನೀಡತಕ್ಕದ್ದು.

**(7)** ಅಭಿಗ್ರಹಿಸಿದ ಸ್ವತ್ತನ್ನು ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿಯು, ಮಾರಾಟ ಮಾಡುವುದು ಅವಶ್ಯಕವೆಂದು ತೀರ್ಮಾನಿಸಿದಾಗ ಸಂಪೂರ್ಣ ವಿವರಗಳೊಂದಿಗೆ ಮಾರಾಟದ ಕಾಲ ಮತ್ತು ಸ್ಥಳವನ್ನು ನಿರ್ದಿಷ್ಟಪಡಿಸಿ, ಉದ್ದೇಶಿತ ಮಾರಾಟದ ಬಗ್ಗೆ ಗ್ರಾಮ ಪಂಚಾಯತಿಯ ಸೂಚನಾ ಫಲಕದಲ್ಲಿ, ಗ್ರಾಮ ಪಂಚಾಯಿತಿ ವೆಬ್‌ಸೈಟ್, ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ಗ್ರಾಮ ಪಂಚಾಯತಿ ಪ್ರದೇಶದಲ್ಲಿನ ಇತರ ಪ್ರಮುಖ ಸ್ಥಳಗಳಲ್ಲಿ ಪ್ರಕಟಿಸತಕ್ಕದ್ದು.

**(8)** ಪ್ರಕಟಣೆ ಹೊರಡಿಸಿದ ದಿನಾಂಕದಿಂದ ಕನಿಷ್ಠ ಮೂವತ್ತು ದಿನಗಳ ಅವಧಿಯು ಮುಕ್ತಾಯದ ಮುಂಚೆ ಯಾವುದೇ ಕಾಲದಲ್ಲಿ ಸಾರ್ವತ್ರಿಕ ರಜಾ ದಿನಗಳನ್ನು ಹೊರತುಪಡಿಸಿ, ಬಹಿರಂಗ ಹರಾಜಿನ ಮೂಲಕ ಅಭಿಗ್ರಹಿಸಿದ ಚರ ಸ್ವತ್ತಿನ ಮಾರಾಟವನ್ನು ಮಾಡತಕ್ಕದ್ದು.

**(9)** ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಅಭಿಗ್ರಹಿಸಿದ ಚರ ಸ್ವತ್ತಿನ ಹರಾಜನ್ನು ಕೊನೆಗೊಳಿಸುವ ಮುಂಚೆ, ಯಾವುದೇ ಕಾಲದಲ್ಲಿ ತಪ್ಪಿತಸ್ಥನು ಅಥವಾ ಅವನ ಪರವಾಗಿ ಯಾವನೇ ವ್ಯಕ್ತಿಯು, ತೆರಿಗೆ, ದರ ಅಥವಾ ಶುಲ್ಕದ ಬಾಬ್ತಿನ ಬಾಕಿ ಮೊಬಲಗನ್ನು ಸಂದಾಯ ಮಾಡಿದರೆ, ಮಾರಾಟ ಪ್ರಕ್ರಿಯೆಯನ್ನು ರದ್ದುಗೊಳಿಸುವುದು. ಹಾಗೂ ಅಭಿಗ್ರಹಿಸಿದ ಚರ ಸ್ವತ್ತನ್ನು ಹಿಂದಿರುಗಿಸತಕ್ಕದ್ದು.

**24. ನಿರಸನ ಮತ್ತು ಉಳಿಸುವಿಕೆಗಳು**:-(1) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಯ ತೆರಿಗೆಗಳು ಮತ್ತು ಫೀಜುಗಳು) ನಿಯಮಗಳು, 1994 ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ತೆರಿಗೆ, ದರ ಮತ್ತು ಫೀಜುಗಳು) ನಿಯಮಗಳು, 2021ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(3) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳ ನಿಯಂತ್ರಣ) ಮಾದರಿ ಉಪವಿಧಿಗಳು, 2015 ರಲ್ಲಿನ ಅನುಸೂಚಿ VII ರಿಂದ X ರವರೆಗಿನ ಅನುಸೂಚಿಗಳನ್ನು ನಿರಸನಗೊಳಿಸಲಾಗಿದೆ.

(4) ಸರ್ಕಾರವು ತೆರಿಗೆ, ಶುಲ್ಕಗಳು ಮತ್ತು ಇ-ಸ್ವತ್ತುಗೆ ಸಂಬಂಧಿಸಿದಂತೆ ಈ ಹಿಂದೆ ಹೊರಡಿಸಿರುವಂತಹ ಸರ್ಕಾರಿ ಆದೇಶಗಳು, ಸುತ್ತೋಲೆಗಳು ಈ ನಿಯಮಗಳಿಗೆ ವ್ಯತಿರಿಕ್ತವಾಗಿರುವಷ್ಟರ ಮಟ್ಟಿಗೆ ನಿರಸನಗೊಳಿಸಲಾಗಿದೆ.

ಪರಂತು, ಸದರಿ ನಿರಸನವು, -**(ಅ)** ಈ ನಿಯಮಗಳನ್ನು ಈ ಹಿಂದೆ ಜಾರಿಗೊಳಿಸುವುದನ್ನು ಅಥವಾ ಅವುಗಳಡಿಯಲ್ಲಿ ಯಾಥೋಚಿತವಾಗಿ ಮಾಡಿದ ಅಥವಾ ಅದರಿಂದ ಅನುಭವಿಸಿದ ಯಾವುದೇ ವಿಷಯಕ್ಕೆ ಬಾಧೆ ಉಂಟು ಮಾಡತಕ್ಕದ್ದಲ್ಲ, ಅಥವಾ

**(ಆ)** ಈ ನಿಯಮಗಳಡಿಯಲ್ಲಿ ಆರ್ಜಿಸಿದ, ಪ್ರಾಪ್ತವಾದ ಅಥವಾ ವಹಿಸಿದ ಯಾವುದೇ ಹಕ್ಕು, ಹೊಣೆಗಾರಿಕೆ ಅಥವಾ ಬಾದ್ಯತೆಗೆ ಬಾಧೆಯನ್ನು ಉಂಟು ಮಾಡತಕ್ಕದ್ದಲ್ಲ.

**(ಇ)** ಉಪ ನಿಯಮ (1) ರ ಮೂಲಕ ನಿರಸನಗೊಳಿಸಿದ ಈ ನಿಯಮಗಳಿಗೆ ಯಾವುದೇ ನಿಯಮಗಳಲ್ಲಿ ಅಥವಾ ಆದೇಶದಲ್ಲಿ ಮಾಡಿದ ಉಲ್ಲೇಖವನ್ನು ಈ ನಿಯಮಗಳಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

## ನಮೂನೆ – 1
**(ನಿಯಮ 3(7))**

| ಕ್ರ. ಸಂ | ಗ್ರಾಮ | ಮಾಲೀಕ/ ಅಧಿ ಭೋಗದಾರರ ಹೆಸರು | ಕಟ್ಟಡ/ ನಿವೇಶನ | ಆಸ್ತಿಯ ವಿಧ | ವಿಸ್ತೀರ್ಣ | ತೆರಿಗೆ ಮೊತ್ತ | PID ಸಂಖ್ಯೆ |
|---|---|---|---|---|---|---|---|
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |

ಅಧ್ಯಕ್ಷರ ಸಹಿ

ಹಿರಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/
ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸಹಿ

## ನಮೂನೆ-2
(ನಿಯಮ-21)

**ತಗಾದೆ ನೋಟೀಸ್**

(ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ 200(1) ನೇ ಪ್ರಕರಣದಂತೆ)

..........................................ಗ್ರಾಮ ಪಂಚಾಯತಿ
..........................................ತಾಲ್ಲೂಕು ..........................................ಜಿಲ್ಲೆ
..................................ರಂದು ಮುಕ್ತಾಯವಾಗುವ ಅವಧಿಗಾಗಿ ತೆರಿಗೆ, ದರ, ಶುಲ್ಕ, ಇತರ ಬಾಕಿಗಳ ಬಿಲ್ಲು ಪುಸ್ತಕ ಸಂಖ್ಯೆ.................................................. ಬಿಲ್ಲಿನ ಸಂಖ್ಯೆ.........................................................
ತೆರಿಗೆದಾರನ ಹೆಸರು..........................................
ತೆರಿಗೆದಾರನ ವಿಳಾಸ..........................................

ದಿನಾಂಕ: ..........................................ರಿಂದ ದಿನಾಂಕ: ..........................................ರವರೆಗಿನ ಅವಧಿಗಾಗಿ ಕೆಳಗೆ ತೋರಿಸಿರುವಂತೆ..........................................ರೂಪಾಯಿಗಳ ತೆರಿಗೆಗಳು/ದರ/ಶುಲ್ಕಗಳು ಮತ್ತು ಇತರ ಬಾಬ್ತುಗಳು ಒಟ್ಟು ರೂ...............................(ಒಟ್ಟು ರೂಪಾಯಿಗಳು........................................................ಮಾತ್ರ) ನಿಮ್ಮಿಂದ ಬಾಕಿಯಿರುವ ಮೊತ್ತಕ್ಕೆ ಗ್ರಾಮ ಪಂಚಾಯತಿಯು ತಗಾದೆ ಮಾಡುತ್ತದೆ. ಈ ಬಿಲ್ಲನ್ನು ಕೊಟ್ಟ ದಿನಾಂಕದಿಂದ ಹದಿನೈದು ದಿಗಳೊಳಗೆ ನೀವು ಬಾಕಿಯಿರುವ ಮೊತ್ತವನ್ನು ಗ್ರಾಮ ಪಂಚಾಯತಿಗೆ ಸಂದಾಯ ಮಾಡಬೇಕೆಂದು ಈ ಮೂಲಕ ನಿಮ್ಮನ್ನು ಅಗತ್ಯಪಡಿಸಿದೆ. ಇದಕ್ಕೆ ತಪ್ಪಿದರೆ ತಗಾದೆ ಆದೇಶವನ್ನು ಕೊಡಲಾಗುವುದು. ತಗಾದೆ ಮಾಡಿದ ಮೊತ್ತವನ್ನು ಸಂದಾಯ ಮಾಡದಿದ್ದರೆ ಅಥವಾ ಅದನ್ನು ಏಕೆ ಸಂದಾಯ ಮಾಡಕೂಡದು ಎಂಬ ಬಗ್ಗೆ ಗ್ರಾಮ ಪಂಚಾಯತಿಗೆ ಮನದಟ್ಟಾಗುವಂತೆ ಕಾರಣವನ್ನು ತೋರಿಸದಿದ್ದರೆ ಶೇಕಡ ಹತ್ತರಷ್ಟು ದಂಡದೊಂದಿಗೆ ಬಾಕಿಯಾದ ಮೊತ್ತವನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ 200(4)ನೇ ಪ್ರಕರಣದ ಅಡಿಯಲ್ಲಿ ಜಪ್ತಿ ವಾರಂಟಿನ ಮೇರೆಗೆ ವಸೂಲು ಮಾಡಲಾಗುವುದು.

**ಕ್ರ.ಸಂ.** **ತೆರಿಗೆಯ ಸ್ವರೂಪ ಬಾಕಿಗಳು ಪ್ರಸಕ್ತ ಒಟ್ಟು**

1. ಕಟ್ಟಡದ ತೆರಿಗೆ
2. ಖಾಲಿ ಜಾಗದ ತೆರಿಗೆ
3. ನೀರು ದರ
4. ಅನುಮತಿ/ಲೈಸೆನ್ಸ್, ಇತರೆ ಶುಲ್ಕಗಳು
5. ಉಪಕರಗಳು (ಆರೋಗ್ಯ, ಗ್ರಂಥಾಲಯ ಮತ್ತು ಭಿಕ್ಷುಕರ ಕರ)
6. ಇತರೆ ಬಾಬ್ತುಗಳು

**ಒಟ್ಟು ಮೊತ್ತ**

ದಿನಾಂಕ:

ಹಿರಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/
ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
.....................ಗ್ರಾಮ ಪಂಚಾಯಿತಿ
............................. ತಾಲ್ಲೂಕು

**ನಮೂನೆ-3**
**(ನಿಯಮ-22)**
**ತಗಾದೆ ಆದೇಶ**

(ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ 200(2) ನೇ ಪ್ರಕರಣದಂತೆ)

.........................................ಗ್ರಾಮ ಪಂಚಾಯತಿ
.........................................ತಾಲ್ಲೂಕು ....................................ಜಿಲ್ಲೆ
ಪುಸ್ತಕ ಸಂಖ್ಯೆ................................................ ಕ್ರಮ ಸಂಖ್ಯೆ................................................
.........................................ಗೆ,

.................................................................... ನಲ್ಲಿ ವಾಸವಾಗಿರುವ ಶ್ರೀಮತಿ/ಶ್ರೀ.............................................ಆದ ನಿಮಗೆ ದಿನಾಂಕ: ...................................ರಂದು ನೀಡಲಾದ...................................ಸಂಖ್ಯೆಯ ತಗಾದೆ ಬಿಲ್ಲಿನ ಪ್ರಕಾರರೂ. .................................. ರೂಪಾಯಿಗಳ ಬಾಕಿಯಿರುವ ತೆರಿಗೆಗಳು/ದರ/ ಶುಲ್ಕಗಳು ಮತ್ತು ಇತರ ಬಾಬ್ತುಗಳ ಮೊತ್ತವನ್ನು ಸದರಿ ಬಿಲ್ಲಿನಲ್ಲಿ ಗೊತ್ತುಪಡಿಸಿದ ಅವಧಿಯೊಳಗೆ ನೀವು ಸಂದಾಯ ಮಾಡಿಲ್ಲದಿರುವುದರಿಂದ ಸದರಿ ಬಾಕಿ ಮೊತ್ತವನ್ನು ಸಂದಾಯ ಮಾಡಲು ತಗಾದೆ ಆದೇಶ ಮಾಡಲಾಗಿದೆ. ಈ ತಗಾದೆ ಆದೇಶವು ಜಾರಿಯಾದ ದಿನಾಂಕದಿಂದ ಮೂವತ್ತು ದಿವಸಗಳ ಒಳಗೆ ಬಾಕಿಯಿರುವ ಮೊತ್ತವನ್ನು ಗ್ರಾಮ ಪಂಚಾಯಿತಿ ಕಛೇರಿಗೆ ಸಂದಾಯ ಮಾಡದಿದ್ದರೆ ಅಥವಾ ಸಂದಾಯ ಮಾಡದಿರುವ ಬಗ್ಗೆ, ಈ ಗ್ರಾಮ ಪಂಚಾಯತಿಗೆ ಮನದಟ್ಟಾಗುವಂತೆ ಸಾಕಷ್ಟು ಕಾರಣಗಳನ್ನು ತೋರಿಸದಿದ್ದರೆ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ 200(4)ನೇ ಪ್ರಕರಣದ ಮೇರೆಗೆ ಶೇಕಡ ಹತ್ತರಷ್ಟು ದಂಡದೊಂದಿಗೆ ಬಾಕಿಯಿರುವ ಮೊತ್ತವನ್ನು ವಸೂಲು ಮಾಡಲು ಜಪ್ತಿ ವಾರೆಂಟನ್ನು ಹೊರಡಿಸಲಾಗುವುದು.

ದಿನಾಂಕ:

ಹಿರಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/
ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
.....................ಗ್ರಾಮ ಪಂಚಾಯಿತಿ
................................ ತಾಲ್ಲೂಕು

## ನಮೂನೆ-4
## (ನಿಯಮ-23 ರ ಉಪ ನಿಯಮ (2) )
## ಜಪ್ತಿ ವಾರೆಂಟು

(ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ 200(4) ನೇ ಪ್ರಕರಣದಂತೆ)

..............................................ಗ್ರಾಮ ಪಂಚಾಯತಿ

..............................................ತಾಲ್ಲೂಕು ..............................................ಜಿಲ್ಲೆ

ಜಪ್ತಿ ವಾರೆಂಟು ಸಂಖ್ಯೆ: ..............................................

..............................................(ಗ್ರಾಮ ಪಂಚಾಯಿತಿ ಕಾರ್ಯದರ್ಶಿ/ ದ್ವಿತೀಯ ದರ್ಜೆ ಲೆಕ್ಕ ಸಹಾಯಕನ ಹೆಸರು)

ದಿನಾಂಕ:..............................ರಿಂದ ದಿನಾಂಕ:..............................ರವರೆಗೆ ಮುಕ್ತಾಯವಾಗುವ ಅವಧಿಗಾಗಿ ಮೇಲೆ ಸೂಚಿಸಿರುವ ತೆರಿಗೆ/ದರ/ಶುಲ್ಕ/ಇತರೆ ಬಾಬ್ತುಗಳಿಂದ ಬಾಕಿಯಿರುವ ರೂ..............................ಗಳ ಮೊತ್ತವನ್ನು ದಿನಾಂಕ:..............................ರಂದು ಹೊರಡಿಸಿರುವ ತಗಾದೆ/ಆದೇಶದ ಮೂಲಕ ಕ್ರಮಬದ್ಧವಾಗಿ ತಗಾದೆ ಮಾಡಿದ್ದ ರೂ ಸಹ ಶ್ರೀಮತಿ/ಶ್ರೀ..............................ಇವರು ಇದುವರೆವಿಗೂ ಸಂದಾಯ ಮಾಡಿಲ್ಲದಿರುವುದರಿಂದ ಅಥವಾ ಸಂದಾಯ ಮಾಡದಿರುವ ಬಗ್ಗೆ ಸಾಕಷ್ಟು ಕಾರಣಗಳನ್ನು ನೀಡಿರುವುದಿಲ್ಲವಾದ್ದರಿಂದ ಅಥವಾ ತಗಾದೆ ಆದೇಶವನ್ನು ಜಾರಿ ಮಾಡಿದ ದಿನಾಂಕದಿಂದ ಮೂವತ್ತು ದಿವಸಗಳ ಅವಧಿಯು ಮುಕ್ತಾಯವಾಗಿರುವುದರಿಂದ, ಜಪ್ತಿ ವೆಚ್ಚಗಳೊಂದಿಗೆ ಹಾಗೂ ಬಾಕಿ ಮೊತ್ತದ ಮೇಲ ಶೇಕಡ ಹತ್ತರ ದಂಡದೊಂದಿಗೆ ರೂ..............................ಗಳನ್ನು ತಗಾದೆ ಮಾಡುವುದು. ತಗಾದೆ ಮೊತ್ತವನ್ನು ಸಂದಾಯ ಮಾಡಲು ತಪ್ಪಿದರೆ ತಗಾದೆ ಮೊತ್ತಕ್ಕೆ ಸಮಾನವಾಗಿ ಹಾಗೂ ಅಭಿಗ್ರಹಿಸಿದ/ಜಪ್ತಿ ಮಾಡಿದ ಸ್ವತ್ತನ್ನು ಇಟ್ಟುಕೊಳ್ಳುವ ಮತ್ತು ಮಾರಾಟ ಮಾಡುವ ವೆಚ್ಚಗಳನ್ನು ಭರಿಸಲು ಸಾಕಷ್ಟಾಗಬಹುದಾದಂಥ ಮೊತ್ತಕ್ಕೆ ಅನುಗುಣವಾಗಿ ಸದರಿಯವರ ಸರಕುಗಳು ಮತ್ತು ಚರ ಸ್ವತ್ತುಗಳನ್ನು ನೀವು ಜಪ್ತಿ ಮಾಡತಕ್ಕದ್ದು. ಹೀಗೆ ಅಭಿಗ್ರಹಿಸಿದ/ಜಪ್ತಿ ಮಾಡಿದ ಸರಕುಗಳು ಮತ್ತು ಚರ ಸ್ವತ್ತುಗಳ ಎಲ್ಲಾ ವಿವರಗಳನ್ನು ವಾರೆಂಟಿನೊಂದಿಗೆ ಪ್ರಮಾಣಿಕರಿಸಿ ಗ್ರಾಮ ಪಂಚಾಯಿತಿಗೆ ಸಲ್ಲಿಸಲು ನಿರ್ದೇಶಿಸಲಾಗಿದೆ. ಸದರಿ .............................. ಅವರ ಸರಕುಗಳು ಮತ್ತು ಚರ ಸ್ವತ್ತುಗಳು ಜಪ್ತಿ ಮತ್ತು ಸಾಕಷ್ಟು ಜಪ್ತಿಗಾಗಿ ಸಿಗದಿದ್ದರೆ ಈ ವಾರಂಟ್‌ನೊಂದಿಗೆ ಪ್ರಮಾಣೀಕರಿಸತಕ್ಕದ್ದು.

ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/
ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
....................ಗ್ರಾಮ ಪಂಚಾಯಿತಿ
.............................. ತಾಲ್ಲೂಕು

ಅಧ್ಯಕ್ಷರು
....................ಗ್ರಾಮ ಪಂಚಾಯಿತಿ
.............................. ತಾಲ್ಲೂಕು

# ನಮೂನೆ-5

(ನಿಯಮ-23 ರ ಉಪ ನಿಯಮ (6)

## ವಿವರಣಾ ಪಟ್ಟಿ ಮತ್ತು ಮಾರಾಟದ ನೋಟೀಸ್

(ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ 200(4) ನೇ ಪ್ರಕರಣದಂತೆ)

.........................................ಗ್ರಾಮ ಪಂಚಾಯತಿ

.........................................ತಾಲ್ಲೂಕು ..................................ಜಿಲ್ಲೆ

.........................................ಗೆ,

............................................................ನಲ್ಲಿ ವಾಸವಾಗಿರುವ ಶ್ರೀಮತಿ/ಶ್ರೀ. ..................................................ಆದ ನೀವು ದಿನಾಂಕ: ................................ರಂದು ನೀಡಲಾದ ..............................ಸಂಖ್ಯೆಯ ತಗಾದೆ ಬಿಲ್ಲಿನ ಪ್ರಕಾರ ರೂ.................................... ರೂಪಾಯಿಗಳ ಬಾಕಿಯಿರುವ ಮೊತ್ತಕ್ಕಾಗಿ ಇದಕ್ಕೆ ಲಗತ್ತಿಸಿರುವ ವಿವರಣಾ ಪಟ್ಟಿಯಲ್ಲಿ ನಿರ್ದಿಷ್ಟಪಡಿಸಲಾದ ಸರಕುಗಳು ಮತ್ತು ಚರ ಸ್ವತ್ತುಗಳನ್ನು ಈ ದಿನದಂದು ನಾನು ಅಭಿಗ್ರಹಿಸಿದ್ದೇನೆಂದು ಮತ್ತು ಈ ನೋಟೀಸಿನ ದಿನಾಂಕದಿಂದ ಏಳು ದಿನಗಳೊಳಗೆ ಸರಕುಗಳು ಮತ್ತು ಚರ ಸ್ವತ್ತುಗಳನ್ನು ಇಟ್ಟುಕೊಳ್ಳುವ ಬಗೆಗಿನ ವೆಚ್ಚದ ಜೊತೆಗೆ ಬಾಕಿಯಾದ ಮೊಬಲಗನ್ನು ........................................ಗ್ರಾಮ ಪಂಚಾಯತಿ ಕಚೇರಿಗೆ ನೀವು ಸಂದಾಯ ಮಾಡದಿದ್ದರೆ, ಆ ಸರಕುಗಳ ಮತ್ತು ಚರ ಸ್ವತ್ತುಗಳನ್ನು ........................................ ಗ್ರಾಮ ಪಂಚಾಯತಿ ಕಛೇರಿಯಲ್ಲಿ ಅಥವಾ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ನಿರ್ದೇಶಿಸಬಹುದಾದಂಥ ಇತರ ಸ್ಥಳಗಳಲ್ಲಿ ದಿನಾಂಕ:.................................ದಂದು ಹರಾಜು ಮೂಲಕ ಮಾರಾಟ ಮಾಡಲಾಗುವುದೆಂದು ಮತ್ತು ಸರಕುಗಳು ಹಾಗೂ ಚರ ಸ್ವತ್ತುಗಳು ಶೀಘ್ರವಾಗಿ ಮತ್ತು ಸ್ವಾಭಾವಿಕವಾಗಿ ಹಾಳಾಗುವಾಗುವಂತಿದ್ದರೆ ಯಾವುದೇ ಮುಂಚಿನ ದಿನಾಂಕದಂದು ಹರಾಜು ಮೂಲಕ ಮಾರಾಟ ಮಾಡಲಾಗುವುದೆಂದು ನೋಟಿಸನ್ನು ನೀಡಲಾಗಿದೆ.

ದಿನಾಂಕ:

ಹಿರಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/
ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
.....................ಗ್ರಾಮ ಪಂಚಾಯಿತಿ
.............................. ತಾಲ್ಲೂಕು

### ಅನುಬಂಧ -1

(ನಿಯಮ-5)

| ಕ್ರ. ಸಂ | ವರ್ಗೀಕರಣ | ದಾಖಲೆಗಳು | ಷರಾ |
|---|---|---|---|
| 1. | ಗ್ರಾಮ ಠಾಣಾ* | 1. ದಿಶಾಂಕ್/ತಹಶೀಲ್ದಾರರ ಗ್ರಾಮ ಠಾಣಾ ನಕ್ಷೆ. | ಕಡ್ಡಾಯ |
| | | 2. ಋಣಭಾರ ಪ್ರಮಾಣ ಪತ್ರ-(ನಮೂನೆ-15) | ಐಚ್ಛಿಕ |
| | | 3.ಸೇಲ್ ಡೀಡ್/ ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕುಪತ್ರ/ ರಿಲೀಜ್ ಡೀಡ್/ ವರ್ಗಾವಣೆ/ ಸೆಟ್ಲಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ / ಅದಲು ಬದಲು ಪತ್ರ. | ಕಡ್ಡಾಯ |

| | | | |
|---|---|---|---|
| 2. | ಸರ್ಕಾರದ ವಸತಿ ನಿಗಮದ ಯೋಜನೆಯ ಮಂಜೂರಾದ ಆಸ್ತಿ* | 1. ಸರ್ಕಾರದ ಹಕ್ಕು ಪತ್ರ/ ಸ್ವಾಧೀನ ಪತ್ರ /ನಿಗಮದ/ ಮಂಡಳಿಯ ಮಂಜೂರಾತಿ ಪತ್ರ | ಕಡ್ಡಾಯ |
| | | 2. ಋಣಭಾರ ಪ್ರಮಾಣ ಪತ್ರ-(ನಮೂನೆ-15) | ಐಚ್ಛಿಕ |
| | | 3. ಸೇಲ್ ಡೀಡ್/ ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕು ಪತ್ರ/ ರಿಲೀಜ್ ಡೀಡ್/ ವರ್ಗಾವಣೆ/ ಸೆಟ್ಲಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ / ಅದಲು ಬದಲು/ ಇತರೆ ಪತ್ರ (ನಮೂದಿಸಿ) | ಐಚ್ಛಿಕ |
| 3. | ಸ್ಥಳೀಯ ಯೋಜನಾ ಪ್ರದೇಶದಲ್ಲಿನ ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಸ್ಥಳೀಯ ಯೋಜನಾ ಪ್ರದೇಶದ ಹೊರ ಭಾಗದಲ್ಲಿ/ಸ್ಥಳೀಯ ಯೋಜನಾ ಪ್ರಾಧಿಕಾರದ ವಿನ್ಯಾಸ ಅನುಮೋದಿತ ಆಸ್ತಿ* | 1. ಭೂ ಪರಿವರ್ತನಾ ಆದೇಶ ಪತ್ರ | ಕಡ್ಡಾಯ |
| | | 2. ಪ್ರಾಥಮಿಕ ವಿನ್ಯಾಸ ಅನುಮೋದನೆ ಮತ್ತು ನಿವೇಶನ ಬಿಡುಗಡೆ ಆದೇಶ /ಅಂತಿಮ ವಿನ್ಯಾಸ ಅನುಮೋದನೆ ಮತ್ತು ನಿವೇಶನ ಬಿಡುಗಡೆ ಆದೇಶ | ಕಡ್ಡಾಯ |
| | | 3. ಅನುಮೋದಿತ ವಿನ್ಯಾಸ ನಕ್ಷೆ | ಕಡ್ಡಾಯ |
| | | 4. ನಿವೇಶನ ಹಂಚಿಕೆ ಪತ್ರ/ಸ್ವಾಧೀನ ಪತ್ರ | ಐಚ್ಛಿಕ |
| | | 5. ಋಣಭಾರ ಪ್ರಮಾಣ ಪತ್ರ-(ನಮೂನೆ-15) | ಐಚ್ಛಿಕ |
| 4. | ದಿನಾಂಕ:11.11.2014 ರ ಪೂರ್ವದಲ್ಲಿ ಸ್ಥಳೀಯ ಯೋಜನಾ ಪ್ರದೇಶದ ಹೊರ ಭಾಗದಲ್ಲಿ ಗ್ರೂಪ್/ಮಂಡಲ ಪಂಚಾಯತಿಯ ವಿನ್ಯಾಸ ಅನುಮೋದಿತ ಆಸ್ತಿ* | 1. ಭೂ ಪರಿವರ್ತನಾ ಆದೇಶ ಪತ್ರ | ಕಡ್ಡಾಯ |
| | | 2. ಸ್ಥಳೀಯ ಯೋಜನಾ ಪ್ರದೇಶದ ಹೊರ ಭಾಗದಲ್ಲಿರುವ ಬಗ್ಗೆ ಸಕ್ಷಮ ಪ್ರಾಧಿಕಾರದ ದೃಢೀಕರಣ ಪತ್ರ | ಕಡ್ಡಾಯ |
| | | 3. ಗ್ರೂಪ್/ಮಂಡಲ ಪಂಚಾಯತಿಯ ಅನುಮೋದಿತ ವಿನ್ಯಾಸ ನಕ್ಷೆ | ಕಡ್ಡಾಯ |
| | | 4. ಋಣಭಾರ ಪ್ರಮಾಣ ಪತ್ರ-(ನಮೂನೆ-15) | ಐಚ್ಛಿಕ |
| | | 5. ಸೇಲ್ ಡೀಡ್/ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕು ಪತ್ರ/ ರಿಲೀಜ್ ಡೀಡ್/ ವರ್ಗಾವಣೆ/ ಸೆಟ್ಲಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ/ಅದಲು ಬದಲು/ ಇತರೆ ಪತ್ರ (ನಮೂದಿಸಿ) | ಐಚ್ಛಿಕ |
| 5. | ಸ್ಥಳೀಯ ಯೋಜನಾ ಪ್ರದೇಶದಲ್ಲಿ ದಿನಾಂಕ:16-11-1992ರ ಪೂರ್ವದಲ್ಲಿ ಗ್ರೂಪ್/ಮಂಡಲ ಪಂಚಾಯಿತಿಯಿಂದ ಅನುಮೋದನೆಯಾಗಿರುವ ಆಸ್ತಿ* | 1. ಭೂ ಪರಿವರ್ತನಾ ಆದೇಶ ಪತ್ರ | ಕಡ್ಡಾಯ |
| | | 2. ಹಕ್ಕುಪತ್ರ | ಐಚ್ಛಿಕ |
| | | 3. ಅನುಮೋದಿತ ವಿನ್ಯಾಸ ನಕ್ಷೆ | ಕಡ್ಡಾಯ |
| | | 4. ಋಣಭಾರ ಪ್ರಮಾಣ ಪತ್ರ-(ನಮೂನೆ-15) | ಐಚ್ಛಿಕ |
| | | 5. ಸೇಲ್ ಡೀಡ್/ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕು ಪತ್ರ/ | ಐಚ್ಛಿಕ |

| | | | |
|---|---|---|---|
| | | ರಿಲೀಜ್ ಡೀಡ್/ ವರ್ಗಾವಣೆ/ ಸೆಟ್ಲಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ /ಅದಲು ಬದಲು/ ಇತರೆ ಪತ್ರ(ನಮೂದಿಸಿ) | |
| 6. | ಮಂಡಲ ಪಂಚಾಯತಿ ಅವಧಿಯ ಪೂರ್ವದಲ್ಲಿ ನೋಟಿ ಫೈಡ್ ಏರಿಯಾ ಸಮಿತಿಯಲ್ಲಿ ನಿರ್ವಹಿಸಲಾದ ಆಸ್ತಿ/ ಅಧಿಸೂಚಿತ ಪ್ರದೇಶದ ಆಸ್ತಿ* | 1. ಜಮಾಬಂದಿ ರಿಜಿಸ್ಟರ್ / ಮ್ಯುಟೇಷನ್ ರಿಜಿಸ್ಟರ್ | ಕಡ್ಡಾಯ |
| | | 2. ಋಣಭಾರ ಪ್ರಮಾಣ ಪತ್ರ-(ನಮೂನೆ-15) | ಐಚ್ಛಿಕ |
| | | 3. ಇತರೆ ದಾಖಲೆ (ನಮೂದಿಸಿ) | ಐಚ್ಛಿಕ |
| 7 | ಕೆಐಎಡಿಬಿ/ಕೆಎಸ್ಎಸ್ಐಡಿಸಿ ಕೈಗಾರಿಕಾ ವಿನ್ಯಾಸ ಅನುಮೋದಿತ ಆಸ್ತಿ* | 1 ಕೆಐಎಡಿಬಿ/ಕೆಎಸ್ಎಸ್ಐಡಿಸಿ ಭೂ ಸ್ವಾಧೀನ ಪತ್ರ | ಕಡ್ಡಾಯ |
| | | 2. ಕೈಗಾರಿಕಾ ಪ್ರದೇಶ ನಕ್ಷೆ | ಕಡ್ಡಾಯ |
| | | 3. ಕೈಗಾರಿಕಾ ನಿವೇಶನ ನಕ್ಷೆ | ಕಡ್ಡಾಯ |
| | | 4. ಕೈಗಾರಿಕಾ ನಿವೇಶನ ಹಂಚಿಕೆ ಪತ್ರ | ಕಡ್ಡಾಯ |
| | | 5 ಕೈಗಾರಿಕಾ ಪರವಾನಿಗೆ ಪ್ರಮಾಣ ಪತ್ರ | ಐಚ್ಛಿಕ |
| | | 6. ಪರ್ಮನೆಂಟ್ ರಿಜಿಸ್ಟ್ರೇಷನ್ ಸರ್ಟಿಫಿಕೇಟ್/ಲೆಟರ್ ಆಫ್ ಇನ್ಕಾರ್ಪೊರೇಷನ್ | ಐಚ್ಛಿಕ |
| | | 7. ಋಣಭಾರ ಪ್ರಮಾಣ ಪತ್ರ (ನಮೂನೆ-15) | ಐಚ್ಛಿಕ |
| | | 8. ಸೇಲ್ ಡೀಡ್/ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕು ಪತ್ರ/ ರಿಲೀಜ್ ಡೀಡ್/ ವರ್ಗಾವಣೆ/ ಸೆಟ್ಲಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ /ಅದಲು ಬದಲು/ ಇತರೆ ಪತ್ರ (ನಮೂದಿಸಿ) | ಐಚ್ಛಿಕ |
| 8. | ದಿನಾಂಕ:16.11.1992 ರಿಂದ ದಿನಾಂಕ:14-06-2013 ರವರೆಗೆ ಗ್ರಾಮ ಪಂಚಾಯಿತಿ ಅನುಮತಿ ಪತ್ರ/ಅನುಮೋದಿತ ಕಟ್ಟಡ ನಕ್ಷೆಯ ಕಟ್ಟಡ ನಿರ್ಮಿತ ಭೂ ಪರಿವರ್ತಿತ ಆಸ್ತಿ | 1. ಭೂ ಪರಿವರ್ತನಾ ಆದೇಶ ಪತ್ರ | ಕಡ್ಡಾಯ |
| | | 2. ಗ್ರಾಮ ಪಂಚಾಯಿತಿ ಕಟ್ಟಡ ನಿರ್ಮಾಣ ಅನುಮತಿ ಪತ್ರ/ಗ್ರಾಮ ಪಂಚಾಯಿತಿ ಅನುಮೋದಿತ ಕಟ್ಟಡ ನಕ್ಷೆ | ಕಡ್ಡಾಯ |
| | | 3. ಋಣಭಾರ ಪ್ರಮಾಣ ಪತ್ರ (ನಮೂನೆ-15) | ಐಚ್ಛಿಕ |
| | | 4. ಸೇಲ್ ಡೀಡ್/ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕು ಪತ್ರ/ ರಿಲೀಜ್ ಡೀಡ್/ ವರ್ಗಾವಣೆ/ ಸೆಟ್ಲಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ | ಐಚ್ಛಿಕ |

| | | | |
|---|---|---|---|
| | | ವಿಭಾಗ ಪತ್ರ /ಅದಲು ಬದಲು/ ಇತರೆ ಪತ್ರ (ನಮೂದಿಸಿ) | |
| 9. | ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಸೆಕ್ಷನ್ 94ಸಿ/ 94ಸಿಸಿ/ 94ರಡಿಯಲ್ಲಿ ಮಂಜೂರಾದ ಆಸ್ತಿ | 1. ಸರ್ಕಾರದ ಹಕ್ಕು ಪತ್ರ/ ಸ್ವಾಧೀನ ಪತ್ರ/ಮಂಜೂರಾತಿ ಆದೇಶ/ಪ್ರಮಾಣ ಪತ್ರ | ಕಡ್ಡಾಯ |
| | | 2. ಋಣಭಾರ ಪ್ರಮಾಣ ಪತ್ರ (ನಮೂನೆ-15/16) | ಕಡ್ಡಾಯ |
| | | 3. ಸೇಲ್ ಡೀಡ್/ ಸ್ವತ್ತಿನ ಕಾರ್ಡ್/ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕು ಪತ್ರ/ ರಿಲೀಜ್ ಡೀಡ್/ ವರ್ಗಾವಣೆ/ ಸೆಟ್ಲ್‌ಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ /ಅದಲು ಬದಲು/ ಇತರೆ ಪತ್ರ(ನಮೂದಿಸಿ) | ಐಚ್ಛಿಕ |
| 10 | ಪುನರ್ವಸತಿ ಯೋಜನೆಯ ಆಸ್ತಿ* | 1. ಸರ್ಕಾರದ ಹಕ್ಕು ಪತ್ರ/ ಸ್ವಾಧೀನ ಪತ್ರ | ಕಡ್ಡಾಯ |
| | | 2. ಅನುಮೋದಿತ ವಿನ್ಯಾಸ ನಕ್ಷೆ | ಕಡ್ಡಾಯ |
| | | 3. ಋಣಭಾರ ಪ್ರಮಾಣ ಪತ್ರ-(ನಮೂನೆ-15) | ಐಚ್ಛಿಕ |
| | | 4. ಸೇಲ್ ಡೀಡ್/ ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕು ಪತ್ರ/ ರಿಲೀಜ್ ಡೀಡ್/ ವರ್ಗಾವಣೆ/ ಸೆಟ್ಲ್‌ಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ / ಅದಲು ಬದಲು/ ಇತರ ಪತ್ರ(ನಮೂದಿಸಿ) | ಐಚ್ಛಿಕ |
| 11. | ನೋಂದಾಯಿತ ಪಾಲುದಾರಿಕೆ ಪತ್ರದಂತೆ ಪೋಡಿ/ಹಿಸ್ಸಾ ನಂಬರ್ ಪಡೆದ ವೈಯಕ್ತಿಕ ಕುಟುಂಬದ ಆಸ್ತಿ (ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ)* | 1. ತಹಶೀಲ್ದಾರರ ಹಿಂಬರಹ ಪತ್ರ/ ಭೂ ಪರಿವರ್ತನಾ ಆದೇಶ ಪತ್ರ | ಕಡ್ಡಾಯ |
| | | 2. ಭೂ ಪರಿವರ್ತನಾ ನಕ್ಷೆ/ ಪಹಣಿ ಪತ್ರ | ಕಡ್ಡಾಯ |
| | | 3. ಋಣಭಾರ ಪ್ರಮಾಣ ಪತ್ರ(ನಮೂನೆ-15) | ಐಚ್ಛಿಕ |
| | | 4. ಸೇಲ್ ಡೀಡ್/ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕು ಪತ್ರ/ ರಿಲೀಜ್ ಡೀಡ್/ ವರ್ಗಾವಣೆ/ ಸೆಟ್ಲ್‌ಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ / ಅದಲು ಬದಲು/ ಇತರೆ ಪತ್ರ (ನಮೂದಿಸಿ) | ಐಚ್ಛಿಕ |
| 12. | ದಿನಾಂಕ: 11.11.2014 ರಿಂದ ದಿನಾಂಕ:10.01.2025ರವರೆಗೆ ಸ್ಥಳೀಯ ಯೋಜನಾ ಪ್ರದೇಶದ ಹೊರ ಭಾಗದಲ್ಲಿ | 1. ಭೂ ಪರಿವರ್ತನಾ ಆದೇಶ ಪತ್ರ | ಕಡ್ಡಾಯ |
| | | 2.ಪ್ರಾಥಮಿಕ ವಿನ್ಯಾಸ ಅನುಮೋದನೆ ಮತ್ತು ನಿವೇಶನ ಬಿಡುಗಡೆ ಆದೇಶ/ ಅಂತಿಮ | ಕಡ್ಡಾಯ |

| | | | |
|---|---|---|---|
| | ಗ್ರಾಮ ಪಂಚಾಯಿತಿ ವಿನ್ಯಾಸ ಅನುಮೋದಿತ ಆಸ್ತಿ * | ವಿನ್ಯಾಸ ಅನುಮೋದನೆ ಮತ್ತು ನಿವೇಶನ ಬಿಡುಗಡೆ ಆದೇಶ | |
| | | 3. ಅನುಮೋದಿತ ವಿನ್ಯಾಸ ನಕ್ಷೆ | ಕಡ್ಡಾಯ |
| | | 4.ಋಣ ಭಾರ ಪ್ರಮಾಣ ಪತ್ರ(ನಮೂನೆ-15) | ಐಚ್ಛಿಕ |
| | | 5.ಸ್ಥಳೀಯ ಯೋಜನಾ ಪ್ರದೇಶದ ಹೊರ ಭಾಗದಲ್ಲಿರುವ ಬಗ್ಗೆ ಸಕ್ಷಮ ಪ್ರಾಧಿಕಾರದ ದೃಢೀಕರಣ ಪತ್ರ | ಕಡ್ಡಾಯ |
| | | 6. ಸೇಲ್ ಡೀಡ್/ ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕು ಪತ್ರ/ ರಿಲೀಜ್ ಡೀಡ್/ ವರ್ಗಾವಣೆ/ ಸೆಟ್ಲ್‌ಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ / ಅದಲು ಬದಲು/ ಇತರೆ ಪತ್ರ (ನಮೂದಿಸಿ) | ಐಚ್ಛಿಕ |
| 13. | ಕೇಂದ್ರ ಸರ್ಕಾರ/ರಾಜ್ಯಸರ್ಕಾರ/ಸ್ಥಳೀಯ ಸಂಸ್ಥೆಗಳ ನಿವೇಶನ/ಕಟ್ಟಡ | 1. ಪಹಣಿ ಪತ್ರ | ಐಚ್ಛಿಕ |
| | | 2. ಪರಿತ್ಯಾಜನ ಪತ್ರ | ಐಚ್ಛಿಕ |
| | | 3 ಇತರೆ ದಾಖಲೆಗಳು | ಕಡ್ಡಾಯ |
| 14. | ಕರ್ನಾಟಕ ಭೂ-ಸುಧಾರಣಾ ಅಧಿನಿಯಮ 1961 ರಪ್ರಕರಣ 38ಎ ರಡಿಯಲ್ಲಿ ಮಂಜೂರಾದ ಆಸ್ತಿ | 1. ಸರ್ಕಾರದ ಹಕ್ಕು ಪತ್ರ/ಸ್ವಾಧೀನ ಪತ್ರ/ಮಂಜೂರಾತಿ ಆದೇಶ/ಪ್ರಮಾಣ ಪತ್ರ | ಕಡ್ಡಾಯ |
| | | 2 ಋಣಭಾರ ಪ್ರಮಾಣ ಪತ್ರ (ನಮೂನೆ-15/16) | ಕಡ್ಡಾಯ |
| | | 3. ಸೇಲ್ ಡೀಡ್/ ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕು ಪತ್ರ/ ರಿಲೀಜ್ ಡೀಡ್/ ವರ್ಗಾವಣೆ/ ಸೆಟ್ಲ್‌ಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ / ಅದಲು ಬದಲು/ ಇತರೆ ಪತ್ರ (ನಮೂದಿಸಿ) | ಐಚ್ಛಿಕ |
| 15. | ನಿಗಮ/ಮಂಡಳಿ/ನಿಯಮಿತ/ಪ್ರಾಧಿಕಾರದ ನಿವೇಶನ/ಕಟ್ಟಡ* | 1. ಭೂ-ಸ್ವಾಧೀನ ಪತ್ರ | ಕಡ್ಡಾಯ |
| | | 2. ವಿನ್ಯಾಸ ನಕ್ಷೆ | ಐಚ್ಛಿಕ |
| | | 3. ಇತರೆ ದಾಖಲೆಗಳು | ಕಡ್ಡಾಯ |

*** - ವರ್ಗೀಕರಣದಡಿ ಕಟ್ಟಡಗಳಿಗೆ ಸಂಬಂಧಿಸಿದಂತೆ ಕಟ್ಟಡಗಳನಿರ್ಮಾಣದ ಉಪಬಂಧಗಳ / ನಿಯಮಗಳ / ಉಪವಿಧಿಗಳ ಅನುಸಾರ ದಾಖಲೆಗಳನ್ನು ಪರಿಶೀಲಿಸಿ ನಮೂನೆ - 11ಎ ವಿತರಿಸುವುದು.**

## ಅನುಬಂಧ-2

(ನಿಯಮ-8 )

| ಕ್ರ. ಸಂ | ವರ್ಗೀಕರಣ | ದಾಖಲೆಗಳು | ಷರಾ |
|---|---|---|---|
| 1 | ಮಾದರಿ ಕಟ್ಟಡ ಉಪವಿಧಿಗಳ ಉಪಬಂಧಗಳನ್ನು ಉಲ್ಲಂಘಿಸಿ ಕೃಷಿ ಜಮೀನಿನಲ್ಲಿನ ಅಥವಾ ಭೂ-ಪರಿವರ್ತಿತ ಜಮೀನಿನಲ್ಲಿನ ಕಟ್ಟಡಗಳು. | 1. ನೋಂದಾಯಿತ ಪ್ರಮಾಣ ಪತ್ರ / ತೆರಿಗೆ ಪಾವತಿ ರಶೀದಿ (ದಿನಾಂಕ: 07.04.2025 ರ ಪೂರ್ವದ್ದು) | ಕಡ್ಡಾಯ |
| | | 2. ವಿದ್ಯುತ್ ಬಿಲ್ (ದಿನಾಂಕ: 07.04.2025 ರ ಪೂರ್ವದ್ದು) | ಕಡ್ಡಾಯ |
| | | 3. RTC | ಕಡ್ಡಾಯ |
| | | 4. ಭೂ- ಪರಿವರ್ತನೆ ಆದೇಶ | ಐಚ್ಛಿಕ |
| | | 5. ಋಣಭಾರ ಪ್ರಮಾಣ ಪತ್ರ (EC) | ಕಡ್ಡಾಯ |
| 2 | ಪರಿವರ್ತಿತ/ ಪರಿವರ್ತನೆಯಿಲ್ಲದ ಅಥವಾ ಕೃಷಿ ಭೂಮಿಯಲ್ಲಿನ ನಿವೇಶನಗಳು. | 1. ನೋಂದಾಯಿತ ಪ್ರಮಾಣ ಪತ್ರ. | ಕಡ್ಡಾಯ |
| | | 2. RTC | ಕಡ್ಡಾಯ |
| | | 3. ಭೂ- ಪರಿವರ್ತನೆ ಆದೇಶ | ಐಚ್ಛಿಕ |
| | | 4. ಋಣಭಾರ ಪ್ರಮಾಣ ಪತ್ರ (EC) | ಕಡ್ಡಾಯ |
| 3 | ಸಕ್ಷಮ ಪ್ರಾಧಿಕಾರದಿಂದ ವಿನ್ಯಾಸ ಅನುಮೋದಿತ ಬಡಾವಣೆಯಲ್ಲಿ ಮಾದರಿ ಕಟ್ಟಡ ಉಪವಿಧಿಗಳ ಉಪಬಂಧಗಳನ್ನು ಉಲ್ಲಂಘಿಸಿ ಅಥವಾ ಅಧಿಭೋಗ ಅಥವಾ ಪೂರ್ಣಗೊಳಿಸಿದ ಪ್ರಮಾಣ ಪತ್ರವನ್ನು ಪಡೆಯದೆ ಸ್ವಾಧೀನಪಡಿಸಿಕೊಂಡ ಕಟ್ಟಡಗಳು. | 1. ನೋಂದಾಯಿತ ಪ್ರಮಾಣ ಪತ್ರ. | ಕಡ್ಡಾಯ |
| | | 2. ಭೂ- ಪರಿವರ್ತನೆ ಆದೇಶ | ಕಡ್ಡಾಯ |
| | | 3. ಬಡಾವಣೆ ವಿನ್ಯಾಸ ಅನುಮೋದಿತ ಆದೇಶ | ಕಡ್ಡಾಯ |
| | | 4. ಅನುಮೋದಿತ ಬಡಾವಣೆ ನಕ್ಷೆ. | ಕಡ್ಡಾಯ |
| | | 5.ನಿವೇಶನ ಬಿಡುಗಡೆ ಆದೇಶ | ಕಡ್ಡಾಯ |
| | | 6. ಋಣಭಾರ ಪ್ರಮಾಣ ಪತ್ರ (EC) | ಕಡ್ಡಾಯ |
| 4 | ಬಡಾವಣೆ ವಿನ್ಯಾಸ ಅನುಮೋದನೆಯಿಲ್ಲದ, ಆದರೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ, ಉದ್ಯಾನವನ, ನಾಗರೀಕ ಸೌಕರ್ಯ ನಿವೇಶನ, ರಸ್ತೆಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961 ರ ಪ್ರಕರಣ 17 ರನ್ವಯ ಗ್ರಾಮ ಪಂಚಾಯಿತಿಗೆ ಉಚಿತವಾಗಿ ಪರಿತ್ಯಾಜನಾ ಪತ್ರದ ಮೂಲಕ ವರ್ಗಾಯಿಸಿರುವ /ವರ್ಗಾಯಿಸಿಕೊಂಡು ಕಂದಾಯ ಭೂಮಿ/ ಭೂ-ಪರಿವರ್ತಿತ ಜಮೀನಿನಲ್ಲಿನ ನಿವೇಶನಗಳು | 1. RTC | ಕಡ್ಡಾಯ |
| | | 2. ನೋಂದಾಯಿತ ಪರಿತ್ಯಾಜನಾ ಪತ್ರ | ಕಡ್ಡಾಯ |
| | | 3. ಭೂ-ಪರಿವರ್ತಿತ ಆದೇಶ | ಐಚ್ಛಿಕ |
| | | 4. ಋಣ ಭಾರ ಪ್ರಮಾಣ ಪತ್ರ (EC) | ಕಡ್ಡಾಯ |

| | | | |
|---|---|---|---|
| 5. | ಭೂ-ಪರಿವರ್ತಿತ / ಭಾವಿತ ಭೂ-ಪರಿವರ್ತಿತ ಜಮೀನುಗಳು (ಏಕ ನಿವೇಶನ) | ಭೂ-ಪರಿವರ್ತನೆ ಆದೇಶ / ಮಂಜೂರಾತಿ ಆದೇಶ | ಕಡ್ಡಾಯ |

## ಅನುಬಂಧ-3

(ನಿಯಮ-12(7) )

| ಕ್ರ.ಸಂ. | ಮ್ಯುಟೇಶನ್ ವಿಧಗಳು | ಮ್ಯುಟೇಶನ್‌ಗಾಗಿ ಬೇಕಾಗಿರುವ ಮಾಹಿತಿ | ಹರಾ ಮತ್ತು ಬೇಕಾಗಿರುವ ದಾಖಲೆಗಳು | ನಮೂನೆ-11ಎ ಅಥವಾ 11ಬಿ ನಲ್ಲಿ ಬದಲಾವಣೆ / ಸೇರ್ಪಡೆ ವಿವರ | ದಿನಗಳು |
|---|---|---|---|---|---|
| 1 | ಸೇಲ್ ಡೀಡ್ | ನೋಂದಣಿ ಆಗಿರುವ ಸ್ವತ್ತುಗಳು | ಕ್ರಯ ಪತ್ರ ಅಥವಾ ಜೆ-ಫಾರ್ಮ್ | **ಮಾಲೀಕರ ವಿವರ** | 15 |
| 2 | ಸದರಿ ಸ್ವತ್ತಿನ ಸಂಖ್ಯೆ (ಗ್ರಾ.ಪಂ. ದಾಖಲೆಪ್ರಕಾರ) | - | - | **ಸದರಿ ಸ್ವತ್ತಿನ ಸಂಖ್ಯೆ** | 01 |
| 3 | ಆಸ್ತಿಯ ಪ್ರಕಾರ | - | ಪೂರ್ಣಗೊಂಡ ಪ್ರಮಾಣ ಪತ್ರ / ಬಳಕೆ ಯೋಗ್ಯ ಪ್ರಮಾಣ ಪತ್ರ (Completion Certificate / Occupancy Certificate) | **ನಿವೇಶನದಿಂದ ಕಟ್ಟಡ / ಕಟ್ಟಡದಿಂದ ನಿವೇಶನ** | 01 |
| 4 | ಕಟ್ಟಡದ ಮೇಲ್ಛಾವಣಿ ತರಹೆ | - | - | **ಕಟ್ಟಡದ ಮೇಲ್ಛಾವಣಿ ತರಹೆ** (RCC/SHEET/MUD ROOF) | 01 |
| 5 | ಗಿಫ್ಟ್ ಡೀಡ್ | ನೋಂದಣಿ ಆಗಿರುವ ಸ್ವತ್ತುಗಳು | ಕಾಣಿಕೆ ಪತ್ರ ಅಥವಾ ಜೆ-ಫಾರ್ಮ್ | **ಮಾಲೀಕರ ವಿವರ** | 15 |
| 6 | ವಿಲ್ | ನೋಂದಣಿ ಆಗಿರುವ ಸ್ವತ್ತುಗಳು | ವಿಲ್ ದಾಖಲೆ ಅಥವಾ ಉಯಿಲು ಪತ್ರ | **ಮಾಲೀಕರ ವಿವರ** | 15 |
| 7 | ಪಿತ್ರಾರ್ಜಿತ ಆಸ್ತಿ (ಪೌತಿ ಖಾತೆ) | ನೋಂದಣಿ ಮತ್ತು ನೋಂದಣಿ ಆಗದಿರುವ ಎರಡೂ ಸ್ವತ್ತುಗಳಿಗೂ | ನೋಂದಾಯಿತ ಪತ್ರ/ ವಂಶವೃಕ್ಷ | **ಮಾಲೀಕರ ವಿವರ** | 15 |
| 8 | ಒಟ್ಟುಗೂಡಿಸು | - | ಹಕ್ಕು ಬಿಡುಗಡೆ ಪತ್ರ ಅಥವಾ ಜೆ-ಫಾರ್ಮ್, ಹಕ್ಕುಪತ್ರ, LPA ಯಿಂದ ಅನುಮೋದನ ಆದೇಶಗಳು | **ಆಸ್ತಿಗಳ ಒಟ್ಟುಗೂಡಿಸುವಿಕೆ (ಮಾಲೀಕರ ವಿವಿಧ ಬದಲಾವಣೆ ಇರುವುದಿಲ್ಲ)** | 01 |
| 9 | ಆಸ್ತಿಯ ವಿಭಜನೆ | - | LPA ಯಿಂದ ಅನುಮೋದನ ಆದೇಶಗಳು | **ಆಸ್ತಿಗಳ ವಿಭಜನೆ (ಮಾಲೀಕರ ವಿವಿಧ ಬದಲಾವಣೆ ಇರುವುದಿಲ್ಲ)** | 01 |
| 10 | ಹಕ್ಕು ಮತ್ತು ಋಣಗಳ ಬದಲಾವಣೆ | ನೋಂದಣಿ ಮತ್ತು ನೋಂದಣಿ ಆಗದಿರುವ ಎರಡೂ ಸ್ವತ್ತುಗಳಿಗೂ | - | **ಹಕ್ಕುಗಳು ಮತ್ತು ಹೊಣೆಗಾರಿಕೆಗಳ ಬದಲಾವಣೆ** | 01 |
| 11 | ಆಸ್ತಿಯ ವಿಧ | - | - | **ವಾಸಯೋಗ್ಯದಿಂದ ವಾಣಿಜ್ಯ ಉಪಯೋಗಕ್ಕೆ, ಅದಲು ಬದಲು** | 01 |
| 12 | ವಿಭಾಗ ಪತ್ರ | ನೋಂದಣಿ ಆಗಿರುವ | ನೋಂದಾಯಿತ ವಿಭಾಗ ಪತ್ರ | **ಉತ್ತರಾಧಿಕಾರಿಗಳ ನಡುವೆ ಆಸ್ತಿ ವಿಭಾಗ** | 1 |
| 13 | ನ್ಯಾಯಾಲಯದ ಆದೇಶ | ನೋಂದಣಿ ಆಗದಿರುವ ಸ್ವತ್ತುಗಳು | ನ್ಯಾಯಾಲಯದ ಆದೇಶಗಳು | **ಆಸ್ತಿಯ ಮತ್ತು ಮಾಲೀಕರ ವಿವರ** | 1 |
| 14 | ಹಕ್ಕು ಬಿಡುಗಡೆ ಪತ್ರ | ನೋಂದಣಿ ಆಗಿರುವ ಸ್ವತ್ತುಗಳು | (Relinquishment Deed) ತ್ಯಾಗ ಪತ್ರ | **ಮಾಲೀಕರ ವಿವರ, ಹಕ್ಕುಗಳು ಮತ್ತು ಹೊಣೆಗಾರಿಕೆಗಳು** | 15 |
| 15 | ಕೋರ್ಟ್ ತಡೆ ಆಜ್ಞೆ | ನೋಂದಣಿ ಆಗದಿರುವಸ್ವತ್ತುಗಳು | ಕೋರ್ಟ್ ತಡೆ ಆಜ್ಞೆ ಆದೇಶಗಳು | ಹಕ್ಕುಗಳು ಮತ್ತು ಹೊಣೆಗಾರಿಕೆಗಳು | 1 |
| 16 | ಕೋರ್ಟ್ ತಡೆ ಆಜ್ಞೆ ಬಿಡುಗಡೆ | ನೋಂದಣಿ ಆಗದಿರುವ ಸ್ವತ್ತುಗಳು | ಕೋರ್ಟ್ ತಡೆ ಬಿಡುಗಡೆ ಆದೇಶಗಳು | ಹಕ್ಕುಗಳು ಮತ್ತು ಹೊಣೆಗಾರಿಕೆಗಳು | 1 |

| | | | | | |
|---|---|---|---|---|---|
| 17 | ಅದಲು ಬದಲು | ನೋಂದಣಿ ಆಗಿರುವ ಸ್ವತ್ತುಗಳು | ಎಕ್ಸ್ ಚೇಂಜ್ ಡೀಡ್ (ಇಲ್ಲಿ ಹೆಚ್ಚಿನ ಸ್ವತ್ತುಗಳನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ಇದೆ) | ಮಾಲೀಕರ ವಿವರ (ಮಾಲೀಕರ ಬದಲಾವಣೆ ಸಾಧ್ಯ) | 15 |
| 18 | ಹರಾಜು ಮಾರಾಟ ಕ್ರಯ ಪತ್ರ | ನೋಂದಣಿ ಆಗಿರುವ ಸ್ವತ್ತುಗಳು | ಸೇಲ್ ಆಫ್ ಸರ್ಟಿಫಿಕೇಟ್ ಮತ್ತು ಬ್ಯಾಂಕ್ ಹರಾಜು ಪತ್ರ | ಹಕ್ಕುಗಳು ಮತ್ತು ಹೊಣೆಗಾರಿಕೆಗಳು | 15 |
| 19 | ಮರು ಸಂಗ್ರಹಿಸಿ | ನೋಂದಣಿ ಆಗಿರುವ ಸ್ವತ್ತುಗಳು | ಕ್ಯಾನ್ಸಲೇಷನ್ ಡೀಡ್ ಮತ್ತು ನೋಂದಾಯಿತ ಪತ್ರ | ಹಕ್ಕುಗಳು ಮತ್ತು ಹೊಣೆಗಾರಿಕೆಗಳು | 1 |
| 20 | ಸ್ಥಿರ ಆಸ್ತಿಯ ಗುತ್ತಿಗೆ | ನೋಂದಣಿ ಆಗಿರುವ ಸ್ವತ್ತುಗಳು | ನೋಂದಾಯಿತ ಪತ್ರ | ಹಕ್ಕುಗಳು ಮತ್ತು ಹೊಣೆಗಾರಿಕೆಗಳು | 15 |
| 21 | ಅಡಮಾನ | ನೋಂದಣಿ ಆಗಿರುವ ಸ್ವತ್ತುಗಳು | ನೋಂದಾಯಿತ ಪತ್ರ | ಹಕ್ಕುಗಳು ಮತ್ತು ಹೊಣೆಗಾರಿಕೆಗಳು | 1 |
| 22 | ಸ್ವಾಧೀನವಿಲ್ಲದ ಅಡಮಾನ | ನೋಂದಣಿ ಆಗಿರುವ ಸ್ವತ್ತುಗಳು | ನೋಂದಾಯಿತ ಪತ್ರ | ಹಕ್ಕುಗಳು ಮತ್ತು ಹೊಣೆಗಾರಿಕೆಗಳು | 1 |
| 23 | ಒಳಗುತ್ತಿಗೆ | ನೋಂದಣಿ ಆಗಿರುವ ಸ್ವತ್ತುಗಳು | ನೋಂದಾಯಿತ ಪತ್ರ | ಹಕ್ಕುಗಳು ಮತ್ತು ಹೊಣೆಗಾರಿಕೆಗಳು | 15 |
| 24 | First Sale of Flat/Apartment (Sale from Promoter to the Purchaser) | ನೋಂದಣಿ ಆಗಿರುವ ಸ್ವತ್ತುಗಳು | ಕ್ರಯ ಪತ್ರ ಅಥವಾ ಜೆ-ಫಾರ್ಮ್ | - | 15 |
| 25 | Sale of Flat/Apartment (By BDA/KHB) | ನೋಂದಣಿ ಆಗಿರುವ ಸ್ವತ್ತುಗಳು | ಕ್ರಯ ಪತ್ರ ಅಥವಾ ಜೆ-ಫಾರ್ಮ್ | - | 15 |
| 26 | Second Sale of Flat/Apartment (Sale from Purchaser of Flat to Other) | ನೋಂದಣಿ ಆಗಿರುವ ಸ್ವತ್ತುಗಳು | ಕ್ರಯ ಪತ್ರ ಅಥವಾ ಜೆ-ಫಾರ್ಮ್ | - | 15 |

## ಕೋಷ್ಟಕ-1

(ನಿಯಮ-9(2) ಮತ್ತು ನಿಯಮ-9(3))

ಮೌಲ್ಯಾಧಾರಿತ ವರ್ಗೀಕರಣವನ್ನು ಆಧರಿಸಿ ವಸತಿ, ವಾಣಿಜ್ಯ, ವಸತಿಯೇತರ, ಕೈಗಾರಿಕೆ, ಇತರೆ ಉದ್ದೇಶದ ಖಾಲಿ ಜಮೀನು ಹಾಗೂ ಖಾಲಿ ನಿವೇಶನಗಳ ಮತ್ತು ಬಳಕೆಗೆ ಒಳಪಟ್ಟು ಕಟ್ಟಡ ನಿರ್ಮಿತ ಭೂ ಪರಿವರ್ತಿತ ಜಮೀನು/ ನಿವೇಶನದ ಮೂಲ ಮೌಲ್ಯದ ಮೇಲೆ ಅಧಿನಿಯಮದ 199ನೇ ಪ್ರಕರಣದ ಅನುಸೂಚಿ-IV ರಂತೆ ವಿಧಿಸಬೇಕಾದ ಶೇಕಡಾವಾರು ತೆರಿಗೆಯ ದರ, -

| [illegible] | [illegible] | [illegible] | [illegible] |
|---|---|---|---|
| [illegible] | | | |
| ಭೂ ಪರಿವರ್ತನೆಯಾದ ಖಾಲಿ ಜಮೀನು / ಖಾಲಿ ನಿವೇಶನ | 0.10% | 0.05% | 0.02% |
| [illegible] | | | |
| ಭೂ ಪರಿವರ್ತನೆ ಯಾದ ಖಾಲಿ ಜಮೀನು / ಖಾಲಿನಿವೇಶನ | 0.09% | 0.05% | 0.02% |
| [illegible] | | | |
| ಭೂ ಪರಿವರ್ತನೆಯಾದ ಖಾಲಿ ಜಮೀನು / ಖಾಲಿ ನಿವೇಶನ | 0.08% | 0.05% | 0.02% |

| [illegible] | | | |
|---|---|---|---|
| ಭೂ ಪರಿವರ್ತನೆಯಾದ ಖಾಲಿ ಜಮೀನು / ಖಾಲಿ ನಿವೇಶನ | 0.07% | 0.05% | 0.02% |
| ಯಾವುದೇ ಉದ್ದೇಶದ ಬಳಕೆಗೆ ಒಳಪಟ್ಟ ಹಾಗೂ ರಚನೆಯನ್ನು ಹೊಂದಿರುವ ಭೂ ಪರಿವರ್ತಿತ ಜಮೀನು /ನಿವೇಶನ | 0.05% | | |

**ವಿವರಣೆ: 1.** ಕರ್ನಾಟಕ ಮುದ್ರಾಂಕ ಅಧಿನಿಯಮ 1957ರ 45ಬಿ ಪ್ರಕರಣದಡಿಯಲ್ಲಿ ಪ್ರಕಟಿಸಲಾದ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿ ದರ ಪಟ್ಟಿಯ ಅನುಬಂಧ-1(1)(1)(ಅ) ಮತ್ತು 1(1)(2) ರಲ್ಲಿ ಅಭಿವೃದ್ಧಿ ಹೊಂದದ ಭೂ ಪರಿವರ್ತನೆಯಾದ ಖಾಲಿ ಜಮೀನು ಹಾಗೂ ಅನುಬಂಧ-2 ರಲ್ಲಿನ ಅಭಿವೃದ್ಧಿ ಹೊಂದಿದ ಭೂ ಪರಿವರ್ತಿತ ಜಮೀನು/ನಿವೇಶನಗಳಿಗೆ ನಿರ್ದಿಷ್ಟಪಡಿಸಿರುವ ಮಾರುಕಟ್ಟೆ ಮೌಲ್ಯದ ಮಾರ್ಗಸೂಚಿ ದರಗಳಂತೆ ಮೌಲ್ಯವನ್ನು ನಿಗಧಿಪಡಿಸುವುದು ಹಾಗೂ ಈ ಮೌಲ್ಯಗಳನ್ನಾಧರಿಸಿ ಮೇಲೆ ತಿಳಿಸಿರುವ ಪ್ರಮಾಣದಲ್ಲಿ ತೆರಿಗೆಯನ್ನು ವಿಧಿಸುವುದು.

**2.** 11 ಬಿ ಆಸ್ತಿಗಳಿಗೂ ಮೇಲಿನ ಕೋಷ್ಟಕದಂತೆ ತೆರಿಗೆ ನಿರ್ಧರಿಸತಕ್ಕದ್ದು.

**3.** ನಿರ್ಮಿತ ಪ್ರದೇಶದ (Built-up Area) ನಿವೇಶನಕ್ಕೆ ಮೇಲ್ಕಂಡ ಕೋಷ್ಟಕದಲ್ಲಿ ತಿಳಿಸಿರುವಂತೆ ಮಾರ್ಗಸೂಚಿ ದರದ ಮಿತಿಯಿಲ್ಲದೆ ಶೇ. 0.05 ತೆರಿಗೆ ದರವನ್ನು ವಿಧಿಸುವುದು.

**ಕೋಷ್ಟಕ-2**
**(ನಿಯಮ-9(4))**

ವಸತಿ, ವಾಣಿಜ್ಯ, ವಸತಿಯೇತರ, ಕೃಷಿ ಆಧಾರಿತ ಉತ್ಪಾದನಾ ಘಟಕದ ಕಟ್ಟಡಗಳ ಮೂಲಮೌಲ್ಯದ ಮೇಲೆ ಅಧಿನಿಯಮದ 199ನೇ ಪ್ರಕರಣದ ಅನುಸೂಚಿ-IV ರಂತೆ ವಿಧಿಸಬೇಕಾದ ಶೇಕಡಾವಾರು ತೆರಿಗೆಯ ದರ, -

| [illegible] | [illegible] | [illegible] | [illegible] | [illegible] |
|---|---|---|---|---|
| ಆರ್.ಸಿ.ಸಿ. ಛಾವಣಿ, ಕಾಂಕ್ರೀಟ್/ಇಟ್ಟಿಗೆ ಗೋಡೆ, ಮಾರ್ಬಲ್, ನೆಲಹಾಸು, ತೇಗದ ಮರದ ಕಿಟಕಿ ಬಾಗಿಲುಗಳು | 0.10% | 0.50% | 0.40% | 0.30% |
| ಆರ್.ಸಿ.ಸಿ. ಛಾವಣಿ, ಇಟ್ಟಿಗೆ ಗೋಡೆ, ಗ್ರಾನೈಟ್ ನೆಲಹಾಸು, ತೇಗದ ಮರದ ಕಿಟಕಿ ಬಾಗಿಲುಗಳು | 0.09% | 0.50% | 0.40% | 0.30% |
| ಆರ್.ಸಿ.ಸಿ. ಛಾವಣಿ, ಕಾಂಕ್ರಿಟ್/ ಇಟ್ಟಿಗೆ ಗೋಡೆ, ವಿಟ್ರಿಫೈಡ್ ನೆಲಹಾಸು, ಹೊನ್ನೆ ಮರದ ಕಿಟಕಿ ಬಾಗಿಲುಗಳು | 0.08% | 0.40% | 0.30% | 0.25% |
| ಆರ್.ಸಿ.ಸಿ. ಛಾವಣಿ, ಕಾಂಕ್ರಿಟ್/ ಇಟ್ಟಿಗೆ ಗೋಡೆ, ಮೊಸಾಯಿಕ್ / ಪಾಲಿಷ್ಡ್ / ಸೆರಾಮಿಕ್/ ಶಹಬಾದ ಕಡಪ / ಬೇತಮ್ ಚೆರ್ಲಿ/ ರೆಡಾಕ್ಸೈಡ್ ನೆಲ ಹಾಸು, ಕಾಡಿನ ಮರ / ಉಕ್ಕಿನ ಕಿಟಕಿ ಬಾಗಿಲುಗಳು. | 0.07% | 0.40% | 0.30% | 0.25% |
| ಮದ್ರಾಸ್ ತಾರಸಿ / ಕಡಪ ತಾರಸಿ / ಮಂಗಳೂರು ಹೆಂಚು, ಇಟ್ಟಿಗೆ/ ಮಣ್ಣಿನ ಗೋಡೆ, ಎ.ಸಿ. ಶೀಟ್, ರೆಡಾಕ್ಸೈಡ್ ನೆಲಹಾಸು, ಕಾಡಿನ ಮರದ ಕಿಟಕಿ ಬಾಗಿಲುಗಳು | 0.06% | 0.30% | 0.20% | 0.20% |

| | | | | |
|---|---|---|---|---|
| ಕರಿ ಹೆಂಚು, ಮಣ್ಣಿನ ಮೇಲ್ಛಾವಣಿ, ಕಡಪ ಸ್ಲಾಬ್, ಇಟ್ಟಿಗೆ/ಮಣ್ಣಿನ ಗೋಡೆ, ಕಾಡಿನ ಮರದ ಕಿಟಕಿ ಬಾಗಿಲುಗಳು | 0.05% | 0.20% | 0.20% | 0.20% |

**ವಿವರಣೆ:**1. ಕರ್ನಾಟಕ ಮುದ್ರಾಂಕ ಅಧಿನಿಯಮ 1957ರ 45 ಬಿ ಪ್ರಕರಣದಡಿಯಲ್ಲಿ ಪ್ರಕಟಿಸಲಾದ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿ ದರ ಪಟ್ಟಿಯ ಅನುಬಂಧ-1(2)ರಲ್ಲಿನ ಪ್ರಸ್ತಾವಿತ ಕಟ್ಟಡಗಳ ತರಹದ ತಳ ಮಹಡಿ/ ನೆಲ ಮಹಡಿ/ ಮೇಲ್ಮಹಡಿ ದರಗಳ ಆಧಾರದ ಮೇಲೆ ಕಟ್ಟಡಗಳ ಮೌಲ್ಯವನ್ನು ನಿಗಧಿಗೊಳಿಸುವುದು ಹಾಗೂ ಅನುಬಂಧ-1(3)ರಲ್ಲಿನ ವಾಹನ ನಿಲ್ದಾಣ ದರಗಳನ್ನು ಅಳವಡಿಸುವುದು. ಈ ಮೌಲ್ಯಗಳನ್ನಾಧರಿಸಿ ಮೇಲೆ ತಿಳಿಸಿರುವ ಪ್ರಮಾಣದಲ್ಲಿ ತೆರಿಗೆಯನ್ನು ವಿಧಿಸುವುದು.

**ಕೋಷ್ಟಕ-3**

(ನಿಯಮ-9(5))

ಅಪಾರ್ಟ್‌ಮೆಂಟ್/ಫ್ಲಾಟ್/ವಿಲ್ಲಾಮೆಂಟ್/ರೋಹೌಸ್/ಟೆನಮೆಂಟ್/ಬಹು ಮಾಲೀಕತ್ವದ ಕಟ್ಟಡಗಳ ಮೂಲ ಮೌಲ್ಯದ ಮೇಲೆ ಅಧಿನಿಯಮದ 199ನೇ ಪ್ರಕರಣದ ಅನುಸೂಚಿ-IVರಂತೆ ವಿಧಿಸಬೇಕಾದ ಶೇಕಡಾವಾರು ತೆರಿಗೆಯ ದರ,

-

| [illegible] | [illegible] | [illegible] | [illegible] |
|---|---|---|---|
| [illegible] | | | |
| ಮಾರ್ಗಸೂಚಿ ಮಾರುಕಟ್ಟೆ ಮೌಲ್ಯ ಚ.ಮೀ. ಗೆ ರೂ.50,001/-ಕ್ಕಿಂತ ಹೆಚ್ಚು | 0.10% | 0.40% | 0.50% |
| [illegible] | | | |
| ಮಾರ್ಗಸೂಚಿ ಮಾರುಕಟ್ಟೆ ಮೌಲ್ಯ ಚ.ಮೀ. ಗೆ ರೂ. 40,001/- ರಿಂದ ರೂ. 50,000/-ವರೆಗೆ | 0.09% | 0.40% | 0.50% |
| [illegible] | | | |
| ಮಾರ್ಗಸೂಚಿ ಮಾರುಕಟ್ಟೆ ಮೌಲ್ಯ ಚ.ಮೀ. ಗೆ ರೂ. 30,001/- ರಿಂದ ರೂ. 40,000/-ವರೆಗೆ | 0.08% | 0.30% | 0.40% |
| [illegible] | | | |
| ಮಾರ್ಗಸೂಚಿ ಮಾರುಕಟ್ಟೆ ಮೌಲ್ಯ ಚ.ಮೀ. ಗೆ ರೂ. 20,001/- ರಿಂದ ರೂ. 30,000/-ವರೆಗೆ | 0.07% | 0.30% | 0.40% |
| [illegible] | | | |
| ಮಾರ್ಗಸೂಚಿ ಮಾರುಕಟ್ಟೆ ಮೌಲ್ಯ ಚ.ಮೀ. ಗೆ ರೂ. 10,001/- ರಿಂದ ರೂ. 20,000/-ವರೆಗೆ | 0.06% | 0.20% | 0.30% |
| [illegible] | | | |
| ಮಾರ್ಗಸೂಚಿ ಮಾರುಕಟ್ಟೆ ಮೌಲ್ಯ ಚ.ಮೀ. ಗೆ ರೂ. 10,000/-ವರೆಗೆ | 0.05% | 0.20% | 0.30% |

**ವಿವರಣೆ:** ಕರ್ನಾಟಕ ಮುದ್ರಾಂಕ ಅಧಿನಿಯಮ 1957ರ 45ಬಿ ಪ್ರಕರಣದಡಿಯಲ್ಲಿ ಪ್ರಕಟಿಸಲಾದ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಯ ದರ ಪಟ್ಟಿಯ ಅನುಬಂಧ-1, ಅನುಬಂಧ-2 ಮತ್ತು ಅನುಬಂಧ-3 ರಲ್ಲಿ ನಿರ್ದಿಷ್ಟಪಡಿಸಿರುವಂತೆ ಸೂಪರ್ ಬಿಲ್ಟಪ್ ಏರಿಯಾ ದರಗಳಿಗೆ ಅನುಗುಣವಾಗಿ ಮೌಲ್ಯವನ್ನು ನಿಗಧಿಗೊಳಿಸುವುದು ಹಾಗೂ ಮಾರ್ಗಸೂಚಿ ದರಪಟ್ಟಿಯ ಅನುಬಂಧ-1(4) ರಲ್ಲಿನ ಮೇಲಂತಸ್ತುಗಳಿಗೆ ಹೆಚ್ಚುವರಿ ದರಗಳು, ಅನುಬಂಧ-1(5) ರಲ್ಲಿನ ವಿಶೇಷ ಸವಲತ್ತು ದರಗಳು ಮತ್ತು ಅನುಬಂಧ-1(3) ರಲ್ಲಿನ ವಾಹನ ನಿಲ್ದಾಣ ದರಗಳನ್ನು ಅಳವಡಿಸುವುದು. ಈ ಮೌಲ್ಯಗಳನ್ನಾಧರಿಸಿ ಮೇಲೆ ತಿಳಿಸಿರುವ ಪ್ರಮಾಣದಲ್ಲಿ ತೆರಿಗೆಯನ್ನು ವಿಧಿಸುವುದು.

## ಕೋಷ್ಟಕ-4

(ನಿಯಮ-9(6))

ಎಲ್ಲಾ ವಿಧದ ಉದ್ಯಮಗಳಿಗೆ ಅಂದರೆ ಕೈಗಾರಿಕೆಗಳು, ಕಾರ್ಖಾನೆಗಳು, ಐಟಿ ಪಾರ್ಕ್‌ಗಳು, ಹಾರ್ಡ್‌ವೇ ಪಾರ್ಕ್, ಟೆಕ್ಸ್‌ಟೈಲ್ ಪಾರ್ಕ್, ಬಯೋಟೆಕ್ ಪಾರ್ಕ್, ಇತರೆ ಕಟ್ಟಡಗಳ ಮೂಲ ಮೌಲ್ಯದ ಮೇಲೆ ಅಧಿನಿಯಮದ 199ನೇ ಪ್ರಕರಣದ ಅನುಸೂಚಿ-IV ರಂತೆ ವಿಧಿಸಬೇಕಾದ ಶೇಕಡಾವಾರು ತೆರಿಗೆಯ ದರ, -

| [illegible] | [illegible] |
|---|---|
| ಅತಿ ಸಣ್ಣ ಕೈಗಾರಿಕೆ/ ಘಟಕಗಳಿಗೆ ಮತ್ತು ಸಣ್ಣ ಕೈಗಾರಿಕೆ/ ಘಟಕಗಳ ಕಟ್ಟಡಗಳಿಗೆ | ಶೇ. 0.40 (ಸ್ವತ್ತಿನ ಮೂಲ ಮೌಲ್ಯದ ಮೇಲೆ) |
| ಮಧ್ಯಮ ಕೈಗಾರಿಕೆ/ ಘಟಕಗಳ ಕಟ್ಟಡಗಳಿಗೆ | ಶೇ. 0.50 (ಸ್ವತ್ತಿನ ಮೂಲ ಮೌಲ್ಯದ ಮೇಲೆ) |
| ಬೃಹತ್ ಕೈಗಾರಿಕೆ/ ಘಟಕಗಳ ಕಟ್ಟಡಗಳಿಗೆ | ಶೇ. 0.60 ಸ್ವತ್ತಿನ ಮೂಲ ಮೌಲ್ಯದ ಮೇಲೆ |
| ಸೋಲಾರ್ ಸ್ಥಾವರ, | ಸ್ವತ್ತಿನ ಮೂಲ ಮೌಲ್ಯದ ಮೇಲೆ ಶೇ. 1. |
| ವಿಂಡ್ ಮಿಲ್‌ಗಳ ತೆರಿಗೆ (ಉತ್ಪಾದನಾ ಸಾಮರ್ಥ್ಯದ ಆಧಾರದಲ್ಲಿ) | ಪ್ರತಿ ವಿಂಡ್ ಮಿಲ್‌ಗೆ ವಾರ್ಷಿಕ 0.50ಲಕ್ಷ |
| ಹೈಡ್ರೋ ಥರ್ಮಲ್, ಹೈಡ್ರೋ ಪವರ್ ಪ್ಲಾಂಟ್ ಇತ್ಯಾದಿಗಳು. | ಶೇ. 0.40 (ಸ್ವತ್ತಿನ ಮೂಲ ಮೌಲ್ಯದ ಮೇಲೆ) |
| ದೂರ ಸಂಪರ್ಕ ಮೂಲ ಸೌಕರ್ಯ ಅಳವಡಿಕೆ ಕಂಬ ಇತ್ಯಾದಿಗಳು. | ವಾರ್ಷಿಕ ರೂ. 100/- |
| ವಿಮಾನ ನಿಲ್ದಾಣದ ರನ್‌ವೇ, ಖಾಸಗಿ ರೈಲ್ವೆ ಲೈನ್, ಖಾಸಗಿ ರಸ್ತೆ ಜಾಗಕ್ಕೆ | ಶೇ. 0.10 (ಸ್ವತ್ತಿನ ಮೂಲ ಮೌಲ್ಯದ ಮೇಲೆ) |

**ವಿವರಣೆ:** ಕೈಗಾರಿಕೆಗಳು, ಕಾರ್ಖಾನೆಗಳು, ಐಟಿ ಪಾರ್ಕ್‌ಗಳು, ಹಾರ್ಡ್‌ವೇ ಪಾರ್ಕ್, ಟೆಕ್ಸ್‌ಟೈಲ್ ಪಾರ್ಕ್, ಬಯೋಟೆಕ್ ಪಾರ್ಕ್, ಇತರೆ ಕಟ್ಟಡಗಳಿಗೆ ಕರ್ನಾಟಕ ಮುದ್ರಾಂಕ ಅಧಿನಿಯಮ 1957ರ 45 ಬಿ ಪ್ರಕರಣದಡಿಯಲ್ಲಿ ಪ್ರಕಟಿಸಲಾದ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿ ದರಪಟ್ಟಿಯ ಅನುಬಂಧ-1(2) ರಲ್ಲಿನ ಪ್ರಸ್ತಾವಿತ ಕಟ್ಟಡಗಳ ತರಹದ ತಳ ಮಹಡಿ/ನೆಲ ಮಹಡಿ/ಮೇಲ್ಮಹಡಿ ದರಗಳು ಮತ್ತು ವಿಮಾನ ನಿಲ್ದಾಣದ ರನ್‌ವೇ, ಖಾಸಗಿ ರೈಲ್ವೆ ಲೈನ್, ಖಾಸಗಿ ರಸ್ತೆ ಜಾಗಕ್ಕೆ ಅನುಬಂಧ-2ರಲ್ಲಿ ನಮೂದಿಸಿರುವ ದರಗಳನ್ನು ಮತ್ತು ಅನುಬಂಧ-1(3) ರಲ್ಲಿನ ವಾಹನ ನಿಲ್ದಾಣ ದರಗಳನ್ನು ಅಳವಡಿಸುವುದು. ಈ ಮೌಲ್ಯಗಳನ್ನಾಧರಿಸಿ ಮೇಲೆ ತಿಳಿಸಿರುವ ಪ್ರಮಾಣದಲ್ಲಿ ತೆರಿಗೆಯನ್ನು ವಿಧಿಸುವುದು.

## ಕೋಷ್ಟಕ-5

(ನಿಯಮ-9(7))

**ವಾರ್ಷಿಕ ಸವಕಳಿಯ ಮೌಲ್ಯ**

ಈ ಕೆಳಕಂಡಂತೆ ಇರುವ ಲೋಕೋಪಯೋಗಿ ಇಲಾಖೆಯ ಸವಕಳಿ ದರವನ್ನು ಅಳವಡಿಸತಕ್ಕದ್ದು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆಯ ಅಧಿಸೂಚನೆ ಸಂಖ್ಯೆ: ಪಿಡಬ್ಲ್ಯೂಡಿ 35 ಆರ್‌ಡಿಎಫ್ 2010 ಬೆಂಗಳೂರು, ದಿನಾಂಕ:24.06.2014.

| [illegible] | [illegible] | [illegible] |
|---|---|---|
| 1 | ತೇಗದ ಮರ ಬಳಸಿ ಸಿಮೆಂಟ್ ಗಾರೆಯಲ್ಲಿ ಇಟ್ಟಿಗೆಯಿಂದ ನಿರ್ಮಿಸಲಾದ ಕಟ್ಟಡಗಳು | 1% |
| 2 | ತೇಗದ ಮರಬಳಸಿ ಬಾಗಶಃ ಸಿಮೆಂಟ್ ಗಾರೆ ಮತ್ತು ಬಾಗಶಃ ಇತರೆ ಗಾರೆಯಲ್ಲಿ ಇಟ್ಟಿಗೆಯಿಂದ ನಿರ್ಮಿಸಲಾದ ಕಟ್ಟಡಗಳು | 1.5% |
| 3 | ಹಳ್ಳಿಗಾಡಿನ ಮರವನ್ನು ಬಳಸಿ ಇಟ್ಟಿಗೆಯಿಂದ ಮಣ್ಣಿನಲ್ಲಿ ನಿರ್ಮಿಸಲಾದ ಕಟ್ಟಡಗಳು | 1.75% |
| 4 | ಮೇಲಿನ 3 ವರ್ಗಗಳಿಗಿಂತ ಕಡಿಮೆ ದರ್ಜೆಯ, ಅಗ್ಗದ ಹಳ್ಳಿಗಾಡಿನ ಮರವನ್ನು ಬಳಸಿ ಇಟ್ಟಿಗೆಯಿಂದ ಮಣ್ಣಿನಲ್ಲಿ ನಿರ್ಮಿಸಿದ, ಪ್ಲಾಸ್ಟರ್ ಮಾಡದ ಗೋಡೆಗಳ ಕಟ್ಟಡಗಳು | 5% |
| 5 | ತೇಗದ ಮರ ಹೊರತುಪಡಿಸಿ ಇತರೆಗಳಿಂದ ಸಿಮೆಂಟ್ ಗಾರೆಯಲ್ಲಿ ಇಟ್ಟಿಗೆಯಿಂದ ನಿರ್ಮಿಸಲಾದ ಕಟ್ಟಡಗಳು | 1.25% |
| 6 | ತೇಗದ ಮರ ಬಳಸಿ ಸಿಮೆಂಟ್ ಗಾರೆಯಲ್ಲಿ ಇಟ್ಟಿಗೆಯಿಂದ ನಿರ್ಮಿಸಲಾದ ಗೋಡೆಗಳ ಆರ್.ಸಿ.ಸಿ. ಕಟ್ಟಡಗಳು | 0.75% |
| 7 | ತೇಗದ ಮರ ಹೊರತುಪಡಿಸಿ ಇತರೆಗಳಿಂದ ಸಿಮೆಂಟ್ ಗಾರೆಯಲ್ಲಿ ಇಟ್ಟಿಗೆಯಿಂದ ನಿರ್ಮಿಸಲಾದ ಗೋಡೆಗಳ ಆರ್.ಸಿ.ಸಿ. ಕಟ್ಟಡಗಳು | 0.60% |

## ಕೋಷ್ಟಕ-6

(ನಿಯಮ-18(ಈ))

**ವಿವಿಧ ಉದ್ದೇಶಗಳಿಗಾಗಿ ಗ್ರಾಮ ಪಂಚಾಯಿತಿ ವತಿಯಿಂದ ನೀಡಲಾಗುವ ನಿರಾಕ್ಷೇಪಣಾ ಪತ್ರಗಳಿಗೆ ವಿಧಿಸಲಾಗುವ ಶುಲ್ಕಗಳು**

| ಪ್ರದೇಶ–1 | ಪ್ರದೇಶ–2 | ಪ್ರದೇಶ–3 | ಪ್ರದೇಶ–4 | ಪ್ರದೇಶ–5 | ಪ್ರದೇಶ–6 |
|---|---|---|---|---|---|
| ಮಾರ್ಗಸೂಚಿ ದರ ಚ.ಮೀ. ಗೆ ರೂ. 15,001/- ಕ್ಕಿಂತ ಹೆಚ್ಚು | ಮಾರ್ಗಸೂಚಿ ದರ ಚ.ಮೀ. ಗೆ ರೂ. 12,001/- ರಿಂದ ರೂ. 15,000/-ವರೆಗೆ | ಮಾರ್ಗಸೂಚಿ ದರ ಚ.ಮೀ. ಗೆ ರೂ. 9,001/- ರಿಂದ ರೂ. 12,000/-ವರೆಗೆ | ಮಾರ್ಗಸೂಚಿ ದರ ಚ.ಮೀ. ಗೆ ರೂ. 6,001/- ರಿಂದ ರೂ. 9,000/-ವರೆಗೆ | ಮಾರ್ಗಸೂಚಿ ದರ ಚ.ಮೀ. ಗೆ ರೂ. 3,001/- ರಿಂದ ರೂ. 6,000/- ವರೆಗೆ | ಮಾರ್ಗಸೂಚಿ ದರ ಚ.ಮೀ. ಗೆ ರೂ. 3,000/- ವರೆಗೆ |
| **ರೂ. 1,750/-** | **ರೂ. 1,500/-** | **ರೂ. 1,250/-** | **ರೂ. 1,000/-** | **ರೂ. 750/-** | **ರೂ. 500/-** |

## ಕೋಷ್ಟಕ- 7

(ನಿಯಮ-18(ಒ))

**ಗ್ಯಾಸ್/ಪೆಟ್ರೋಲಿಯಮ್ ಪೈಪ್‌ಲೈನ್, ಇತರೆ ಪೈಪ್ ಲೈನ್ ಶುಲ್ಕ**

| ಕ್ರ. ಸಂ. | ಕೆಲಸದ ವಿವರ | ಘಟಕ | ಶುಲ್ಕ |
|---|---|---|---|
| 1. | ಆಪ್ಟಿಕಲ್ ಫೈಬರ್ ಕೇಬಲ್, ಇತರೆ | Telecommunication Right of rules, 2024 ರನ್ವಯ ಪುನಸ್ಥಾಪನೆ, ಮೇಲ್ವಿಚಾರಣೆ ಶುಲ್ಕಗಳನ್ನು ವಿಧಿಸತಕ್ಕದ್ದು. | ರೂ.1,000/- (ಪ್ರತಿಕಿ.ಮೀ. ಗೆ) |
| 2. | ಪೆಟ್ರೋಲಿಯಂ ಪೈಪ್ಲೈನ್, ನಿಗಮ, ಜಲಮಂಡಳಿ, ಇತರೆ ಪೈಪ್ಲೈನ್ | ಪ್ರತಿ ಒಂದು ನಾಳಕ್ಕೆ ಪ್ರತಿ ಮೀಟರ್ ಗೆ ಅಳವಡಿಕೆ ಶುಲ್ಕ | ರೂ. 150/- |
| | | ಹಿಂದಿರುಗಿಸಬಹುದಾದ ಭದ್ರತಾ ಠೇವಣಿ ಪ್ರತಿ ನಾಳಕ್ಕೆ ಪ್ರತಿ ಮೀಟರ್‌ಗೆ | ರೂ. 30/- |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| | | | |
|---|---|---|---|
| 3 | ಗ್ಯಾಸ್ಪೈಪ್ಲೈನ್ ಅಳವಡಿಕೆ | ಅಳವಡಿಕೆಗೆ ಆಡಳಿತಾತ್ಮಕ ಹಾಗೂ ಮೇಲ್ವಿಚಾರಣಾ ಶುಲ್ಕ (ಭದ್ರತಾ ಠೇವಣಿ City Gas Distrubuiton policy, Karnataka ರವರು ಕಾಲಕಾಲಕ್ಕೆ ನಿಗದಿಪಡಿಸಿದಂತೆ) | ರೂ. 1,000/- (ಪ್ರತಿ ಕಿ.ಮೀ.ಗೆ) |

## ಕೋಷ್ಟಕ-8

(ನಿಯಮ-18-ಓ))

### ಆಡಳಿತಾತ್ಮಕ ಶುಲ್ಕ

| ಕ್ರ. ಸಂ. | ವಿವರ | ಶುಲ್ಕ |
|---|---|---|
| 01 | ಗ್ರೌಂಡ್ ಬೇಸ್ಡ್ ಟವರ್ (GBT) ಅಥವಾ ರೂಫ್ಟಾಪ್ಟವರ್ (RTT) ಅಥವಾ ರೂಫ್ಟಾಪ್ ಪೋಲ್ (RTP) ಅಥವಾ ಸೆಲ್ಯೂಲ್ ಟವರ್ (CPT) ಅಥವಾ ಗ್ರೌಂಡ್ ಬೇಸ್ಡ್ ಮಾಸ್ಟ್ (GBM) ಸ್ಥಾಪನೆ | ರೂ. 10,000/- |
| 02 | ಸಣ್ಣ ಸೆಲ್‌ಗಳಿಗೆ ಬೀದಿ ಪೀಠೋಪಕರಣ | ರೂ. 150/- (ವಾರ್ಷಿಕ) |
| 03 | ಟೆಲಿಗ್ರಾಫ್ ಲೈನ್‌ಗಳಿಗಾಗಿ ಬೀದಿ ಪೀಠೋಪಕರಣ | ರೂ. 100/- (ವಾರ್ಷಿಕ) |
| 04 | ಅಂಡರ್ ಗ್ರೌಂಡ್ ಅಥವಾ ಓವರ್ ಗ್ರೌಂಡ್ ಕೇಬಲ್ ಅಥವಾ ಪೈಪ್‌ಲೈನ್ ಅಳವಡಿಕೆ | ರೂ. 1,000/-(ಪ್ರತಿ ಕಿ.ಮೀ.ಗೆ) |

## ಕೋಷ್ಟಕ -9

(ನಿಯಮ-18(ಔ))

### ಕಟ್ಟಡ ನಕ್ಷೆ ಅನುಮೋದನೆ ಶುಲ್ಕಗಳು

| ಕ್ರ. ಸಂ. | ಕೆಲಸದ ವಿವರ | ಜಮೀನಿನ ಅಳತೆ | ಶುಲ್ಕ |
|---|---|---|---|
| 1 | ವಸತಿ/ ವಾಣಿಜ್ಯ/ವಸತಿಯೇತರ/ಕೈಗಾರಿಕೆ/ಕೃಷಿ ಆಧಾರಿತ ಉತ್ಪಾದನಾ ಘಟಕದ ಕಟ್ಟಡ ನಕ್ಷೆ ಅನುಮೋದನೆ ಶುಲ್ಕ | 1000 ಚ.ಮೀ. ವಿಸ್ತೀರ್ಣದವರೆಗೆ | ರೂ 2,000/- |
| | | 1000 ಚ.ಮೀ. ಮೇಲ್ಪಟ್ಟ ವಿಸ್ತೀರ್ಣಕ್ಕೆ | ರೂ.2,000/- ಮತ್ತು ರೂ.2/- ರಂತೆ ಪ್ರತಿ ಚ.ಮೀ. ಅಳತೆಗೆ |
| 2 | ವಸತಿ/ವಾಣಿಜ್ಯ/ವಸತಿಯೇತರ/ ಕೈಗಾರಿಕೆ/ ಕೃಷಿ ಆಧಾರಿತ ಉತ್ಪಾದನಾ ಘಟಕದ ಪರಿಷ್ಕೃತ ಕಟ್ಟಡ ನಕ್ಷೆ ಅನುಮೋದನೆ ಶುಲ್ಕ | 1000 ಚ.ಮೀ. ವಿಸ್ತೀರ್ಣದವರೆಗೆ | ರೂ.1,000/- |
| | | 1000 ಚ.ಮೀ. ಮೇಲ್ಪಟ್ಟ ವಿಸ್ತೀರ್ಣಕ್ಕೆ | ರೂ.1,000/- ಮತ್ತು ರೂ. 1.00/- ರಂತೆ ಪ್ರತಿ ಚ.ಮೀ. ಅಳತೆಗೆ |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಡಾ॥ ಎಸ್. ಸೋಮೇಶ್ ಕುಮಾರ್)
ನಿರ್ದೇಶಕರು (ಪಂ.ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH

ಅನುಬಂಧ-2

**ಕರ್ನಾಟಕ ಸರ್ಕಾರ**

ಸಂಖ್ಯೆ:ಗ್ರಾಅಪ/64/ಇ-ಆಡಳಿತ/2021

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:18.10.2021

**ಜಂಟಿ ಸುತ್ತೋಲೆ**

ವಿಷಯ: ಗ್ರಾಮಠಾಣದಲ್ಲಿ ತೆರಿಗೆ ನಿರ್ಧರಣೆ ಪಟ್ಟಿಯಾಗಿರುವ ಮತ್ತು ತೆರಿಗೆ ನಿರ್ಧರಣೆ ಪಟ್ಟಿ ಕೋರಿ ಬರುವ ಆಸ್ತಿಗಳನ್ನು ದಿಶಾಂಕ್ ಆಫ್ ಮೂಲಕ ಅಳತೆ ಮಾಡಿ ನಕ್ಷೆ ತಯಾರಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ/553/ಗ್ರಾಪಂಅ/2012, ದಿನಾಂಕ:28.12.2012
2. ಸರ್ಕಾರದ ಸುತ್ತೋಲೆ ಸಂಖ್ಯೆ:ಕಂ.ಇ/146/ಎ ಎಸ್ ಡಿ/2013, ದಿನಾಂಕ:14.06.2013
3. ಸರ್ಕಾರದ ಜಂಟಿ ಸುತ್ತೋಲೆ ಸಂಖ್ಯೆ: ಆರ್ ಡಿ/430/ಎಲ್ ಜಿ ಪಿ/2013, ದಿನಾಂಕ: 25.08.2014

*****

ನಗರ ಪ್ರದೇಶದ ಮತ್ತು ಗ್ರಾಮಗಳಲ್ಲಿ ಆಸ್ತಿಗಳ ಹಕ್ಕು ದಾಖಲೆಗಳನ್ನು ಅಳತೆ ಮಾಡಿ ನಿರ್ವಹಿಸುವ ಕಾರ್ಯವ್ಯಾಪ್ತಿಯು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಸೆಕ್ಷನ್ 148 ಮತ್ತು ಭೂಕಂದಾಯ ನಿಯಮಾವಳಿ 196 ರ ನಿಯಮ 82 ಗಳ ಮೇರೆಗೆ ಭೂಮಾಪನ ಇಲಾಖೆಯ ವ್ಯಾಪ್ತಿಗೆ ಒಳಪಡುತ್ತದೆ.

ಗ್ರಾಮ ಪಂಚಾಯ್ತಿಯ ದಾಖಲೆಗಳಲ್ಲಿ ತೆರಿಗೆ ನಿರ್ಧರಣೆ ಪಟ್ಟಿಯಲ್ಲಿರುವ ಮತ್ತು ತೆರಿಗೆ ನಿರ್ಧರಣೆ ಪಟ್ಟಿ ಕೋರಿ ಬರುವ ದಾಖಲೆಗಳನ್ನು ಕಾಲೋಚಿತಗೊಳಿಸಲು, ವಹಿವಾಟಿಗೆ ಒಳಪಟ್ಟ ಆಸ್ತಿಯು ಭೂಮಾಪನ ಇಲಾಖೆಯ ಮೂಲಕ ಗ್ರಾಮ ಠಾಣದ ಒಳಗೆ ಬರುತ್ತದೆ ಇಲ್ಲವೆ ಎಂಬುದನ್ನು ಖಾತರಿಪಡಿಸಿಕೊಂಡು ಇ-ಸ್ವತ್ತು ತಂತ್ರಾಂಶದ ಮೂಲಕ ಗ್ರಾಮಠಾಣ ಪ್ರದೇಶದ ಒಳಗಿನ ಆಸ್ತಿಗಳಿಗೆ ನಮೂನೆ-9 ಮತ್ತು 11ಎ ಮತ್ತು ದಿನಾಂಕ:14.06.2013 ರ ಪೂರ್ವದಲ್ಲಿ ಇದ್ದ ಕ್ರಮಬದ್ಧವಲ್ಲದ ಆಸ್ತಿಗಳಿಗೂ ಸಹ ನಮೂನೆ-11 ಬಿ ನೀಡಲು ಉಲ್ಲೇಖ 3 ರ ಜಂಟಿ ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

ಪ್ರಸ್ತುತ ಸಾರ್ವಜನಿಕರ ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ-9 ಮತ್ತು 11ಎ ಮತ್ತು ನಮೂನೆ-11 ಬಿ ಪಡೆಯಲು ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿ ಅರ್ಜಿ ಸಲ್ಲಿಸುತ್ತಿದ್ದಾರೆ. ಗ್ರಾಮ ಪಂಚಾಯತಿ ರವರು ವಹಿವಾಟಿಗೆ ಒಳಪಟ್ಟ ಸದರಿ ಆಸ್ತಿಯು ಗ್ರಾಮ ಠಾಣದ ಒಳಗೆ ಬರುತ್ತದೆ ಇಲ್ಲವೆ ಎಂಬುದನ್ನು ಖಾತರಿಪಡಿಸಿಕೊಳ್ಳಲು, ಮೋಜಿಣಿ ತಂತ್ರಾಂಶಕ್ಕೆ ಆನ್-ಲೈನ್ ಅರ್ಜಿಯನ್ನು ಸಲ್ಲಿಸುತ್ತಾರೆ. ತದನಂತರ ಅರ್ಜಿದಾರರು AJSK (ನಾಡಕಛೇರಿ) ಕೇಂದ್ರಗಳಿಗೆ

ಭೇಟಿ ನೀಡಿ ಅರ್ಜಿ ಶುಲ್ಕ ರೂ. 800/- ಪಾವತಿಸಬೇಕಾಗಿರುತ್ತದೆ, ಅರ್ಜಿದಾರರು ಅರ್ಜಿ ಶುಲ್ಕ ರೂ. 800/- ಪಾವತಿಸಿದ ನಂತರ ಭೂಮಾಪಕರು ಸ್ಥಳಕ್ಕೆ ಭೇಟಿ ನೀಡಿ ಅಳತೆ ಮಾಡಿ ಸದರಿ ಆಸ್ತಿಯು ಗ್ರಾಮಠಾಣದ ಒಳಗೆ ಅಥವಾ ಹೊರಗೆ ಬರುವ ಬಗ್ಗೆ ದಾಖಲೆಗಳೊಂದಿಗೆ ಮಾಹಿತಿಯನ್ನು ಮೋಜಣಿ ತಂತ್ರಾಂಶದ ಮೂಲಕ ಗ್ರಾಮ ಪಂಚಾಯತಿಗೆ ಸಲ್ಲಿಸುತ್ತಾರೆ.

ಸದರಿ ಆಸ್ತಿಯು ಗ್ರಾಮ ಠಾಣದ ವ್ಯಾಪ್ತಿಯ ಒಳಗೆ ಬಂದಲ್ಲಿ ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಸೆಕ್ಷನ್ 95 ರನ್ವಯ ಕೃಷಿಯಿಂದ ಕೃಷಿಯೇತರಕ್ಕೆ ಪರಿವರ್ತನೆ ಮಾಡುವ ಆವಶ್ಯಕತೆಯಿರುವುದಿಲ್ಲ. ಸದರಿ ಆಸ್ತಿಯು ಗ್ರಾಮ ಠಾಣದ ವ್ಯಾಪ್ತಿಯ ಹೊರಗಡೆ ಬಂದಲ್ಲಿ ಕೃಷಿಯಿಂದ ಕೃಷಿಯೇತರಕ್ಕೆ ಪರಿವರ್ತನೆ ಆದೇಶ ಕಡ್ಡಾಯವಾಗಿದೆ.

ಭೂಮಾಪಕರು ಸ್ಥಳಕ್ಕೆ ಭೇಟಿ ನೀಡಿ ಅಳತೆ ಮಾಡಿ ಸದರಿ ಆಸ್ತಿಯು ಗ್ರಾಮಠಾಣದ ಒಳಗೆ ಅಥವಾ ಹೊರಗೆ ಬರುವ ದಾಖಲೆಯ ಆಧಾರದ ಮೇಲೆ ನಮೂನೆ-9 ಮತ್ತು 11ಎ ಅಥವಾ ನಮೂನೆ-11 ಬಿ ಯನ್ನು ಅರ್ಜಿದಾರರಿಗೆ ಒದಗಿಸಲಾಗುತ್ತಿದೆ.

ಸದರಿ ಪ್ರಕ್ರಿಯೆಯಿಂದ ಹಲವಾರು ಆಡಳಿತಾತ್ಮಕ ಸಮಸ್ಯೆಗಳು ಉಂಟಾಗುತ್ತಿವೆ. ಪ್ರಸ್ತುತ ಅನುಸರಿಸುತ್ತಿರುವ ಪ್ರಕ್ರಿಯೆಯಲ್ಲಿ ಇ-ಸ್ವತ್ತು ತಂತ್ರಾಂಶದಲ್ಲಿ ಬರುವ ಪ್ರತಿಯೊಂದು ಅರ್ಜಿಗೆ ಭೂಮಾಪಕರು ಭೌತಿಕವಾಗಿ ಸ್ಥಳಕ್ಕೆ ಭೇಟಿ ನೀಡಿ, ಸಮೀಕ್ಷೆ ಮಾಡಿ ಹಸ್ತಚಾಲಿತ ವರದಿಯನ್ನು ಸಲ್ಲಿಸುತ್ತಿದ್ದಾರೆ. ಹಾಗೂ ಹಲವಾರು ಬಾರಿ ಅರ್ಜಿದಾರರು AJSK (ನಾಡಕಛೇರಿ) ಕೇಂದ್ರಗಳಿಗೆ ಭೇಟಿ ನೀಡಿ ಅರ್ಜಿ ಶುಲ್ಕ ರೂ. 800/- ಪಾವತಿಸಿದ ಅರ್ಜಿಗಳು ಭೂಮಾಪಕರು ಹಂತದಲ್ಲಿ ಬಾಕಿ ಇರುತ್ತವೆ ಹಾಗೂ ಕೆಲವೊಂದು ಸಂದರ್ಭದಲ್ಲಿ ಅರ್ಜಿದಾರರು AJSK (ನಾಡಕಛೇರಿ) ಕೇಂದ್ರಗಳಿಗೆ ಭೇಟಿ ನೀಡಿ ಅರ್ಜಿ ಶುಲ್ಕ ರೂ. 800/- ಪಾವತಿಸಿದರೂ ಭೂಮಾಪನ ಇಲಾಖೆಯು ಮಾನವ ಸಂಪನ್ಮೂಲದ ಕೊರತೆಯಿಂದಾಗಿ ಅರ್ಜಿಗಳು ಭೂಮಾಪಕರು ಹಂತದಲ್ಲಿ ಬಾಕಿ ಇರುತ್ತವೆ. ಇದರಿಂದಾಗಿ ಗ್ರಾಮ ಪಂಚಾಯತಿಗಳಲ್ಲಿ ಇ-ಸ್ವತ್ತು ತಂತ್ರಾಂಶದ ಮೂಲಕ ನಿಗದಿತ ಸಮಯದೊಳಗೆ ನಮೂನೆ-9 ಮತ್ತು 11ಎ ಮತ್ತು ನಮೂನೆ-11 ಬಿ ವಿತರಿಸುವ ಪ್ರಗತಿ ಕುಂಠಿತವಾಗಿದೆ

ಸದರಿ ಪ್ರಕ್ರಿಯೆಯನ್ನು ಸರಳೀಕರಣಗೊಳಿಸಿ, ಸಾರ್ವಜನಿಕರಿಗೆ ನಿಗದಿತ ಸಮಯದೊಳಗೆ ಸೇವೆಯನ್ನು ಒದಗಿಸುವ ಆವಶ್ಯಕತೆಯಿರುತ್ತದೆ. ಆದುದರಿಂದ ಸಾರ್ವಜನಿಕರ ಆಸ್ತಿಯು ಗ್ರಾಮಠಾಣದ ಒಳಗೆ ಅಥವಾ ಹೊರಗೆ ಬರುವ ಬಗ್ಗೆ ಅಳತೆ ಮಾಡಿಸುವ ಪ್ರಕ್ರಿಯೆಯನ್ನು ದಿಶಾಂಕ್ ಆಪ್ ಮೂಲಕ ನಿರ್ವಹಿಸಲು ಕ್ರಮಕೈಗೊಳ್ಳಲು ಸರ್ಕಾರವು ತೀರ್ಮಾನಿಸಿದೆ.

ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರದವರು ಅಭಿವೃದ್ಧಿ ಪಡಿಸಿರುವ ದಿಶಾಂಕ್ ಆಪ್ ಮೂಲಕ ಡಿಜಿಟಲೀಕರಣಗೊಳಿಸಿದ ಮತ್ತು ಜಿಯೋ ಉಲ್ಲೇಖಿತ ನಕ್ಷೆಗಳನ್ನು ಬಳಸಲು ಉಪಯುಕ್ತವಾಗಿದೆ. ದಿಶಾಂಕ್ ಆಪ್ ಮೂಲಕ ಗ್ರಾಮ ಪಂಚಾಯತಿಯ ಅಧಿಕಾರಿಗಳು ಆಸ್ತಿಗಳು ಗ್ರಾಮಠಾಣದ ಒಳಗೆ ಅಥವಾ ಹೊರಗೆ ಬರುವ ವಿವರಗಳು ಲಭ್ಯವಾಗುವುದು. ಮೊಬೈಲ್ ಫೋನ್ ಗಳ ಜಿಪಿಎಸ್‌ನಲ್ಲಿ ಅಂತರ್ಗತ ರೆಸಲ್ಯೂಷನ್ ದೋಷ ಇರುವುದರಿಂದ, ಗ್ರಾಮ ಠಾಣ ಗಡಿಯಲ್ಲಿ ಬರುವ ಮತ್ತು ಗ್ರಾಮ ಠಾಣ ಗಡಿಯ ಬಫರ್ ವಲಯ ಸುತ್ತಲೂ ಬರುವ ಆಸ್ತಿಗಳನ್ನು

ಭೂಮಾಪಕರು ಭೌತಿಕವಾಗಿ ಸ್ಥಳಕ್ಕೆ ಭೇಟಿ ನೀಡಿ, ಸಮೀಕ್ಷೆ ಮಾಡಲಾಗುವುದು. ಸದರಿ ಪ್ರಕ್ರಿಯೆಯನ್ನು ಅನುಸರಿಸಿದಲ್ಲಿ ಶೇ.80% ಗಿಂತ ಹೆಚ್ಚು ಆಸ್ತಿಗಳಿಗೆ ಭೂಮಾಪಕರು ಭೌತಿಕವಾಗಿ ಸಮೀಕ್ಷೆ ಮಾಡದೇ, ಗ್ರಾಮಠಾಣದ ಒಳಗೆ ಅಥವಾ ಹೊರಗೆ ಬರುವ ಮಾಹಿತಿಯನ್ನು ಪಡೆಯಬಹುದಾಗಿದೆ.

ಈ ಕೆಳಗೆ ವಿವರಿಸಿರುವ ಮಾರ್ಗಸೂಚಿಯನ್ವಯ ಗ್ರಾಮ ಪಂಚಾಯತಿಗಳಲ್ಲಿ ಅರ್ಜಿ ಸಲ್ಲಿಸಿ ದಾಖಲೆಗಳನ್ನು ಪಡೆಯುವುದು.

1. ಆಸ್ತಿಗಳು ಗ್ರಾಮಠಾಣ ವ್ಯಾಪ್ತಿಯೊಳಗೆ ಇದೆಯೇ ಎಂಬುದರ ಬಗ್ಗೆ ದಿಶಾಂಕ್ ಆಪ್‌ನ ಮೂಲಕ ಪರಿಶೀಲಿಸಲಾಗುವುದು.
2. ಸಾರ್ವಜನಿಕರು ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ-9 ಮತ್ತು 11ಎ ಮತ್ತು ನಮೂನೆ-11 ಬಿ ಪಡೆಯಲು ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿ ಅರ್ಜಿ ಸಲ್ಲಿಸಿ, ಒಳಪಟ್ಟ ಆಸ್ತಿಯು ಗ್ರಾಮ ಠಾಣದ ಒಳಗೆ ಬರುತ್ತದೆ ಇಲ್ಲವೆ ಎಂಬುದನ್ನು ಖಾತರಿಪಡಿಸಿಕೊಳ್ಳಲು ಅರ್ಜಿಯನ್ನು ನಿಗಧಿತ ಅರ್ಜಿ ಶುಲ್ಕದೊಂದಿಗೆ ಗ್ರಾಮ ಪಂಚಾಯತಿಯಲ್ಲೀ ಸಲ್ಲಿಸಬೇಕು.
3. ಅರ್ಜಿದಾರರ ಹೆಸರು, ಫೋಟೋ ಐಡಿ ಸಂ. ಮತ್ತು ಫೋಟೋ ಐಡಿ ವಿವರ, ಅರ್ಜಿದಾರರ ವಿಳಾಸ, ಆಸ್ತಿಯ ಚಕ್ಕುಬಂದಿ, ಆಸ್ತಿಯ ವಿಸ್ತೀರ್ಣ ಮತ್ತು ನೋಟೀಸು ನೀಡಬೇಕಾದವರುಗಳ ವಿವರವನ್ನು ಅರ್ಜಿದಾರರಿಂದ ಕೇಳಿ ಗ್ರಾಮ ಪಂಚಾಯತಿರವರು ಇ-ಸ್ವತ್ತು ತಂತ್ರಾಂಶದಲ್ಲಿ ದಾಖಲಿಸಿಕೊಳ್ಳುವುದು.
4. ಇ-ಸ್ವತ್ತು ತಂತ್ರಾಂಶದಲ್ಲಿ ದಾಖಲಿಸಿದ ವಿವರಗಳನ್ನು ಅರ್ಜಿದಾರರಿಗೆ ಓದಿ ಹೇಳಬೇಕು ಮತ್ತು ಅರ್ಜಿದಾರರು ಯಾವುದೇ ಬದಲಾವಣೆಗಳನ್ನು ಸೂಚಿಸಿದರೆ ಅವುಗಳನ್ನು ದಾಖಲಿಸುವುದು ಹಾಗೂ ಅರ್ಜಿದಾರರಿಂದ ಗ್ರಾಮ ಪಂಚಾಯತಿಗಳಲ್ಲೇ ನಿಗಧಿತ ಅರ್ಜಿ ಶುಲ್ಕವನ್ನು ಪಡೆಯುವುದು.

5. ಈ ಪ್ರಕ್ರಿಯೆಯಲ್ಲಿ ಅನುಸರಿಸಲು ಗ್ರಾಮ ಪಂಚಾಯತಿಯಲ್ಲಿ ಮೇಕರ್ ಮತ್ತು ಚೆಕರ್ ಪರಿಕಲ್ಪನೆಯನ್ನು ಅಳವಡಿಸಲಾಗಿದೆ. ಗ್ರಾಮ ಪಂಚಾಯತಿಯ ದ್ವಿತೀಯ ದರ್ಜೆ ಲೆಕ್ಕ ಸಹಾಯಕರನ್ನು ಅಥವಾ ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಇಲ್ಲದೇ ಇರುವ ಗ್ರಾಮ ಪಂಚಾಯತಿಗಳಲ್ಲಿ ಗ್ರಾಮ ಪಂಚಾಯತಿಯ ಕಾರ್ಯದರ್ಶಿಗಳನ್ನು ಮೇಕರ್ ಆಗಿ ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಚೆಕರ್ ಆಗಿ ಕಾರ್ಯನಿರ್ವಹಿಸುವುದು.
6. ಅರ್ಜಿದಾರರಿಂದ ಪಡೆದ ಆಸ್ತಿಯ ವಿಸ್ತೀರ್ಣ ಮತ್ತು ಚಕ್ಕುಬಂದಿಯ ಆಧಾರದ ಮೇಲೆ ಗ್ರಾಮ ಪಂಚಾಯತಿಯ ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಭೌತಿಕವಾಗಿ ಸ್ಥಳಕ್ಕೆ ಭೇಟಿ ನೀಡಿ ದಿಶಾಂಕ್ ಆಪ್ ಮೂಲಕ, ಆಸ್ತಿ/ಸ್ವತ್ತಿನ ಪ್ರತಿಯೊಂದು ಮೂಲೆಯ ಜಿ.ಪಿ.ಎಸ್ ಅನ್ನು ಮತ್ತು ಸದರಿ ಆಸ್ತಿ/ಸ್ವತ್ತಿನ ಛಾಯಾಚಿತ್ರವನ್ನು ಸೆರೆಹಿಡಿಯುವುದು. ಗ್ರಾಮ ಪಂಚಾಯತಿಯ ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಸೆರೆಹಿಡಿದ ಆಸ್ತಿ/ಸ್ವತ್ತಿನ ಪ್ರತಿಯೊಂದು ಮೂಲೆಯ ಜಿ.ಪಿ.ಎಸ್ ಅನ್ನು ಮತ್ತು ಛಾಯಾಚಿತ್ರವನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ದಿಶಾಂಕ್ ಆಪ್ ಲಾಗಿನ್ ಮೂಲಕ ಪರಿಶೀಲಿಸಿ,

ದೃಢೀಕರಿಸುವುದು. ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಭೌತಿಕವಾಗಿ ಸ್ಥಳಕ್ಕೆ ಭೇಟಿ ನೀಡುವ ಅವಶ್ಯಕತೆಯಿರುವುದಿಲ್ಲ.

7. ಗ್ರಾಮ ಪಂಚಾಯತಿಯ ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಸೆರೆಹಿಡಿದ ಆಸ್ತಿ/ಸ್ವತ್ತಿನ ಜಿ.ಪಿ.ಎಸ್ ಆಧಾರದ ಮೇಲೆ ಸದರಿ ಆಸ್ತಿಯು ಗ್ರಾಮ ಠಾಣದ ಒಳಗೆ ಅಥವಾ ಗ್ರಾಮ ಠಾಣದ ಹೊರಗೆ ಅಥವಾ ಗ್ರಾಮ ಠಾಣದ ಗಡಿಯಲ್ಲಿ ಬರುವುದೆಂಬ ಮಾಹಿತಿಯು ದಿಶಾಂಕ್ ಆಪ್ ನಲ್ಲಿ ಲಭ್ಯವಾಗುವುದು.
8. ಒಂದು ವೇಳೆ ಆಸ್ತಿ/ಸ್ವತ್ತು ಗ್ರಾಮ ಠಾಣದ ಒಳಗೆ ಅಥವಾ ಗ್ರಾಮ ಠಾಣದ ಹೊರಗೆ ಬಂದಲ್ಲಿ, ದಿಶಾಂಕ್ ಆಪ್ ನಲ್ಲೀ ವರದಿ ಸೃಜನೆಯಾಗಿ ಇ-ಸ್ವತ್ತು ತಂತ್ರಾಂಶಕ್ಕೆ ಕಳುಹಿಸಲಾಗುವುದು.
9. ಒಂದು ವೇಳೆ ಆಸ್ತಿ/ಸ್ವತ್ತು ಗ್ರಾಮ ಠಾಣದ ಗಡಿಯಲ್ಲಿ ಅಥವಾ ಗ್ರಾಮ ಠಾಣ ಗಡಿಯ ಬಫರ್ ವಲಯ ಅಂದರೇ ಗ್ರಾಮ ಠಾಣ ಗಡಿಯಿಂದ 20 ಮೀಟರ್ ಅಂತರದೊಳಗೆ ಬಂದಲ್ಲಿ, ಅಂತಹ ಅರ್ಜಿಯನ್ನು ಸ್ವಯಂಕೃತವಾಗಿ ಭೂಮಾಪನ ಇಲಾಖೆಯ ಭೂಮಾಪಕರ ದಿಶಾಂಕ್ ಆಪ್ ಲಾಗಿನ್‌ಗೆ ಪರಿಶೀಲನೆ ಹಾಗೂ ದೃಢೀಕರಣಕ್ಕೆ ವರ್ಗಾವಣೆ ಮಾಡಲಾಗುವುದು. ಭೂಮಾಪಕರು ಅಂತಹ ಅರ್ಜಿಗಳ ಸಂಬಂಧಿತ ಆಸ್ತಿ/ಸ್ವತ್ತುಗಳನ್ನು ಭೌತಿಕವಾಗಿ ಸ್ಥಳಕ್ಕೆ ಭೇಟಿ ನೀಡಿ ಸಮೀಕ್ಷೆ ಮಾಡಿ, ದಿಶಾಂಕ್ ಆಪ್ ಮೂಲಕವೇ ವರದಿಯನ್ನು ಗ್ರಾಮ ಪಂಚಾಯತಿಗಳಿಗೆ ಸಲ್ಲಿಸುವುದು.
10. ಗ್ರಾಮ ಪಂಚಾಯತಿಯ ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ದಿಶಾಂಕ್ ಆಪ್ ಬಳಸಿ, ಆಸ್ತಿ/ಸ್ವತ್ತು ಗಳನ್ನು ಅಳತೆ ಮಾಡುವ ಸಂದರ್ಭದಲ್ಲಿ ಅರ್ಜಿದಾರರಿಂದ ಪಡೆದ ಆಸ್ತಿಯ ವಿಸ್ತೀರ್ಣ ಮತ್ತು ಚಕ್ಕುಬಂದಿಯಲ್ಲಿ ವ್ಯತ್ಯಾಸ ಬಂದಲ್ಲಿ, ದಿಶಾಂಕ್ ಆಪ್ ಮೂಲಕ ವರದಿಯನ್ನು ಸೃಜಿಸಿ, ಅರ್ಜಿದಾರರ ಅವಗಾಹನೆಗೆ ಸಲ್ಲಿಸಿ. ದಿಶಾಂಕ್ ಆಪ್ ನಲ್ಲಿ ನಮೂದಿಸಿದ ಆಸ್ತಿಯ ವಿಸ್ತೀರ್ಣ ಮತ್ತು ಚಕ್ಕುಬಂದಿಯನ್ನು ಸರಿಯಾಗಿದೆ ಎಂದು ಒಪ್ಪಿದಲ್ಲಿ, ಸದರಿ ಆಸ್ತಿಯು ಗ್ರಾಮ ಠಾಣದ ಒಳಗೆ ಅಥವಾ ಗ್ರಾಮ ಠಾಣದ ಹೊರಗೆ ಬರುವುದೆಂಬ ಮಾಹಿತಿಯನ್ನು ದಿಶಾಂಕ್ ಆಪ್ ನಲ್ಲಿ ಸೆರೆಹಿಡಿಯುವುದು.
11. ಒಂದು ವೇಳೆ ದಿಶಾಂಕ್ ಆಪ್ ನಲ್ಲಿ ನಮೂದಿಸಿದ ಆಸ್ತಿಯ ವಿಸ್ತೀರ್ಣ ಮತ್ತು ಚಕ್ಕುಬಂದಿಯನ್ನು ಅರ್ಜಿದಾರರು ಒಪ್ಪದೇ ಇದ್ದಲ್ಲಿ, ಇ-ಸ್ವತ್ತು ತಂತ್ರಾಂಶದ ಮೂಲಕ ಸ್ವೀಕೃತಿಯನ್ನು ಸೃಷ್ಟಿಸಿ ಅಂತಹ ಅರ್ಜಿಗಳನ್ನು ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ತಿರಸ್ಕರಿಸಿ, ಅರ್ಜಿದಾರರಿಗೆ ಭೂಮಾಪನ ಇಲಾಖೆಯಿಂದ ಆಸ್ತಿಯ ಸಮೀಕ್ಷೆ ಮಾಡಿಸಿ, ಸರಿಯಾದ ದಾಖಲೆಗಳೊಂದಿಗೆ ಮತ್ತೊಮ್ಮೆ ಅರ್ಜಿ ಸಲ್ಲಿಸಲು ತಿಳಿಸುವುದು.
12. ಗ್ರಾಮ ಠಾಣದ ಗಡಿಯಲ್ಲಿ ಅಥವಾ ಗ್ರಾಮ ಠಾಣ ಗಡಿಯ ಬಫರ್ ವಲಯ ಅಂದರೇ ಗ್ರಾಮ ಠಾಣ ಗಡಿಯಿಂದ 20 ಮೀಟರ್ ಅಂತರದೊಳಗೆ ಬರುವ ಆಸ್ತಿ/ಸ್ವತ್ತು ಗಳಿಗೆ ಭೂಮಾಪಕರು ಸಹ ಭೌತಿಕವಾಗಿ ಸ್ಥಳಕ್ಕೆ ಭೇಟಿ ನೀಡಿ ದಿಶಾಂಕ್ ಆಪ್ ಮೂಲಕ, ಆಸ್ತಿ/ಸ್ವತ್ತಿನ ಪ್ರತಿಯೊಂದು ಮೂಲೆಯ ಜಿ.ಪಿ.ಎಸ್ ಅನ್ನು ಮತ್ತು ಸದರಿ ಆಸ್ತಿ/ಸ್ವತ್ತಿನ ಛಾಯಾಚಿತ್ರವನ್ನು ಸೆರೆಹಿಡಿಯುವುದು. ಹಾಗೂ ಸದರಿ ಆಸ್ತಿ/ಸ್ವತ್ತು ಗ್ರಾಮ ಠಾಣದ ಒಳಗೆ ಅಥವಾ ಗ್ರಾಮ ಠಾಣದ ಹೊರಗ ಇದೆಯೇ ಎಂಬುವುದರ ಬಗ್ಗೆ ವರದಿಯನ್ನು ದಿಶಾಂಕ್ ಆಪ್ ನೀಡುವುದು, ಭೂಮಾಪಕರು ಗಳ ವರದಿಯನ್ವಯ ದಿಶಾಂಕ್ ಆಪ್ ನಿಂದ ಇ-ಸ್ವತ್ತು ತಂತ್ರಾಂಶಕ್ಕೆ ಮಾಹಿತಿಯು ಸಲ್ಲಿಕೆಯಾಗುವುದು.

13. ಗ್ರಾಮ ಪಂಚಾಯತಿಗಳಿಂದ ಸಮೀಕ್ಷೆ ಮಾಡಿ ದೃಢೀಕರಿಸಿದ ಶೇ.10% ರಷ್ಟು ಆಸ್ತಿಗಳನ್ನು ಸಂಬಂಧಪಟ್ಟ ಭೂಮಾಪಕರು ಅಥವಾ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಪರಿಶೀಲಿಸಲಾಗುವುದು.

14. ಅರ್ಜಿದಾರರಿಂದ ಅರ್ಜಿ ಶುಲ್ಕ ರೂ. 200/- ಗ್ರಾಮ ಪಂಚಾಯತಿಗಳಲ್ಲೇ ಸ್ವೀಕರಿಸುವುದು.

15. ಕ್ರಮ ಸಂಖ್ಯೆ 9 ರಲ್ಲಿ ವಿವರಿಸಿದಂತೆ, ಆಸ್ತಿಯ/ಸ್ವತ್ತಿನ ಗಡಿಯೂ ಗ್ರಾಮಠಾಣ ವ್ಯಾಪ್ತಿಯ ಗಡಿಯಲ್ಲಿರುವ ಭೂಮಾಪನ ಇಲಾಖೆಯ ಸರ್ವೆಯರ್ ಗಳ ದಿಶಾಂಕ್ ಆಫ್ ಲಾಗಿನ್ ಗೆ ಬರುವ ಅರ್ಜಿಗಳ ಸಂಬಂಧಿತ ಶುಲ್ಕವನ್ನು ಗ್ರಾಮ ಪಂಚಾಯತಿಗಳಿಂದ ಭೂಮಾಪನ ಇಲಾಖೆಗೆ ವರ್ಗಾಯಿಸಲಾಗುವುದು.

16. ಕ್ರಮ ಸಂಖ್ಯೆ 11 ರಲ್ಲಿ ವಿವರಿಸಿದಂತೆ, ಆಸ್ತಿ/ಸ್ವತ್ತು ಗಳನ್ನು ಅಳತೆ ಮಾಡುವ ಸಂದರ್ಭದಲ್ಲಿ ಅರ್ಜಿದಾರರಿಂದ ಪಡೆದ ಆಸ್ತಿಯ ಅಳತೆ ಮತ್ತು ಚಕ್ಕುಬಂದಿಯಲ್ಲಿ ವ್ಯತ್ಯಾಸ ಬಂದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಿ ಅರ್ಜಿ ಶುಲ್ಕವನ್ನು ಗ್ರಾಮ ಪಂಚಾಯತಿಗಳಿಂದ ಅರ್ಜಿದಾರರಿಗೆ ಹಿಂತಿರುಗಿಸುವುದು.

([illegible] ಅತೀಕ್)

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

(ತುಷಾರ್ ಗಿರಿನಾಥ್)

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು

ಕಂದಾಯ ಇಲಾಖೆ

ಇವರಿಗೆ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
2. ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು.
3. ಆಯುಕ್ತರು, ಭೂಮಾಪನ ಮತ್ತು ಭೂದಾಖಲೆಗಳ ಇಲಾಖೆ.
4. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
5. ನಿರ್ದೇಶಕರು, ಪಂಚಾಯತ್ ರಾಜ್-1, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
6. ಎಲ್ಲಾ ಪ್ರಾದೇಶಿಕ ಆಯುಕ್ತರು
7. ಎಲ್ಲಾ ಉಪ ವಿಭಾಗಾಧಿಕಾರಿಗಳು ಮತ್ತು ಎಲ್ಲಾ ತಹಶೀಲ್ದಾರ್ ಗಳಿಗೆ ಜಿಲ್ಲಾಧಿಕಾರಿಗಳ ಮುಖಾಂತರ
8. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ.
9. ಎಲ್ಲಾ ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

**ಕಾರ್ಯವಿಧಾನ**

ಗ್ರಾಮ ಪಂಚಾಯತಿಗಳಲ್ಲಿ ಇ-ಸ್ವತ್ತು ತಂತ್ರಾಂಶದ ಮೂಲಕ ಸಾರ್ವಜನಿಕರಿಂದ ಅರ್ಜಿಗಳನ್ನು ಸ್ವೀಕರಿಸುವುದು ಹಾಗೂ ಅರ್ಜಿದಾರರಿಂದ ಅರ್ಜಿ ಶುಲ್ಕ ರೂ. 200/- ಗ್ರಾಮ ಪಂಚಾಯತಿಗಳಲ್ಲೇ ಸ್ವೀಕರಿಸುವುದು

↓

ಇ-ಸ್ವತ್ತು ತಂತ್ರಾಂಶದ ಮೂಲಕ ಸ್ವೀಕರಿಸಿದ ಅರ್ಜಿಗಳನ್ನು ಗ್ರಾಮ ಪಂಚಾಯತಿಯ ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಗಳ ದಿಶಾಂಕ್ ಆಪ್ ಲಾಗಿನ್ ಗೆ ವರ್ಗಾಯಿಸಲಾಗುವುದು

↓

ಗ್ರಾಮ ಪಂಚಾಯತಿಯ ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಭೌತಿಕವಾಗಿ ಸ್ಥಳಕ್ಕೆ ಭೇಟಿ ನೀಡಿ ದಿಶಾಂಕ್ ಆಪ್ ಮೂಲಕ, ಆಸ್ತಿ/ಸ್ವತ್ತಿನ ಪ್ರತಿಯೊಂದು ಮೂಲೆಯ ಜಿ.ಪಿ.ಎಸ್ ಅನ್ನು ಮತ್ತು ಸದರಿ ಆಸ್ತಿ/ಸ್ವತ್ತಿನ ಛಾಯಾಚಿತ್ರವನ್ನು ಸೆರೆಹಿಡಿಯುವುದು.

↓

ಗ್ರಾಮ ಪಂಚಾಯತಿಯ ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಸೆರೆಹಿಡಿದ ಆಸ್ತಿ/ಸ್ವತ್ತಿನ ಪ್ರತಿಯೊಂದು ಮೂಲೆಯ ಜಿ.ಪಿ.ಎಸ್ ಅನ್ನು ಮತ್ತು ಛಾಯಾಚಿತ್ರವನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ದೃಢೀಕರಿಸುವುದು.

↓

ಗ್ರಾಮ ಪಂಚಾಯತಿಯ ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಸೆರೆಹಿಡಿದ ಆಸ್ತಿ/ಸ್ವತ್ತಿನ ಜಿ.ಪಿ.ಎಸ್ ಆಧಾರದ ಮೇಲೆ ಸದರಿ ಆಸ್ತಿಯು ಗ್ರಾಮ ಠಾಣದ ಒಳಗೆ ಅಥವಾ ಗ್ರಾಮ ಠಾಣದ ಹೊರಗೆ ಅಥವಾ ಗ್ರಾಮ ಠಾಣದ ಗಡಿಯಲ್ಲಿ ಬರುವುದೆಂಬ ಮಾಹಿತಿಯು ಲಭ್ಯವಾಗುವುದು.

↓

ಒಂದು ವೇಳೆ ಆಸ್ತಿ/ಸ್ವತ್ತು ಗ್ರಾಮ ಠಾಣದ ಒಳಗೆ ಅಥವಾ ಗ್ರಾಮ ಠಾಣದ ಹೊರಗೆ ಬಂದಲ್ಲಿ, ದಿಶಾಂಕ್ ಆಪ್ ನಲ್ಲೇ ವರದಿ ಸೃಜನೆಯಾಗಿ ಇ-ಸ್ವತ್ತು ತಂತ್ರಾಂಶಕ್ಕೆ ಕಳುಹಿಸಲಾಗುವುದು

↓

ಒಂದು ವೇಳೆ ಆಸ್ತಿ/ಸ್ವತ್ತು ಗ್ರಾಮ ಠಾಣದ ಗಡಿಯಲ್ಲಿ ಅಥವಾ ಗ್ರಾಮ ಠಾಣ ಗಡಿಯ ಬಫರ್ ವಲಯ ಅಂದರೆ ಗ್ರಾಮ ಠಾಣ ಗಡಿಯಿಂದ 20 ಮೀಟರ್ ಅಂತರದೊಳಗೆ ಬಂದಲ್ಲಿ, ಅಂತಹ ಅರ್ಜಿಯನ್ನು ಸ್ವಯಂಕೃತವಾಗಿ ಭೂಮಾಪನ ಇಲಾಖೆಯ ಭೂಮಾಪಕರ ದಿಶಾಂಕ್ ಆಪ್ ಲಾಗಿನ್‌ಗೆ ಪರಿಶೀಲನೆ ಹಾಗೂ ದೃಢೀಕರಣಕ್ಕೆ ವರ್ಗಾವಣೆ ಮಾಡಲಾಗುವುದು. ಭೂಮಾಪಕರು ಅಂತಹ ಅರ್ಜಿಗಳ ಸಂಬಂಧಿತ ಆಸ್ತಿ/ಸ್ವತ್ತುಗಳನ್ನು ಭೌತಿಕವಾಗಿ ಸ್ಥಳಕ್ಕೆ ಭೇಟಿ ನೀಡಿ ಸಮೀಕ್ಷೆ ಮಾಡಿ, ದಿಶಾಂಕ್ ಆಪ್ ಮೂಲಕವೇ ವರದಿಯನ್ನು ಗ್ರಾಮ ಪಂಚಾಯತಿಗಳಿಗೆ ಸಲ್ಲಿಸುವುದು.

↓

ಗ್ರಾಮ ಪಂಚಾಯತಿಯ ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ದಿಶಾಂಕ್ ಆಪ್ ಬಳಸಿ, ಆಸ್ತಿ/ಸ್ವತ್ತುಗಳನ್ನು ಅಳತೆ ಮಾಡುವ ಸಂದರ್ಭದಲ್ಲಿ ಅರ್ಜಿದಾರರಿಂದ ಪಡೆದ ಆಸ್ತಿಯ ವಿಸ್ತೀರ್ಣ ಮತ್ತು ಚಕ್ಕುಬಂದಿಯಲ್ಲಿ ವ್ಯತ್ಯಾಸ ಬಂದಲ್ಲಿ, ದಿಶಾಂಕ್ ಆಪ್ ಮೂಲಕ ವರದಿಯನ್ನು ಸೃಜಿಸಿ, ಅರ್ಜಿದಾರರ ಅವಗಾಹನೆಗೆ ಸಲ್ಲಿಸಿ, ದಿಶಾಂಕ್ ಆಪ್ ನಲ್ಲಿ ನಮೂದಿಸಿದ ಆಸ್ತಿಯ ವಿಸ್ತೀರ್ಣ ಮತ್ತು ಚಕ್ಕುಬಂದಿಯನ್ನು ಸರಿಯಾಗಿದೆ ಎಂದು ಒಪ್ಪಿದಲ್ಲಿ, ಸದರಿ ಆಸ್ತಿಯು ಗ್ರಾಮ ಠಾಣದ ಒಳಗೆ ಅಥವಾ ಗ್ರಾಮ ಠಾಣದ ಹೊರಗೆ ಬರುವುದೆಂಬ ಮಾಹಿತಿಯನ್ನು ದಿಶಾಂಕ್ ಆಪ್ ನಲ್ಲಿ ಸೆರೆಹಿಡಿಯುವುದು. ಒಂದು ವೇಳೆ ದಿಶಾಂಕ್ ಆಪ್ ನಲ್ಲಿ ನಮೂದಿಸಿದ ಆಸ್ತಿಯ ವಿಸ್ತೀರ್ಣ ಮತ್ತು ಚಕ್ಕುಬಂದಿಯನ್ನು ಅರ್ಜಿದಾರರು ಒಪ್ಪದೇ ಇದ್ದಲ್ಲಿ, ಇ-ಸ್ವತ್ತು ತಂತ್ರಾಂಶದ ಮೂಲಕ ಸ್ವೀಕೃತಿಯನ್ನು ಸೃಷ್ಟಿಸಿ ಅಂತಹ ಅರ್ಜಿಗಳನ್ನು ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ತಿರಸ್ಕರಿಸಿ, ಅರ್ಜಿದಾರರಿಗೆ ಭೂಮಾಪನ ಇಲಾಖೆಯಿಂದ ಆಸ್ತಿಯ ಸಮೀಕ್ಷೆ ಮಾಡಿಸಿ, ಸರಿಯಾದ ದಾಖಲೆಗಳೊಂದಿಗೆ ಮತ್ತೊಮ್ಮೆ ಅರ್ಜಿ ಸಲ್ಲಿಸಲು ತಿಳಿಸುವುದು

ಗ್ರಾಮ ಠಾಣದ ಗಡಿಯಲ್ಲಿ ಅಥವಾ ಗ್ರಾಮ ಠಾಣ ಗಡಿಯ ಬಫರ್ ವಲಯ ಅಂದರೆ ಗ್ರಾಮ ಠಾಣ ಗಡಿಯಿಂದ 20 ಮೀಟರ್ ಅಂತರದೊಳಗೆ ಬರುವ ಆಸ್ತಿ/ಸ್ವತ್ತುಗಳಿಗೆ ಭೂಮಾಪಕರು ಸಹ ಭೌತಿಕವಾಗಿ ಸ್ಥಳಕ್ಕೆ ಭೇಟಿ ನೀಡಿ ದಿಶಾಂಕ್ ಆಪ್ ಮೂಲಕ, ಆಸ್ತಿ/ಸ್ವತ್ತಿನ ಪ್ರತಿಯೊಂದು ಮೂಲೆಯ ಜಿ.ಪಿ.ಎಸ್ ಅನ್ನು ಮತ್ತು ಸದರಿ ಆಸ್ತಿ/ಸ್ವತ್ತಿನ ಛಾಯಾಚಿತ್ರವನ್ನು ಸೆರೆಹಿಡಿಯುವುದು. ಹಾಗೂ ಸದರಿ ಆಸ್ತಿ/ಸ್ವತ್ತು ಗ್ರಾಮ ಠಾಣದ ಒಳಗೆ ಅಥವಾ ಗ್ರಾಮ ಠಾಣದ ಹೊರಗೆ ಇದೆಯೇ ಎಂಬುದರ ಬಗ್ಗೆ ವರದಿಯನ್ನು ದಿಶಾಂಕ್ ಆಪ್ ನೀಡುವುದು, ಭೂಮಾಪಕರು ಗಳ ವರದಿಯನ್ವಯ ದಿಶಾಂಕ್ ಆಪ್ ನಿಂದ ಇ-ಸ್ವತ್ತು ತಂತ್ರಾಂಶಕ್ಕೆ ಮಾಹಿತಿಯು ಸಲ್ಲಿಕೆಯಾಗುವುದು.

ಗ್ರಾಮ ಪಂಚಾಯತಿಗಳಿಂದ ಸಮೀಕ್ಷೆ ಮಾಡಿ ದೃಢೀಕರಿಸಿದ ಶೇ.10% ರಷ್ಟು ಆಸ್ತಿಗಳನ್ನು ಸಂಬಂಧಪಟ್ಟ ಭೂಮಾಪಕರು ಅಥವಾ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಪರಿಶೀಲಿಸಲಾಗುವುದು.

**WorkFlow**

Citizen Application in eSwathu s/w wherein citizen claims his property is in Gramathana

↓

**Application flows to GP Secretary/SDAA login in Dishaank Mobile App & in that goes to PENDING Folder**

↓

GP Secretary/SDAA is forced to do disposal in FIFO based on date of application. However GP Secretary/SDAA can visit spot of properties providing in hi login in any serial order.

↓

GP Secretary/SDAA visits spot of property & captures GPS of each vertex of the property and also one GPS standing inside the property. One photograph of property is also captured standing in front of the property and PDOs has to approve the GPS and Photograph of captured by GP Secretary/SDAA in Dishaank Mobile App

↓

Based on the GPS of the property, it goes into one of the following three buckets- 1) Inside Gramathana 2) Outside Gramathana 3) Border Property

↓

For Properties belonging to (1) Inside Gramathana or (2) Outside Gramathana, categories, the software generates report automatically and send it eSwathu and for (3) Border Properties, the application will go to surveyor Login who shall do spot visit & submit -this report-ON DISHAANK itself.

↓

The surveyor, for Border Properties, do the GPS capture again along with photograph just as PDO & submit his clear report or print on whether the property is INSIDE or OUTSIDE Gramathana via DISHAANK App. As per surveyor report, the reply to eSwathu is sent by DISHAANK App.

10% of workdone by PDO on DISHANK APP is verified by surveyor & / or EO TPS as the same application flows to surveyor / Eo TPs for verification.

## ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ/64/ಇ-ಆಡಳಿತ/2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:19.08.2023

## ಜಂಟಿ ಸುತ್ತೋಲೆ

**ವಿಷಯ:** ಗ್ರಾಮಠಾಣದಲ್ಲಿ ತೆರಿಗೆ ನಿರ್ಧರಣೆ ಪಟ್ಟಿಯಾಗಿರುವ ಮತ್ತು ತೆರಿಗೆ ನಿರ್ಧರಣೆ ಪಟ್ಟಿ ಕೋರಿ ಬರುವ ಆಸ್ತಿಗಳನ್ನು ದಿಶಾಂಕ್ ಪ್ಲಸ್ ಮೂಲಕ ಅಳತೆ ಮಾಡಿ ನಕ್ಷೆ ತಯಾರಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ/553/ಗ್ರಾಪಂಅ/2012, ದಿನಾಂಕ:28.12.2012
2. ಸರ್ಕಾರದ ಸುತ್ತೋಲೆ ಸಂಖ್ಯೆ:ಕಂ.ಇ/146/ಎ ಎಸ್ ಡಿ/2013, ದಿನಾಂಕ:14.06.2013
3. ಸರ್ಕಾರದ ಜಂಟಿ ಸುತ್ತೋಲೆ ಸಂಖ್ಯೆ: ಆರ್ ಡಿ/430/ಎಲ್ ಜಿ ಪಿ/2013, ದಿನಾಂಕ: 25.08.2014

*****

ನಗರ ಪ್ರದೇಶದ ಮತ್ತು ಗ್ರಾಮಗಳಲ್ಲಿ ಆಸ್ತಿಗಳ ಹಕ್ಕು ದಾಖಲೆಗಳನ್ನು ಅಳತೆ ಮಾಡಿ ನಿರ್ವಹಿಸುವ ಕಾರ್ಯವ್ಯಾಪ್ತಿಯು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಸೆಕ್ಷನ್ 148 ಮತ್ತು ಭೂಕಂದಾಯ ನಿಯಮಾವಳಿ 1996 ರ ನಿಯಮ 82 ಗಳ ಮೇರೆಗೆ ಭೂಮಾಪನ ಇಲಾಖೆಯ ವ್ಯಾಪ್ತಿಗೆ ಒಳಪಡುತ್ತದೆ.

ಗ್ರಾಮ ಪಂಚಾಯ್ತಿಯು ದಾಖಲೆಗಳಲ್ಲಿ ತೆರಿಗೆ ನಿರ್ಧರಣೆ ಪಟ್ಟಿಯಲ್ಲಿರುವ ಮತ್ತು ತೆರಿಗೆ ನಿರ್ಧರಣೆ ಪಟ್ಟಿ ಕೋರಿ ಬರುವ ದಾಖಲೆಗಳನ್ನು ಕಾಲೋಚಿತಗೊಳಿಸಲು, ವಹಿವಾಟಿಗೆ ಒಳಪಟ್ಟ ಆಸ್ತಿಯು ಭೂಮಾಪನ ಇಲಾಖೆಯ ಮೂಲಕ ಗ್ರಾಮ ಠಾಣದ ಒಳಗೆ ಬರುತ್ತದೆ ಇಲ್ಲವೆ ಎಂಬುದನ್ನು ಖಾತರಿಪಡಿಸಿಕೊಂಡು ಇ-ಸ್ವತ್ತು ತಂತ್ರಾಂಶದ ಮೂಲಕ ಗ್ರಾಮಠಾಣ ಪ್ರದೇಶದ ಒಳಗಿನ ಆಸ್ತಿಗಳಿಗೆ ನಮೂನೆ-9 ಮತ್ತು 11ಎ ಮತ್ತು ದಿನಾಂಕ:14.06.2013 ರ ಪೂರ್ವದಲ್ಲಿ ಇದ್ದ ಕ್ರಮಬದ್ಧವಲ್ಲದ ಆಸ್ತಿಗಳಿಗೂ ಸಹ ನಮೂನೆ-11 ಬಿ ನೀಡಲು ಉಲ್ಲೇಖ 3 ರ ಜಂಟಿ ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

ಪ್ರಸುತ್ತ ಸಾರ್ವಜನಿಕರ ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ-9 ಮತ್ತು 11ಎ ಮತ್ತು ನಮೂನೆ-11 ಬಿ ಪಡೆಯಲು ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿ ಅರ್ಜಿ ಸಲ್ಲಿಸುತ್ತಿದ್ದಾರೆ. ಗ್ರಾಮ ಪಂಚಾಯತಿ ರವರು ವಹಿವಾಟಿಗೆ ಒಳಪಟ್ಟ ಸದರಿ ಆಸ್ತಿಯು ಗ್ರಾಮ ಠಾಣದ ಒಳಗೆ ಬರುತ್ತದೆ ಇಲ್ಲವೆ ಎಂಬುದನ್ನು ಖಾತರಿಪಡಿಸಿಕೊಳ್ಳಲು, ಮೋಜಿಣಿ ತಂತ್ರಾಂಶಕ್ಕೆ ಆನ್-ಲೈನ್ ಅರ್ಜಿಯನ್ನು ಸಲ್ಲಿಸುತ್ತಾರೆ. ತದನಂತರ ಅರ್ಜಿದಾರರು AJSK (ನಾಡಕಛೇರಿ) ಕೇಂದ್ರಗಳಿಗೆ ಭೇಟಿ ನೀಡಿ ಅರ್ಜಿ ಶುಲ್ಕ ರೂ. 800/- ಪಾವತಿಸಬೇಕಾಗಿರುತ್ತದೆ, ಅರ್ಜಿದಾರರು ಅರ್ಜಿ ಶುಲ್ಕ ರೂ. 800/- ಪಾವತಿಸಿದ ನಂತರ ಭೂಮಾಪಕರು ಸ್ಥಳಕ್ಕೆ ಭೇಟಿ ನೀಡಿ ಅಳತೆ ಮಾಡಿ ಸದರಿ ಆಸ್ತಿಯು ಗ್ರಾಮಠಾಣದ ಒಳಗೆ ಅಥವಾ ಹೊರಗೆ ಬರುವ ಬಗ್ಗೆ ದಾಖಲೆಗಳೊಂದಿಗೆ ಮಾಹಿತಿಯನ್ನು ಮೋಜಿಣಿ ತಂತ್ರಾಂಶದ ಮೂಲಕ ಗ್ರಾಮ ಪಂಚಾಯತಿಗೆ ಸಲ್ಲಿಸುತ್ತಾರೆ.

ಸದರಿ ಆಸ್ತಿಯು ಗ್ರಾಮ ಠಾಣದ ವ್ಯಾಪ್ತಿಯ ಒಳಗೆ ಬಂದಲ್ಲಿ ಕರ್ನಾಟಕ ಭೂಕಂದಾಯ ಅಧಿನಿಯಮ **1964** ರ ಸೆಕ್ಷನ್ **95** ರನ್ವಯ ಕೃಷಿಯಿಂದ ಕೃಷಿಯೇತರಕ್ಕೆ ಪರಿವರ್ತನೆ ಮಾಡುವ ಅವಶ್ಯಕತೆಯಿರುವುದಿಲ್ಲ. ಸದರಿ ಆಸ್ತಿಯು ಗ್ರಾಮ ಠಾಣದ ವ್ಯಾಪ್ತಿಯ ಹೊರಗಡೆ ಬಂದಲ್ಲಿ ಕೃಷಿಯಿಂದ ಕೃಷಿಯೇತರಕ್ಕೆ ಪರಿವರ್ತನೆ ಆದೇಶ ಕಡ್ಡಾಯವಾಗಿದೆ.

ಭೂಮಾಪಕರು ಸ್ಥಳಕ್ಕೆ ಭೇಟಿ ನೀಡಿ ಅಳತೆ ಮಾಡಿ ಸದರಿ ಆಸ್ತಿಯು ಗ್ರಾಮಠಾಣದ ಒಳಗೆ ಅಥವಾ ಹೊರಗೆ ಬರುವ ದಾಖಲೆಯ ಆಧಾರದ ಮೇಲೆ ನಮೂನೆ-**9** ಮತ್ತು **11**ಎ ಅಥವಾ ನಮೂನೆ-**11** ಬಿ ಯನ್ನು ಅರ್ಜಿದಾರರಿಗೆ ಒದಗಿಸಲಾಗುತ್ತಿದೆ. ಸದರಿ ಪ್ರಕ್ರಿಯೆಯಿಂದ ಹಲವಾರು ಆಡಳಿತಾತ್ಮಕ ಸಮಸ್ಯೆಗಳು ಉಂಟಾಗುತ್ತಿವೆ. ಪ್ರಸ್ತುತ ಅನುಸರಿಸುತ್ತಿರುವ ಪ್ರಕ್ರಿಯೆಯಲ್ಲಿ ಇ-ಸ್ವತ್ತು ತಂತ್ರಾಂಶದಲ್ಲಿ ಬರುವ ಪ್ರತಿಯೊಂದು ಅರ್ಜಿಗೆ ಭೂಮಾಪಕರು ಭೌತಿಕವಾಗಿ ಸ್ಥಳಕ್ಕೆ ಭೇಟಿ ನೀಡಿ, ಸಮೀಕ್ಷೆ ಮಾಡಿ ಹಸ್ತಚಾಲಿತ ವರದಿಯನ್ನು ಸಲ್ಲಿಸುತ್ತಿದ್ದಾರೆ. ಹಾಗೂ ಹಲವಾರು ಬಾರಿ ಅರ್ಜಿದಾರರು **AJSK** (**ನಾಡಕಛೇರಿ**) **ಕೇಂದ್ರಗಳಿಗೆ ಭೇಟಿ ನೀಡಿ ಅರ್ಜಿ ಶುಲ್ಕ ರೂ. 800/- ಪಾವತಿಸಿದ್ದೇ ಅರ್ಜಿಗಳು ಭೂಮಾಪಕರು ಹಂತದಲ್ಲಿ** ಬಾಕಿ ಇರುತ್ತವೆ ಹಾಗೂ ಕೆಲವೊಂದು ಸಂದರ್ಭದಲ್ಲಿ ಅರ್ಜಿದಾರರು **AJSK** (ನಾಡಕಛೇರಿ) ಕೇಂದ್ರಗಳಿಗೆ ಭೇಟಿ ನೀಡಿ ಅರ್ಜಿ **ಶುಲ್ಕ ರೂ. 800/-** ಪಾವತಿಸಿದರೂ ಭೂಮಾಪನ ಇಲಾಖೆಯು ಮಾನವ ಸಂಪನ್ಮೂಲದ **ಕೊರತೆಯಿಂದಾಗಿ** ಅರ್ಜಿಗಳು ಭೂಮಾಪಕರು ಹಂತದಲ್ಲಿ ಬಾಕಿ ಇರುತ್ತವೆ. ಇದರಿಂದಾಗಿ ಗ್ರಾಮ ಪಂಚಾಯತಿಗಳಲ್ಲಿ ಇ-ಸ್ವತ್ತು ತಂತ್ರಾಂಶದ ಮೂಲಕ ನಿಗಧಿತ ಸಮಯದೊಳಗೆ ನಮೂನೆ-**9** ಮತ್ತು 11ಎ ಮತ್ತು ನಮೂನೆ-11 -ಬಿ ವಿತರಿಸುವ ಪ್ರಗತಿ ಕುಂಠಿತವಾಗಿದೆ.

ಸದರಿ ಪ್ರಕ್ರಿಯೆಯನ್ನು ಸರಳೀಕರಣಗೊಳಿಸಿ, ಸಾರ್ವಜನಿಕರಿಗೆ ನಿಗಧಿತ ಸಮಯದೊಳಗೆ ಸೇವೆಯನ್ನು ಒದಗಿಸುವ ಅವಶ್ಯಕತೆಯಿರುತ್ತದೆ. ಆದುದರಿಂದ ಸಾರ್ವಜನಿಕರ ಆಸ್ತಿಯು ಗ್ರಾಮಠಾಣದ ಒಳಗೆ ಅಥವಾ ಹೊರಗೆ ಬರುವ ಬಗ್ಗೆ ಅಳತೆ ಮಾಡಿಸುವ ಪ್ರಕ್ರಿಯೆಯನ್ನು ದಿಶಾಂಕ್ ಆ್ಯಪ್ ಮೂಲಕ ನಿರ್ವಹಿಸಲು ಕ್ರಮಕೈಗೊಳ್ಳಲು ಸರ್ಕಾರವು ತೀರ್ಮಾನಿಸಿದೆ.

ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರರವರು ಅಭಿವೃದ್ಧಿ ಪಡಿಸಿರುವ ದಿಶಾಂಕ್ ಆ್ಯಪ್ ಮೂಲಕ ಡಿಜಿಟಲೀಕರಣಗೊಳಿಸಿದ ಮತ್ತು ಜಿಯೋ ಉಲ್ಲೇಖಿತ ನಕ್ಷೆಗಳನ್ನು ಬಳಸಲು ಉಪಯುಕ್ತವಾಗಿದೆ. ದಿಶಾಂಕ್ ಆ್ಯಪ್ ಮೂಲಕ ಗ್ರಾಮ ಪಂಚಾಯತಿಯ ಅಧಿಕಾರಿಗಳು ಆಸ್ತಿಗಳು ಗ್ರಾಮಠಾಣದ ಒಳಗೆ ಅಥವಾ ಹೊರಗೆ ಬರುವ ವಿವರಗಳು ಲಭ್ಯವಾಗುವುದು. ಮೊಬೈಲ್ ಫೋನ್ ಗಳ ಜಿಪಿಎಸ್‌ನಲ್ಲಿ ಅಂತರ್ಗತ ರೆಸಲ್ಯೂಶನ್ ದೋಷ ಇರುವುದರಿಂದ, ಗ್ರಾಮ ಠಾಣ ಗಡಿಯಲ್ಲಿ ಬರುವ ಮತ್ತು ಗ್ರಾಮ ಠಾಣ ಗಡಿಯ ಬಫರ್ ವಲಯ ಸುತ್ತಲೂ ಬರುವ ಆಸ್ತಿಗಳನ್ನು ಭೂಮಾಪಕರು ಭೌತಿಕವಾಗಿ ಸ್ಥಳಕ್ಕೆ ಭೇಟಿ ನೀಡಿ, ಸಮೀಕ್ಷೆ ಮಾಡಲಾಗುವುದು. ಸದರಿ ಪ್ರಕ್ರಿಯೆಯನ್ನು ಅನುಸರಿಸಿದಲ್ಲಿ ಶೇ.**80%** ಗಿಂತ ಹೆಚ್ಚು ಆಸ್ತಿಗಳಿಗೆ ಭೂಮಾಪಕರು ಭೌತಿಕವಾಗಿ ಸಮೀಕ್ಷೆ ಮಾಡದೇ, ಗ್ರಾಮಠಾಣದ ಒಳಗೆ ಅಥವಾ ಹೊರಗೆ ಬರುವ ಮಾಹಿತಿಯನ್ನು ಪಡೆಯಬಹುದಾಗಿದೆ.

ಈ ಕೆಳಗೆ ವಿವರಿಸಿರುವ ಮಾರ್ಗಸೂಚಿಯನ್ವಯ ಗ್ರಾಮ ಪಂಚಾಯತಿಗಳಲ್ಲಿ ಅರ್ಜಿ ಸಲ್ಲಿಸಿ ದಾಖಲೆಗಳನ್ನು ಪಡೆಯುವುದು.

1. ಆಸ್ತಿಗಳು ಗ್ರಾಮಠಾಣ ವ್ಯಾಪ್ತಿಯೊಳಗೆ ಇದೆಯೇ ಎಂಬುದರ ಬಗ್ಗೆ ದಿಶಾಂಕ್ ಆ್ಯಪ್‌ನ ಮೂಲಕ ಪರಿಶೀಲಿಸಲಾಗುವುದು
2. ಸಾರ್ವಜನಿಕರು ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ-**9** ಮತ್ತು **11**ಎ ಮತ್ತು ನಮೂನೆ-**11** ಬಿ ಪಡೆಯಲು ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿ ಅರ್ಜಿ ಸಲ್ಲಿಸಿ, ಒಂದುವೇಳೆ ಆಸ್ತಿಯು ಗ್ರಾಮ ಠಾಣದ ಒಳಗೆ ಬರುತ್ತದೆ

ಇಲ್ಲವೆ ಎಂಬುದನ್ನು ಖಾತರಿಪಡಿಸಿಕೊಳ್ಳಲು ಅರ್ಜಿಯನ್ನು ನಿಗದಿತ ಅರ್ಜಿ ಶುಲ್ಕದೊಂದಿಗೆ ಗ್ರಾಮ ಪಂಚಾಯತಿಯಲ್ಲೇ ಸಲ್ಲಿಸಬೇಕು.

3. ಅರ್ಜಿದಾರರ ಹೆಸರು, ಫೋಟೋ ಐಡಿ ಸಂ. ಮತ್ತು ಫೋಟೋ ಐಡಿ ವಿವರ, ಅರ್ಜಿದಾರರ ವಿಳಾಸ, ಆಸ್ತಿಯ ಚಕ್ಕುಬಂದಿ, ಆಸ್ತಿಯ ವಿಸ್ತೀರ್ಣ ಮತ್ತು ನೋಟೀಸು ನೀಡಬೇಕಾದವರುಗಳ ವಿವರವನ್ನು ಅರ್ಜಿದಾರರಿಂದ ಕೇಳಿ ಗ್ರಾಮ ಪಂಚಾಯತಿರವರು ಇ-ಸ್ವತ್ತು ತಂತ್ರಾಂಶದಲ್ಲಿ ದಾಖಲಿಸಿಕೊಳ್ಳುವುದು.

4. ಇ-ಸ್ವತ್ತು ತಂತ್ರಾಂಶದಲ್ಲಿ ದಾಖಲಿಸಿದ ವಿವರಗಳನ್ನು ಅರ್ಜಿದಾರರಿಗೆ ಓದಿ ಹೇಳಬೇಕು ಮತ್ತು ಅರ್ಜಿದಾರರು ಯಾವುದೇ ಬದಲಾವಣೆಗಳನ್ನು ಸೂಚಿಸಿದರೆ ಅವುಗಳನ್ನು ದಾಖಲಿಸುವುದು ಹಾಗೂ ಅರ್ಜಿದಾರರಿಂದ ಗ್ರಾಮ ಪಂಚಾಯತಿಗಳಲ್ಲೇ ನಿಗದಿತ ಅರ್ಜಿ ಶುಲ್ಕವನ್ನು ಪಡೆಯುವುದು.

5. ಈ ಪ್ರಕ್ರಿಯೆಯಲ್ಲಿ ಅನುಸರಿಸಲು ಗ್ರಾಮ ಪಂಚಾಯತಿಯಲ್ಲಿ ಮೇಕರ್ ಮತ್ತು ಚೆಕರ್ ಪರಿಕಲ್ಪನೆಯನ್ನು ಅಳವಡಿಸಲಾಗಿದೆ. ಗ್ರಾಮ ಪಂಚಾಯತಿಯ ದ್ವಿತೀಯ ದರ್ಜೆ ಲೆಕ್ಕ ಸಹಾಯಕರನ್ನು ಅಥವಾ ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಇಲ್ಲದೇ ಇರುವ ಗ್ರಾಮ ಪಂಚಾಯತಿಗಳಲ್ಲಿ ಗ್ರಾಮ ಪಂಚಾಯತಿಯ ಕಾರ್ಯದರ್ಶಿಗಳನ್ನು ಮೇಕರ್ ಆಗಿ ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಚೆಕರ್ ಆಗಿ ಕಾರ್ಯನಿರ್ವಹಿಸುವುದು.

6. ಅರ್ಜಿದಾರರಿಂದ ಪಡೆದ ಆಸ್ತಿಯ ವಿಸ್ತೀರ್ಣ ಮತ್ತು ಚಕ್ಕುಬಂದಿಯ ಆಧಾರದ ಮೇಲೆ ಗ್ರಾಮ ಪಂಚಾಯತಿಯ ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಭೌತಿಕವಾಗಿ ಸ್ಥಳಕ್ಕೆ ಭೇಟಿ ನೀಡಿ ದಿಶಾಂಕ್ ಆಪ್ ಮೂಲಕ, ಆಸ್ತಿ/ಸ್ವತ್ತಿನ ಪ್ರತಿಯೊಂದು ಮೂಲೆಯ ಜಿ.ಪಿ.ಎಸ್ ಅನ್ನು ಮತ್ತು ಸದರಿ ಆಸ್ತಿ/ಸ್ವತ್ತಿನ ಛಾಯಾಚಿತ್ರವನ್ನು ಸೆರೆಹಿಡಿಯುವುದು. ಗ್ರಾಮ ಪಂಚಾಯತಿಯ ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಸೆರೆಹಿಡಿದ ಆಸ್ತಿ/ಸ್ವತ್ತಿನ ಪ್ರತಿಯೊಂದು ಮೂಲೆಯ ಜಿ.ಪಿ.ಎಸ್ ಅನ್ನು ಮತ್ತು ಛಾಯಾಚಿತ್ರವನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ದಿಶಾಂಕ್ ಆ್ಯಪ್ ಲಾಗಿನ್ ಮೂಲಕ ಪರಿಶೀಲಿಸಿ, ದೃಢೀಕರಿಸುವುದು. ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಭೌತಿಕವಾಗಿ ಸ್ಥಳಕ್ಕೆ ಭೇಟಿ ನೀಡುವ ಅವಶ್ಯಕತೆಯಿರುವುದಿಲ್ಲ.

7. ಗ್ರಾಮ ಪಂಚಾಯತಿಯ ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಸೆರೆಹಿಡಿದ ಆಸ್ತಿ/ಸ್ವತ್ತಿನ ಜಿ.ಪಿ.ಎಸ್ ಆಧಾರದ ಮೇಲೆ ಸದರಿ ಆಸ್ತಿಯು ಗ್ರಾಮ ಠಾಣದ ಒಳಗೆ ಅಥವಾ ಗ್ರಾಮ ಠಾಣದ ಹೊರಗೆ ಅಥವಾ ಗ್ರಾಮ ಠಾಣದ ಗಡಿಯಲ್ಲಿ ಬರುವುದೆಂಬ ಮಾಹಿತಿಯು ದಿಶಾಂಕ್ ಆ್ಯಪ್ ನಲ್ಲಿ ಲಭ್ಯವಾಗುವುದು.

8. ಒಂದು ವೇಳೆ ಆಸ್ತಿ/ಸ್ವತ್ತು ಗ್ರಾಮ ಠಾಣದ ಒಳಗೆ ಅಥವಾ ಗ್ರಾಮ ಠಾಣದ ಹೊರಗೆ ಬಂದಲ್ಲಿ, ದಿಶಾಂಕ್ ಆ್ಯಪ್ ನಲ್ಲೇ ವರದಿ ಸೃಜನೆಯಾಗಿ ಇ-ಸ್ವತ್ತು ತಂತ್ರಾಂಶಕ್ಕೆ ಕಳುಹಿಸಲಾಗುವುದು.

9. ಒಂದು ವೇಳೆ ಆಸ್ತಿ/ಸ್ವತ್ತು ಗ್ರಾಮ ಠಾಣದ ಗಡಿಯಲ್ಲಿ ಅಥವಾ ಗ್ರಾಮ ಠಾಣ ಗಡಿಯ ಬಫರ್ ವಲಯ ಅಂದರೇ ಗ್ರಾಮ ಠಾಣ ಗಡಿಯಿಂದ 20 ಮೀಟರ್ ಅಂತರದೊಳಗೆ ಬಂದಲ್ಲಿ, ಅಂತಹ ಅರ್ಜಿಯನ್ನು ಇ-ಸ್ವತ್ತು ತಂತ್ರಾಂಶದ ಮೂಲಕ ಮೋಜಿಣಿ ತಂತ್ರಾಂಶಕ್ಕೆ ವರ್ಗಾವಣೆ ಮಾಡಲಾಗುವುದು. ಸದರಿ ಅರ್ಜಿಗಳಿಗೆ ಸಂಬಂಧಿಸಿದಂತೆ, ಭೂಮಾಪನ ಇಲಾಖೆಯ ಭೂಮಾಪಕರು ಭೌತಿಕವಾಗಿ ಸ್ಥಳಕ್ಕೆ ಭೇಟಿ ನೀಡಿ ಸಮೀಕ್ಷೆ ಮಾಡಿ, ನಕ್ಷೆಗಳೊಂದಿಗೆ ಹಸ್ತಚಾಲಿತ ವರದಿಯನ್ನು ಮೋಜಿಣಿ ತಂತ್ರಾಂಶದಿಂದ ಇ-ಸ್ವತ್ತು ತಂತ್ರಾಂಶಕ್ಕೆ ಸಲ್ಲಿಸುವ ಪ್ರಕ್ರಿಯೆಯನ್ನು ಅನುಸರಿಸುವುದು.

10. ಗ್ರಾಮ ಪಂಚಾಯತಿಯ ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ದಿಶಾಂಕ್ ಆಪ್ ಬಳಸಿ, ಆಸ್ತಿ/ಸ್ವತ್ತುಗಳನ್ನು ಅಳತೆ ಮಾಡುವ ಸಂದರ್ಭದಲ್ಲಿ ಅರ್ಜಿದಾರರಿಂದ ಪಡೆದ ಆಸ್ತಿಯ ವಿಸ್ತೀರ್ಣ ಮತ್ತು ಚಕ್ಕುಬಂದಿಯಲ್ಲಿ ವ್ಯತ್ಯಾಸ ಬಂದಲ್ಲಿ, ದಿಶಾಂಕ್ ಆ್ಯಪ್ ಮೂಲಕ ವರದಿಯನ್ನು ಸೃಜಿಸಿ, ಅರ್ಜಿದಾರರ ಅವಗಾಹನೆಗೆ ಸಲ್ಲಿಸಿ,

ದಿಶಾಂಕ್ ಆ್ಯಪ್ ನಲ್ಲಿ ನಮೂದಿಸಿದ ಆಸ್ತಿಯ ವಿಸ್ತೀರ್ಣ ಮತ್ತು ಚಕ್ಕುಬಂದಿಯನ್ನು ಸರಿಯಾಗಿದೆ ಎಂದು ಒಪ್ಪಿದಲ್ಲಿ, ಸದರಿ ಆಸ್ತಿಯು ಗ್ರಾಮ ಠಾಣದ ಒಳಗೆ ಅಥವಾ ಗ್ರಾಮ ಠಾಣದ ಹೊರಗೆ ಬರುವುದೆಂಬ ಮಾಹಿತಿಯನ್ನು ದಿಶಾಂಕ್ ಆ್ಯಪ್ ನಲ್ಲಿ ಸೆರೆಹಿಡಿಯುವುದು.

11. ಒಂದು ವೇಳೆ ದಿಶಾಂಕ್ ಆ್ಯಪ್ ನಲ್ಲಿ ನಮೂದಿಸಿದ ಆಸ್ತಿಯ ವಿಸ್ತೀರ್ಣ ಮತ್ತು ಚಕ್ಕುಬಂದಿಯನ್ನು ಅರ್ಜಿದಾರರು ಒಪ್ಪದೇ ಇದ್ದಲ್ಲಿ, ಅಂತಹ ಅರ್ಜಿಗಳಿಗೆ ಸ್ವೀಕೃತಿಯನ್ನು ಸೃಷ್ಟಿಸಿ, ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಇ-ಸ್ವತ್ತು ತಂತ್ರಾಂಶದ ಮೂಲಕ ಮೋಜಿಣಿ ತಂತ್ರಾಂಶಕ್ಕೆ ವರ್ಗಾವಣೆ ಮಾಡಲಾಗುವುದು. ಸದರಿ ಅರ್ಜಿಗಳಿಗೆ ಸಂಬಂಧಿಸಿದಂತೆ, ಭೂಮಾಪನ ಇಲಾಖೆಯ ಭೂಮಾಪಕರು ಭೌತಿಕವಾಗಿ ಸ್ಥಳಕ್ಕೆ ಭೇಟಿ ನೀಡಿ ಸಮೀಕ್ಷೆ ಮಾಡಿ, ನಕ್ಷೆಗಳೊಂದಿಗೆ ಹಸ್ತಚಾಲಿತ ವರದಿಯನ್ನು ಮೋಜಿಣಿ ತಂತ್ರಾಂಶದಿಂದ ಇ-ಸ್ವತ್ತು ತಂತ್ರಾಂಶಕ್ಕೆ ಸಲ್ಲಿಸುವ ಪ್ರಕ್ರಿಯೆಯನ್ನು ಅನುಸರಿಸುವುದು.

12. ಗ್ರಾಮ ಪಂಚಾಯತಿಗಳು ಆಸ್ತಿಗಳಿಗೆ ದಿಶಾಂಕ್ ಆ್ಯಪ್ ಮೂಲಕ ಸಮೀಕ್ಷೆಯನ್ನು ಕೈಗೊಂಡ ನಂತರ, ಗ್ರಾಮಠಾಣಾದ ಒಳಗೆ ಅಥವಾ ಗ್ರಾಮಠಾಣಾದ ಹೊರಗೆ ಬರುವ ಆಸ್ತಿಗಳಿಗೆ ಅರ್ಜಿದಾರರಿಂದ ಪ್ರತಿ ಅರ್ಜಿಗೆ ರೂ. 200/- ರಂತೆ ಅರ್ಜಿ ಶುಲ್ಕವನ್ನು ಸ್ವೀಕರಿಸುವುದು.

13. ಗ್ರಾಮ ಪಂಚಾಯತಿಗಳು ಆಸ್ತಿಗಳಿಗೆ ದಿಶಾಂಕ್ ಆ್ಯಪ್ ಮೂಲಕ ಸಮೀಕ್ಷೆಯನ್ನು ಕೈಗೊಂಡ ನಂತರ, ಗ್ರಾಮ ಠಾಣದ ಗಡಿಯಲ್ಲಿ ಅಥವಾ ಗ್ರಾಮ ಠಾಣ ಗಡಿಯ ಬಫರ್ ವಲಯ ಅಂದರೇ ಗ್ರಾಮ ಠಾಣ ಗಡಿಯಿಂದ 20 ಮೀಟರ್ ಅಂತರದೊಳಗೆ ಬರುವ ಆಸ್ತಿಗಳಿಗೆ ಮತ್ತು ದಿಶಾಂಕ್ ಆ್ಯಪ್ ನಲ್ಲಿ ನಮೂದಿಸಿದ ಆಸ್ತಿಯ ವಿಸ್ತೀರ್ಣ ಮತ್ತು ಚಕ್ಕುಬಂದಿಯನ್ನು ಅರ್ಜಿದಾರರು ಒಪ್ಪದೇ ಇರುವ ಸಂದರ್ಭದಲ್ಲಿ, ಅಂತಹ ಆಸ್ತಿಗಳಿಗೆ ಗ್ರಾಮ ಪಂಚಾಯತಿಗಳು ಪ್ರತಿ ಅರ್ಜಿಗೆ ರೂ. 800/- ರಂತೆ ಅರ್ಜಿ ಶುಲ್ಕವನ್ನು ಸ್ವೀಕರಿಸುವುದು. ಸ್ವೀಕರಿಸಿದ ಅರ್ಜಿ ಶುಲ್ಕವನ್ನು Wallet ವ್ಯವಸ್ಥೆಯ ಮೂಲಕ ಭೂಮಾಪನ ಮತ್ತು ಭೂದಾಖಲೆಗಳ ಇಲಾಖೆಗೆ ವರ್ಗಾವಣೆ ಮಾಡುವುದು.

14. ನಿಗಧಿತ ಅರ್ಜಿ ಶುಲ್ಕವನ್ನು ಅರ್ಜಿದಾರರಿಂದ ಪಡೆದ ನಂತರವೇ, ಇ-ಸ್ವತ್ತು ತಂತ್ರಾಂಶದ ಮೂಲಕ ಅರ್ಜಿಗಳನ್ನು ಅನುಮೋದಿಸಿ, ನಮೂನೆಗಳನ್ನು ಮುದ್ರಿಸುವುದು.

(ಉಮಾ ಮಹದೇವನ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ(ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

(ರಾಜೇಂದರ್ ಕುಮಾರ್ ಕಠಾರಿಯಾ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಕಂದಾಯ ಇಲಾಖೆ

ಇವರಿಗೆ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
2. ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು.
3. ಆಯುಕ್ತರು, ಭೂಮಾಪನ ಮತ್ತು ಭೂದಾಖಲೆಗಳ ಇಲಾಖೆ.
4. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
5. ನಿರ್ದೇಶಕರು, ಪಂಚಾಯತ್ ರಾಜ್-1, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

6. ಎಲ್ಲಾ ಪ್ರಾದೇಶಿಕ ಆಯುಕ್ತರು
7. ಎಲ್ಲಾ ಉಪ ವಿಭಾಗಾಧಿಕಾರಿಗಳು ಮತ್ತು ಎಲ್ಲಾ ತಹಶೀಲ್ದಾರ್ ಗಳಿಗೆ ಜಿಲ್ಲಾಧಿಕಾರಿಗಳ ಮುಖಾಂತರ
8. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ.
9. ಎಲ್ಲಾ ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.